ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 1 ಸೋಮವಾರ 2025

46

ಸಂಪುಟ: 46 | ಸಂಚಿಕೆ: 223 | ಪುಟಗಳು: 10

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

42 ದಿನದಲ್ಲಿ 22 ಹುಲಿಗಳ ಸೆರೆ

• ಅದರಲ್ಲಿ 12 ಮರಿಗಳ ರಕ್ಷಣೆ • ಇನ್ನು ಕೆಲವೆಡೆ ಮುಂದುವರೆದ ಕೂಂಬಿಂಗ್ ಕಾರ್ಯಾಚರಣೆ




ಸಂಗ್ರಹ ಚಿತ್ರ

ಮೈಸೂರು, ನ.30(ಎಂಟಿವೈ)– ಮೈಸೂರು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಹುಲಿ ಉಪಟಳ ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ಅ.12ರಿಂದ ನ.30ರವರೆಗೆ 12 ಪುಟ್ಟ ಮರಿ ಸೇರಿದಂತೆ ಒಟ್ಟು 22 ಹುಲಿಗಳನ್ನು ಸೆರೆ ಹಿಡಿದಿರುವ ಅರಣ್ಯ ಇಲಾಖೆ, ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಮುಂದಾಗಿದೆ.

ಪ್ರತಿ ವರ್ಷ ಸೆಪ್ಟಂಬರ್‌ನಿಂದ ಡಿಸೆಂಬರ್‌ವರೆಗೆ ಹುಲಿಗಳು ತನ್ನ ಮರಿಗಳಿಗೆ ಜನ್ಮ ನೀಡಿ, ಅರಣ್ಯದಂಚಿನ ಹಳ್ಳ–ಕೊಳ್ಳಗಳಲ್ಲಿ ಸುರಕ್ಷಿತ ಸ್ಥಾನಗಳಲ್ಲಿ ನೆಲೆ ಕಂಡುಕೊಂಡು ವಾಸಿಸುವ ಪರಿಪಾಠ ಹೊಂದಿದ್ದು, ಮರಿ ಇದ್ದಾಗ ಎದುರಾಗುವ ಜನ–ಜಾನುವಾರುಗಳ ಮೇಲೆ ದಾಳಿ ಮಾಡುವ ಮೂಲಕ ತನ್ನ ಕರುಳ ಕುಡಿಗಳ ರಕ್ಷಣೆಗೆ ಮುಂದಾಗುತ್ತವೆ. ಈ ಮೂರು ತಿಂಗಳ ಅವಧಿಯಲ್ಲಿ ಹುಲಿ ಮತ್ತು ಮಾನವ ಸಂಘರ್ಷ ಪ್ರಕರಣಗಳು ಹೆಚ್ಚಾಗಿ ವರದಿಯಾಗಲಿದ್ದು, ಈ ಬಾರಿ ಮೈಸೂರು ಭಾಗದಲ್ಲಿ ನಾಲ್ವರ ಮೇಲೆ ಹುಲಿ ದಾಳಿ ನಡೆಸಿ, ಮೂವರನ್ನು ಬಲಿ ಪಡೆದು ಕಾಡಂಚಿನ ಗ್ರಾಮಗಳ ಜನರ ನಿದ್ದೆಗೆಡಿಸಿತ್ತು.

■ 6ನೇ ಪುಟಕ್ಕೆ

ಹನಗೋಡು ಬಳಿ ನಾಲ್ಕು ಹುಲಿ ಮರಿಗಳ ರಕ್ಷಣೆ



ಹನಗೋಡು ಹೋಬಳಿ ಗೌಡನಕಟ್ಟೆ ಗ್ರಾಮದ ಬಳಿ ರಕ್ಷಿಸಲ್ಪಟ್ಟ ಹುಲಿ ಮರಿಗಳು.

ಮೈಸೂರು, ನ.30(ಎಂಟಿವೈ)– ಮೆಕ್ಕೆ ಜೋಳದ ಹೊಲದಲ್ಲಿ ಬಚ್ಚಿಟ್ಟುಕೊಂಡಿದ್ದ ನಾಲ್ಕು ಹುಲಿ ಮರಿಗಳನ್ನು ಎರಡು ದಿನದ ಬಳಿಕ ಅರಣ್ಯ ಇಲಾಖೆ ಪತ್ತೆ ಮಾಡಿ, ಸುರಕ್ಷಿತವಾಗಿ ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಹುಣಸೂರು ತಾಲೂಕಿನ ಹನಗೋಡು ಹೋಬಳಿಯ ಗೌಡನಕಟ್ಟೆ ಗ್ರಾಮದ ರವಿಕುಮಾರ್ ಎಂಬುವರ ಮೆಕ್ಕೆ ಜೋಳದ ಹೊಲದಲ್ಲಿ ಹಸಿವಿನಿಂದ ಕಂಗೆಟ್ಟು ಕಿರುಚಾಡುತ್ತಿದ್ದ 3–4 ತಿಂಗಳ ನಾಲ್ಕು ಮರಿಗಳನ್ನು ರಕ್ಷಿಸಿ, ಮೈಸೂರಿನ ಕೂರ್ಗಳ್ಳಿಯಲ್ಲಿರುವ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ಆ ಮೂಲಕ ಗೌಡನಕಟ್ಟೆ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮಗಳ ಜನರಲ್ಲಿ ಮೂಡಿದ್ದ ಆತಂಕ ನಿವಾರಣೆಯಾದಂತಾಗಿದೆ.

ಅರಣ್ಯ ಸಿಬ್ಬಂದಿಗೆ ಆತಂಕ: ನ.27 ರಂದು ಗೌಡನಕಟ್ಟೆ ಗ್ರಾಮದ ಮೆಕ್ಕೆ ಜೋಳದ ಹೊಲದಲ್ಲಿ ನಾಲ್ಕು ಮರಿಗಳೊಂದಿಗೆ ಅಡಗಿದ್ದ ತಾಯಿ ಹುಲಿ ಇಬ್ಬರು ರೈತರ ಮೇಲೆ ದಾಳಿಗೆ ಯತ್ನಿಸಿತ್ತು. ಅಲ್ಲದೆ, ಕೂಂಬಿಂಗ್ ಕಾರ್ಯಾಚರಣೆಗೆ ಆಗಮಿಸಿದ್ದ ಅರಣ್ಯ ಸಿಬ್ಬಂದಿಗಳ ಮೇಲೂ ದಾಳಿಗೆ ಯತ್ನಿಸಿತ್ತು. ಡ್ರೋನ್ ಮೂಲಕ ಪರಿಶೀಲಿಸಿದ ಬಳಿಕ ಹುಲಿಯೊಂದಿಗೆ ಮರಿಗಳಿರುವುದು ಖಚಿತವಾಗಿತ್ತು. ಅಂದು ರಾತ್ರಿಯೇ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಿದ ಅರಣ್ಯ ಇಲಾಖೆ ನ.28ರಂದು ಮುಂಜಾನೆ ತಾಯಿ ಹುಲಿಯನ್ನು ಸುರಕ್ಷಿತವಾಗಿ ಸೆರೆ ಹಿಡಿಯಲಾಗಿತ್ತು. ಆದರೆ, ಮರಿಗಳ ಸುಳಿವು ಪತ್ತೆಯಾಗಿರಲಿಲ್ಲ. ಕಳೆದ ಎರಡು ದಿನಗಳಿಂದ ಸುಮಾರು 60ಕ್ಕೂ ಹೆಚ್ಚು ಮಂದಿ

■ 6ನೇ ಪುಟಕ್ಕೆ

ಇಂದಿನಿಂದ ಚಳಿಗಾಲದ ಸಂಸತ್ ಅಧಿವೇಶನ

ನವದೆಹಲಿ, ನ.30– ಸಂಸತ್ ಚಳಿಗಾಲದ ಅಧಿವೇಶನವು ನಾಳೆ (ಡಿ.1)ಪ್ರಾರಂಭವಾಗಿ ಡಿ.19 ರಂದು ಮುಕ್ತಾಯಗೊಳ್ಳಲಿದೆ. ಈ ಬಾರಿ ಒಟ್ಟು 15 ದಿನಗಳ ಕಾಲ ಅಧಿವೇಶನ ನಡೆಯಲಿವೆ. ಸಾಮಾನ್ಯವಾಗಿ, ಸಂಸತ್ತಿನ ಅಧಿವೇಶನಗಳು 20 ದಿನಗಳ ಅಧಿವೇಶನಗಳನ್ನು ಹೊಂದಿರುತ್ತವೆ.

ಅಧಿವೇಶನಕ್ಕೂ ಮುನ್ನ ಕೇಂದ್ರ ಸರ್ಕಾರ ಕರೆದಿದ್ದ ಸರ್ವಪಕ್ಷ ಸಭೆ ಭಾನುವಾರ ನಡೆಯಿತು. ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ,

■ 6ನೇ ಪುಟಕ್ಕೆ

ಮೇಲುಕೋಟೆ ಬಳಿ ರೌಡಿಶೀಟರ್ ಭೀಕರ ಹತ್ಯೆ

ಮೇಲುಕೋಟೆ, ನ.30–ರೌಡಿಶೀಟರ್‌ವೊಬ್ಬನನ್ನು ಭೀಕರವಾಗಿ ಕೊಚ್ಚಿ ಕೊಲೆ ಮಾಡಿರುವ ಘಟನೆ ಶನಿವಾರ ತಡರಾತ್ರಿ ಮೇಲುಕೋಟೆ ಬಳಿಯ ಅಮ್ಮತ್ತಿ ಗ್ರಾಮದಲ್ಲಿ ನಡೆದಿದೆ.




ಎಲ್.ಆರ್.ಮಹೇಶ್

ಮೇಲುಕೋಟೆ ಹೋಬಳಿ ಲಕ್ಷ್ಮೀಸಾಗರ ಗ್ರಾಮದ ಎಲ್.ಆರ್.ಮಹೇಶ್ (35) ಹತ್ಯೆಗೀಡಾದವನಾಗಿದ್ದು, ರೌಡಿಶೀಟರ್ ಆಗಿದ್ದ ಈತ, ರೌಡಿ ಚಟುವಟಿಕೆಗಳಿಂದ ದೂರ ಉಳಿದಿದ್ದು, ಬೆಂಗಳೂರಿನಲ್ಲಿ ಆಟೋ ಚಾಲನೆ ಮಾಡಿ ಜೀವನ ನಡೆಸುತ್ತಿದ್ದ ಎಂದು ಹೇಳಲಾಗಿದೆ.

ಈತನ ವಿರುದ್ಧ ಕೇಸ್‌ಗಳ ವಿಚಾರವಾಗಿ ಪಾಂಡವಪುರ ನ್ಯಾಯಾಲಯಕ್ಕೆ ಆಗಿಂದಾಗ್ಗೆ ಬರುತ್ತಿದ್ದ ಎಂದು ಹೇಳಲಾಗಿದ್ದು, ಶನಿವಾರ ಬೆಂಗಳೂರಿನಿಂದ ಸ್ವಗ್ರಾಮಕ್ಕೆ ಆಗಮಿಸಿದ್ದ. ಜಕ್ಕನಹಳ್ಳಿ ವೃತ್ತದಲ್ಲಿ ನಡೆದ ಸ್ನೇಹಿತರೊಬ್ಬರ ವಿವಾಹ ಕಾರ್ಯಕ್ಕೆ ಹಾಜರಾದ ನಂತರ ಸ್ನೇಹಿತರೊಂದಿಗೆ ಮೇಲುಕೋಟೆ–ಜಕ್ಕನಹಳ್ಳಿ ಮಾರ್ಗ ಮಧ್ಯೆ ಇರುವ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಮದ್ಯಪಾನ ಮಾಡುತ್ತಿದ್ದಾಗ ಕೇಶವ ಮತ್ತು ಸಿದ್ದರಾಜು

■ 6ನೇ ಪುಟಕ್ಕೆ

ನಾನು ಗುಂಪುಗಾರಿಕೆ ಮಾಡಲ್ಲ, ಬೆನ್ನಿಗೆ ಚೂರಿ ಹಾಕಲ್ಲ: ಡಿಕೆಶಿ



ಬೆಂಗಳೂರು, ನ.30– ನನ್ನ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಮಧ್ಯೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ನಾನು ಯಾವತ್ತೂ ಗುಂಪುಗಾರಿಕೆ ಮಾಡುವುದಿಲ್ಲ. ಬೆನ್ನಿಗೆ ಚೂರಿ ಹಾಕುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರ ಪ್ರಶ್ನೆಗಳಿಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, ನಾವೆಲ್ಲರೂ ಒಟ್ಟಿಗೆ ಕೆಲಸ ಮಾಡುತ್ತಿದ್ದೇವೆ. ರಾಜ್ಯದ ಜನ ನಮ್ಮ ಮೇಲೆ ಬಹಳ ನಿರೀಕ್ಷೆ ಹೊಂದಿದ್ದು, ನಾವು ಅದಕ್ಕೆ ತಕ್ಕಂತೆ ಕೆಲಸ ಮಾಡಬೇಕು. 2028ರ ಚುನಾವಣೆ ನಮ್ಮ ಮುಂದಿನ ಗುರಿ ಎಂದರು. ನಾನು ದೆಹಲಿಗೆ ಹೋದರೆ ಒಬ್ಬನೇ ಹೋಗುತ್ತೇನೆ. 8–10 ಶಾಸಕರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವುದು ದೊಡ್ಡ ವಿಚಾರವಲ್ಲ. ನಾನು ಅಧ್ಯಕ್ಷ ಸ್ಥಾನದಲ್ಲಿ ಇರುವಾಗ ಎಲ್ಲರನ್ನೂ ಒಟ್ಟಾಗಿ ಕರೆದುಕೊಂಡು ಹೋಗಬೇಕು. 140 ಶಾಸಕರೂ ನಮ್ಮ ನಾಯಕರೇ. ಯಾರಿಗೂ ತಾರತಮ್ಯ ಮಾಡಲ್ಲ ಎಂದರು.

ಕುಮಾರಸ್ವಾಮಿ ಅವರ ಜತೆಯಲ್ಲೇ ನಾನು ನಿಷ್ಠೆಯಿಂದ ಕೆಲಸ ಮಾಡಿದ್ದೇನೆ. ಕುಮಾರಸ್ವಾಮಿ ಅದನ್ನು ಒಪ್ಪದೇ ಇರಬಹುದು, ನನ್ನ ನಿಷ್ಠೆ, ನನ್ನ ಆತ್ಮಸಾಕ್ಷಿ ಆ ದೇವರಿಗೆ ಗೊತ್ತಿದೆ. ಕುಮಾರಸ್ವಾಮಿ ಅವರ ಸರ್ಕಾರ ಉಳಿಸಲು ಕೊನೆ ದಿನದವರೆಗೂ ಎಷ್ಟು ಪ್ರಯತ್ನ ಮಾಡಿದ್ದೇನೆ ಎಂದು ಅವರ ತಂದೆಯವರಿಗೂ ಗೊತ್ತಿದೆ. ಅವರು ತಮ್ಮ ಆಸೆಗೆ ಏನಾದರೂ ಮಾತಾಡಿಕೊಳ್ಳಲಿ, ನಾನು ಬೇಸರ ಮಾಡಿಕೊಳ್ಳುವುದಿಲ್ಲ ಎಂದರು.

ಕೆ.ಸಿ. ವೇಣುಗೋಪಾಲ್ ಅವರ ಜೊತೆಗಿನ ಮಾತುಕತೆ ಬಗ್ಗೆ ಕೇಳಿದಾಗ, ನಾನು ಎಲ್ಲರ ಜೊತೆ ಚರ್ಚೆ ಮಾಡಿದ್ದು, ಏನು ಚರ್ಚೆ ಮಾಡಿದ್ದೇವೆ ಎಂದು ಮಾಧ್ಯಮಗಳ ಮುಂದೆ ಬಹಿರಂಗಪಡಿಸುವುದಿಲ್ಲ ಎಂದರು. ಶಿವಕುಮಾರ್ ಸೂಪರ್ ಸಿಎಂ ಆಗುತ್ತಿದ್ದಾರೆ ಎಂದು ಬಿಜೆಪಿ ಟೀಕೆ ಮಾಡುತ್ತಿದೆ ಎಂದರು.

ಮೈಸೂರಿಂದ ಮುರುಡೇಶ್ವರಕ್ಕೆ ಶೈಕ್ಷಣಿಕ ಪ್ರವಾಸ ಹೊರಟಿದ್ದ ಬಸ್ ಪಲ್ಟಿ

ವಿದ್ಯಾರ್ಥಿ ಸಾವು, ಶಿಕ್ಷಕಿ ಸೇರಿ ಮೂವರ ಸ್ಥಿತಿ ಗಂಭೀರ

• ತರಳಬಾಳು ಪ್ರೌಢಶಾಲೆಯಿಂದ ಶನಿವಾರ ರಾತ್ರಿ ಪ್ರವಾಸ ಹೊರಟಿದ್ದ ವಿದ್ಯಾರ್ಥಿಗಳು

• ಹೊನ್ನಾವರ ಬಳಿ ದುರಂತ



ಮೃತ ವಿದ್ಯಾರ್ಥಿ ಪವನ್

ಮೈಸೂರು, ನ.30– ಮೈಸೂರಿನಿಂದ ಮುರುಡೇಶ್ವರಕ್ಕೆ ಶೈಕ್ಷಣಿಕ ಪ್ರವಾಸ ಹೊರಟಿದ್ದ ಬಸ್ ಪಲ್ಟಿಯಾಗಿ ಓರ್ವ ವಿದ್ಯಾರ್ಥಿ ಸಾವನ್ನಪ್ಪಿದ್ದು, 38 ಮಂದಿ ಗಾಯಗೊಂಡ ಘಟನೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಬಳಿ ಭಾನುವಾರ ಸಂಭವಿಸಿದ್ದು, ಗಾಯಾಳುಗಳ ಪೈಕಿ ಮೂವರ ಸ್ಥಿತಿ ಗಂಭೀರವಾಗಿದೆ ಎಂದು ಮೂಲಗಳು ತಿಳಿಸಿವೆ.

ಮೈಸೂರಿನ ಟಿ.ಕೆ.ಲೇಔಟ್‌ನಲ್ಲಿರುವ ತರಳಬಾಳು ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿ ಅಪಘಾತದಲ್ಲಿ ಮೃತಪಟ್ಟಿದ್ದು, ಇಬ್ಬರು ವಿದ್ಯಾರ್ಥಿಗಳು, ಓರ್ವ ಶಿಕ್ಷಕಿ ಸೇರಿ ಮೂವರು ತೀವ್ರವಾಗಿ ಗಾಯಗೊಂಡು ಮಣಿಪಾಲ್ ಆಸ್ಪತ್ರೆಯಲ್ಲಿ

■ 6ನೇ ಪುಟಕ್ಕೆ

ಮೈಸೂರು ಮಿತ್ರ ಸೋಮವಾರ 1 ಡಿಸೆಂಬರ್ 2025

ಖ್ಯಾತ ಲೇಖಕಿ, ತತ್ವ ಚಿಂತಕಿ ಶತಾಯುಷಿ ಮಂಗಳಗೌರಿ ಇನ್ನಿಲ್ಲ



ಮಂಗಳಗೌರಿ

ಮೈಸೂರು,ನ.30(ಜಿಎ)–ಮೈಸೂರಿನ ಖ್ಯಾತ ಲೇಖಕಿ, ಸಮಾಜಸೇವಕಿ ಮತ್ತು ತತ್ವ ಚಿಂತಕಿ ಮಂಗಳಮ್ಮ ಎಂದು ಖ್ಯಾತರಾಗಿದ್ದ ಬೃಂದಾವನ ಬಡಾವಣೆಯ ನಿವಾಸಿ ಮಂಗಳಗೌರಿ(101) ಅವರು ಶನಿವಾರ ನಿಧನರಾದರು.

ಮೃತರು ಮಗ ನರಹರಿ, ಮಗಳು ಶಾರದಾಮಣಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಚಾಮುಂಡಿಬೆಟ್ಟದ ಪಾದದಲ್ಲಿ ಕುಟುಂಬದವರ ಸಮ್ಮುಖದಲ್ಲಿ ನೆರವೇರಿತು.

ಚಾಮುಂಡಿಬೆಟ್ಟದ ಸೀತಾರಾಮ ಶಾಸ್ತ್ರಿ ಮತ್ತು ಸುಬ್ಬಮ್ಮ ದಂಪತಿಯ ಕೊನೆ ಮಗಳಾಗಿ 1925ರ ಜೂನ್ 22ರಂದು ಜನಿಸಿದ ಮಂಗಳಗೌರಿ, ಅಂಬಳೆ ಅಣ್ಣಯ್ಯ ಪಂಡಿತ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಮೈಸೂರು ಮಹಾರಾಣಿ ಶಾಲೆಯಲ್ಲಿ ಓದಿದ ನಂತರ ಬೆಂಗಳೂರಿನ ಬಸವನಗುಡಿಯ ಟಿನ್ ಶಾಲೆಯಲ್ಲಿ ಪ್ರೌಢ ಶಿಕ್ಷಣಪೂರ್ಣಗೊಳಿಸಿದರು. 1939ರಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯನ್ನು ವಿಶೇಷ ಶ್ರೇಣಿಯಲ್ಲಿ ಉತ್ತೀರ್ಣರಾದರು.

1939ರಲ್ಲಿ ಮಂಗಳಗೌರಿ ಅವರು ಮಂಡ್ಯ ಮೈಶುಗರ್ ಫ್ಯಾಕ್ಟರಿ ಲೆಕ್ಕಾಧಿಕಾರಿ ಎಸ್.ಸೀತಾರಾಮಯ್ಯರೊಂದಿಗೆ ವೈವಾಹಿಕ ಜೀವನಕ್ಕೆ ಕಾಲಿಟ್ಟರು. ನಂತರ 1952ರಿಂದ ಮನೆಯಲ್ಲಿಯೇ ಇಬ್ಬರು ವಿದ್ಯಾರ್ಥಿಗಳಿಂದ ಉಚಿತ ಹಿಂದಿ ತರಗತಿಗಳನ್ನು ಆರಂಭಿಸಿದರು. ಮುಂದಿನ 30 ವರ್ಷಗಳಲ್ಲಿ ಜಾತಿ, ಧರ್ಮ, ಲಿಂಗ, ಪಂಥ ಯಾವುದೇ ಅಂತರವಿಲ್ಲದೆ ಸಾವಿರಾರು ಮಂದಿಗೆ ಹಿಂದಿ ಬೋಧಿಸಿದರು. ತಮ್ಮ ವಿದ್ಯಾರ್ಥಿಗಳ ಜೊತೆಯೇ 'ರಾಷ್ಟ್ರಭಾಷಾ ಪ್ರವೀಣ' ಪರೀಕ್ಷೆ ಬರೆದು ಉತ್ತೀರ್ಣರಾದರು. ಅವರ ಸೇವೆ ಗುರುತಿಸಿ, 1976ರಲ್ಲಿ ಉಪರಾಷ್ಟ್ರಪತಿ ಬಿ.ಡಿ.ಜತ್ತಿ ಅವರು ತಾಮ್ರ ಫಲಕ ನೀಡಿ ಸನ್ಮಾನಿಸಿದರು.

ನಂತರ 1990 ಸಣ್ಣ ಪುಟ್ಟ ಲೇಖನಗಳನ್ನು ಬರೆಯಲು ಆರಂಭಿಸಿದರು. ರಾಮಕೃಷ್ಣ ಆಶ್ರಮದ ಸೋಮನಾಥನಂದ ಸ್ವಾಮೀಜಿ, ಸ್ವಾಮಿ ರಂಗನಾಥನಂದರು, ಪೂರ್ವಾಶ್ರಮದ ಸಹೋದರರಾದ ಸ್ವಾಮಿ ಸ್ಥಿತಾತ್ಮಾನಂದ, ಸ್ವಾಮಿ ಅನನ್ಯಾನಂದರು ಅವರ ಬರವಣಿಗೆಗೆ ಪ್ರೋತ್ಸಾಹ ನೀಡಿದರು.

ಅಂದು ಬರವಣಿಗೆ ಆರಂಭಿಸಿ ಮಹಾಭಾರತ ಕಥಾ ಸಂಗ್ರಹ, ಚಿಂತನಧಾರೆ (ಬಿಡಿಬರಹಗಳು), ಸ್ವಸ್ಥ ಬದುಕಿಗೆ ಭಗವದ್ಗೀತೆ ಮತ್ತು ಸಹಸ್ರಕಿರಣ, ನುಡಿನಮನ (ಕವಿತೆ ಮತ್ತು ಭಜನೆಗಳು) ಮತ್ತು ತೋಚಿದ್ದು ಗೀಚಿದ್ದು (ಚುಟುಕುಗಳು), ವಿಶ್ವಪ್ರಿಯ ಸನ್ಯಾಸಿ ಸ್ವಾಮಿ ರಂಗನಾಥನಂದ (ಜೀವನ ಪರಿಚಯ) ಶ್ರೀ ಶಾರದದೇವು ಚರಿತೆ (ಪದ್ಯರೂಪ), ಬೆಳಕಿಂಡಿ (ಬಿಡಿಬರಹಗಳು) ಮತ್ತು ತೋಚಿದ್ದು ಗೀಚಿದ್ದು (2ನೇ ಭಾಗ), ಭವ್ಯ ಜೀವನದ ಇಣುಕು ನೋಟ (ಬಿಡಿಬರಹಗಳು), ನಡಿಗೆಗೊಂದು ಬಿಡಿಗೆ (ನೀತಿಕಥೆಗಳು), ದಿವ್ಯಶಿಕ್ಷಣ ದೇವಿಗೆ–ಶ್ರೀಮಾತೆ, ಸರಳತೆಯಲ್ಲಿ ಬೆಳಗಿದ ದಿವ್ಯತೆ–ಶ್ರೀಮಾತೆ, ರಾಮಾಯಣದಲ್ಲಿನ ಪ್ರಮುಖ ಸೋದರರು, ವನಪರ್ವದಲ್ಲಿ ನೀತಿಕಥಗಳು, ಮರುಳು ಮುನಿಯನ ಕಗ್ಗ(ಸರಳ ವಿವರಣೆ), ವಿಶ್ವರೂಪ ದರ್ಶನ, ಜೀವನ ಧರ್ಮದರ್ಶಿನಿ ಸೇರಿದಂತೆ 16 ಕೃತಿಗಳು ಬರೆದಿದ್ದಾರೆ.

ಅವರ ಸಾಹಿತ್ಯ ಮತ್ತು ಸಮಾಜ ಸೇವೆಗೆ ಅನೇಕ ಪ್ರಶಂಸೆಗಳು ಲಭಿಸಿವೆ. ಬೃಂದಾವನ ಲೇಔಟ್ ನಿವಾಸಿಗಳಿಂದ 2004 ಮತ್ತು 2012ರಲ್ಲಿ ಸನ್ಮಾನ, 2016ರಲ್ಲಿ ಮಂಡ್ಯ ಜಿಲ್ಲಾ ಬ್ರಾಹ್ಮಣ ಸಭೆಯಿಂದ ಸರ್.ಎಂ.ವಿಶ್ವೇಶ್ವರಯ್ಯ ಪ್ರಶಸ್ತಿ, ಚೇತನ ಟ್ರಸ್ಟ್ ಮತ್ತು ಗಮಕ ಕಲಾ ಪರಿಷತ್ ಗೌರವ, 2017ರಲ್ಲಿ ಮೈಸೂರು ಆರ್ಟ್ ಗ್ಯಾಲರಿ ಸನ್ಮಾನ, 2018ರಲ್ಲಿ ವೆಂಕಟಗಿರಿ ಪ್ರಕಾಶನದ 'ಶಿಕ್ಷಣ ರತ್ನ ಮೇರುಗಿರಿ' ಪ್ರಶಸ್ತಿ, ಆಚಾರ್ಯ ವಿದ್ಯಾ ಕುಲ ಮತ್ತು ವಿಜಯ ವಿಠ್ಠಲ ಸಂಸ್ಥೆಗಳ ಗೌರವಗಳನ್ನು ಹೊಂದಿದ್ದರು.

'ಮೈಸೂರು ಮಿತ್ರ'ನ ಜೂ.22ರ ಸಂಚಿಕೆಯಲ್ಲಿ 'ಮಂಗಳ ಕಾರ್ಯನಿರತ ಮಂಗಳಮ್ಮ–100' ವಾರದ ಮಿತ್ರ ಸಾಪ್ತಾಹಿಕ ಪುರವಣಿಯಲ್ಲಿ ವಿಶೇಷ ಲೇಖನ ಪ್ರಕಟವಾಗಿತ್ತು.

ಭತ್ತ, ರಾಗಿ ಖರೀದಿಗೆ ರೈತರ ನೋಂದಣಿ, ಖರೀದಿ ಪ್ರಕ್ರಿಯೆ ಆರಂಭ






ಮೈಸೂರು,ನ.30–ಪ್ರಸಕ್ತ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಜಿಲ್ಲೆಯ ರೈತ ರಿಂದ ಭತ್ತ ಮತ್ತು ರಾಗಿಯನ್ನು ಖರೀದಿಸಲು ಸರ್ಕಾರವು ಕೆಳಗಿನಂತೆ ದರ ನಿಗದಿಪಡಿಸಿ ಈ ಜಿಲ್ಲೆಗೆ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮವನ್ನು ಖರೀದಿ ಏಜೆನ್ಸಿಯನ್ನಾಗಿ ನೇಮಕ ಮಾಡಿ, ರೈತರ ನೋಂದಣಿ ಹಾಗೂ ಖರೀದಿ ಪ್ರಕ್ರಿಯೆ ಪ್ರಾರಂಭಿಸಿದೆ.

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮವು ಸಾಮಾನ್ಯ ಭತ್ತ ಉತ್ಪನ್ನಕ್ಕೆ ರೂ.2369, ಗ್ರೇಡ್ ಎ ಭತ್ತ ಉತ್ಪನ್ನಕ್ಕೆ ರೂ.2389 ಬೆಂಬಲ ಬೆಲೆ ಘೋಷಿಸಿದ್ದು, ನವೆಂಬರ್ 15ರಿಂದ ಡಿಸೆಂಬರ್ 31ರವರೆಗೆ ನೋಂದಣಿ ಮಾಡಿ ಕೊಳ್ಳಬಹುದಾಗಿದೆ. ಪ್ರತಿ ಎಕರೆಗೆ 25 ಕ್ವಿಂಟಾಲ್ ನಂತೆ ಗರಿಷ್ಠ 50 ಕ್ವಿಂಟಾಲ್ ಖರೀದಿ ಪ್ರಮಾಣ ಒಳಗೊಂಡಿದ್ದು, ಖರೀದಿ ಅವಧಿಯನ್ನು ನವೆಂಬರ್ 1ರಿಂದ ಫೆಬ್ರವರಿ 28, 2026 ರವರೆಗೆ ನಿಗದಿಪಡಿಸಿದೆ. ರಾಗಿಗೆ ರೂ.4886 ಬೆಂಬಲ ಬೆಲೆ ಘೋಷಿಸಿದ್ದು, ಅ.1ರಿಂದ ಡಿ.15ರವರೆಗೆ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಪ್ರತಿ ಎಕರೆಗೆ 10 ಕ್ವಿಂಟಾಲ್ ನಂತೆ ಗರಿಷ್ಠ 50 ಕ್ವಿಂಟಾಲ್ ಖರೀದಿ ಪ್ರಮಾಣ ಒಳಗೊಂಡಿದ್ದು, ಖರೀದಿ ಅವಧಿಯನ್ನು ಜನವರಿ 1ರಿಂದ ಮಾರ್ಚ್ 31ರವರೆಗೆ ನಿಗದಿಪಡಿಸಿದೆ. ನೋಂದಣಿಗಾಗಿ ಮೈಸೂರು–ಎ.ಪಿ.ಎಂ.ಸಿ. ಆವರಣ ಬಂಡಿಪಾಳ್ಯ, ಮೈಸೂರು, ನಂಜನಗೂಡು–ಎ.ಪಿ.ಎಂ.ಸಿ. ಆವರಣ, ನಂಜನಗೂಡು, ಟಿ.ನರಸೀಪುರ–ಎ.ಪಿ.ಎಂ.ಸಿ. ಆವರಣ, ಟಿ.ನರಸೀಪುರ ಹಾಗೂ ಎಪಿಎಂಸಿ ಆವರಣ, ಬನ್ನೂರು, ಹುಣಸೂರು–ಎ.ಪಿ.ಎಂ.ಸಿ. ಆವರಣ, ಹುಣಸೂರು, ಕೆಆರ್.ನಗರ–ಎ.ಪಿ.ಎಂ.ಸಿ. ಆವರಣ, ಕೆಆರ್.ನಗರ ಸಾಲಿಗ್ರಾಮ–ಎ.ಪಿ.ಎಂ.ಸಿ. ಆವರಣ, ಸಾಲಿಗ್ರಾಮ ಹಾಗೂ ಪ್ರವಾಸಿ ಮಂದಿರ (ಶ್ರೀರಾಮ ದೇವಸ್ಥಾನದ ಹತ್ತಿರ) ಚುಂಚನಕಟ್ಟೆ, ಹೆಚ್.ಡಿ.ಕೋಟೆ, ಸರಗೂರು–ಎ.ಪಿ.ಎಂ.ಸಿ. ಆವರಣ, ಸರಗೂರು, ಪಿರಿಯಾಪಟ್ಟಣ– ಎ.ಪಿ.ಎಂ.ಸಿ. ಆವರಣ, ಪಿರಿಯಾಪಟ್ಟಣ, ಎ.ಪಿ.ಎಂ.ಸಿ. ಆವರಣ, ಬೆಟ್ಟದಪುರ, ಗ್ರಾಮ ಪಂಚಾಯಿತಿ ಕಚೇರಿ ಹತ್ತಿರ, ಹಾರನಹಳ್ಳಿ, ರೈತ ಸಂಪರ್ಕ ಕೇಂದ್ರ, ರಾವಂದೂರು ಇಲ್ಲಿ ನೋಂದಣಿ ಕೇಂದ್ರಗಳನ್ನು ತೆರೆಯಲಾಗಿದೆ.

ಮೈಸೂರಿಗೆ ಸಿಎಂ ಆಗಮನ: ಪ್ರತಿಕ್ರಿಯೆ ನೀಡಲು ನಕಾರ



ಮೈಸೂರು, ನ.30(ಬಿಎಲ್‌ಯು)–ಖಾಸಗಿ ಕಾರ್ಯಕ್ರಮದ ನಿಮಿತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಮೈಸೂರಿಗೆ ಆಗಮಿಸಿದ್ದರು. ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಇಂದು ಮಧ್ಯಾಹ್ನ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದ ಸಿದ್ದರಾಮಯ್ಯ ಅವರು ಪೊಲೀಸರಿಂದ ಗೌರವ ವಂದನೆ ಸ್ವೀಕರಿಸಿದರು. ಆದರೆ ಪ್ರಸಕ್ತ ರಾಜಕೀಯ ಬೆಳವಣಿಗೆ ಬಗ್ಗೆ ಪತ್ರಕರ್ತರಿಗೆ ಯಾವುದೇ ಪ್ರತಿಕ್ರಿಯೆ ನೀಡಲು ನಿರಾಕರಿಸಿದ ಸಿದ್ದರಾಮಯ್ಯ ಅಲ್ಲಿಂದ ನಿರ್ಗಮಿಸಿದರು.

ಮೈಸೂರಿನ ಮೂರು ಪರೀಕ್ಷಾ ಕೇಂದ್ರದಲ್ಲಿ ಯುಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆ



ಮೈಸೂರಿನ ಪೀಪಲ್ಸ್ ಪಾರ್ಕ್‌ನ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಎಡಿಸಿ ಡಾ.ಪಿ.ಶಿವರಾಜ್ ಭೇಟಿ ನೀಡಿದರು.

ಮೈಸೂರು, ನ.30(ಬಿಎಲ್‌ಯು)– ಮೈಸೂರಿನಲ್ಲಿ ಭಾನುವಾರ ಯುಪಿಎಸ್ (ಕೇಂದ್ರ ಲೋಕಸೇವಾ ಆಯೋಗ) ಇಪಿಎಫ್‌ಒನ ವಿವಿಧ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಆಯೋಜಿಸಿತ್ತು.

ನೌಕರರ ಭವಿಷ್ಯ ನಿಧಿ ಸಂಸ್ಥೆಯ ಎಪಿಎಫ್‌ಸಿ ಮತ್ತು ಇಒ, ಎಒ ಹುದ್ದೆಗಳಿಗೆ ಪರೀಕ್ಷೆ ನಡೆಯಿತು. ಮೈಸೂರಿನ ಪೀಪಲ್ಸ್ ಪಾರ್ಕ್‌ನ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಇಂದು ಬೆಳಿಗ್ಗೆ 9.30ರಿಂದ 11.30 ಗಂಟೆವರೆಗೆ ಪರೀಕ್ಷೆ ಜರುಗಿತು. ಒಟ್ಟು 1,448 ಅಭ್ಯರ್ಥಿಗಳು ಪರೀಕ್ಷೆ ಬರೆಯಲು ನೋಂದಣಿ ಮಾಡಿಕೊಂಡಿದ್ದರು. ಆದರೆ 656 ಅಭ್ಯರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾಗಿದ್ದರು. ಎಡಿಸಿ ಡಾ.ಪಿ.ಶಿವರಾಜ್ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ ಪರೀಕ್ಷೆ ಸುಲಲಿತವಾಗಿ ನಡೆಯುತ್ತಿರುವ ಬಗ್ಗೆ ಪರಿಶೀಲನೆ ನಡೆಸಿದರು.

ಒಳ ಮೀಸಲಾತಿ ಸದುಪಯೋಗಪಡಿಸಿಕೊಂಡು ಮುಖ್ಯವಾಹಿನಿಗೆ ಬನ್ನಿ

ಸಾಧಕರನ್ನು ಸನ್ಮಾನಿಸಿ ಚಿಂತಕ ಪ್ರೊ.ಗೋವಿಂದಯ್ಯ ಸಲಹೆ



ಮೈಸೂರಿನ ಮಾನಸಗಂಗೋತ್ರಿಯ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಸಭಾಂಗಣದಲ್ಲಿ ಭಾನುವಾರ ಸಾಮಾಜಿಕ ನ್ಯಾಯಪರ ವೇದಿಕೆ, ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನರಾಮ್ ವಿದ್ಯಾರ್ಥಿ ಸಂಘಟನೆ ಸಂಯುಕ್ತವಾಗಿ ಉಪನ್ಯಾಸ ಕಾರ್ಯಕ್ರಮ ಆಯೋಜಿಸಿತ್ತು.

ಮೈಸೂರು, ನ.30(ಬಿಎಲ್‌ಯು)– ಒಳ ಮೀಸಲಾತಿ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ದಲಿತ ಸಮುದಾಯ ಮುಖ್ಯ ವಾಹಿನಿಗೆ ಬರಬೇಕು ಎಂದು ಚಿಂತಕ ಪ್ರೊ.ಗೋವಿಂದಯ್ಯ ಸಲಹೆ ನೀಡಿದರು.

ಮೈಸೂರಿನ ಮಾನಸ ಗಂಗೋತ್ರಿಯ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಸಭಾಂಗಣದಲ್ಲಿ ಭಾನುವಾರ ಸಾಮಾಜಿಕ ನ್ಯಾಯಪರ ವೇದಿಕೆ, ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ ರಾಂ ವಿದ್ಯಾರ್ಥಿ ಸಂಘಟನೆ ಸಂಯುಕ್ತವಾಗಿ ಆಯೋಜಿಸಿದ್ದ ಸಮಾರಂಭದಲ್ಲಿ ಸಾಧಕರನ್ನು ಸನ್ಮಾನಿಸಿ ಮಾತನಾಡಿದ ಅವರು, ಹಲವು ದಶಕಗಳ ಹೋರಾಟದ ಫಲವಾಗಿ ಇಂದು ಒಳ ಮೀಸಲಾತಿ ಸೌಲಭ್ಯ ದೊರೆತಿದ್ದು, ದಲಿತ ಸಮುದಾಯ ಯಾವುದೇ ರೀತಿಯ ಗೊಂದಲಕ್ಕೆ ಒಳಗಾಗದೆ ಐಕ್ಯತೆ ಕಾಪಾಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಒಳ ಮೀಸಲಾತಿ ಸಂಬಂಧ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ವೈಜ್ಞಾನಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದರು. ಆದರೆ ಕೆಲವರನ್ನು ಇದನ್ನು ವಿರೋಧಿಸಿದರು. ಆದರೂ ಹಲವು ಅಡೆತಡೆಗಳ ಮಧ್ಯೆ ಸರ್ಕಾರ ಒಳ ಮೀಸಲಾತಿ ಜಾರಿಗೊಳಿಸಿದೆ. ಆದರೆ ಇದನ್ನು ಪರಿಪೂರ್ಣವಾಗಿ ಅನುಷ್ಠಾನ ಮಾಡಬೇಕು ಎಂದು ಆಗ್ರಹಿಸಿದರು.

ನಾವು ಶಿಕ್ಷಣ ಪಡೆಯುವ ಸಂದರ್ಭದಲ್ಲಿ ಆರ್ಥಿಕ ಸಂಕಷ್ಟದ ಕಾರಣ ಹಲವು ತೊಂದರೆ ಎದುರಿಸಿದ್ದೆವು. ಆದರೆ ಇಂದು ಹೋಬಳಿಗೊಂದು ವಸತಿ ಶಾಲೆಗಳಿದ್ದು, ಶಿಕ್ಷಣ ಪಡೆಯಲು ವಿಫಲ ಅವಕಾಶಗಳಿವೆ. ಇದನ್ನು ದಲಿತ ಸಮುದಾಯ ಸದುಪಯೋಗಪಡಿಸಿಕೊಂಡು ಶೇಕಡ ನೂರರಷ್ಟು ಸಾಕ್ಷರತೆ ಹೊಂದಬೇಕು ಎಂದು ಪ್ರೊ.ಗೋವಿಂದಯ್ಯ ಸಲಹೆಯಿತ್ತರು.

ಇದೇ ಸಂದರ್ಭ ಮಾತನಾಡಿದ ಸಾಮಾಜಿಕ ನ್ಯಾಯಪರ ವೇದಿಕೆಯ ಡಾ.ಮರಡೀಪುರ ರವಿಕುಮಾರ್ ಅವರು, ವಿದ್ಯಾರ್ಥಿಗಳು ಹೆಚ್ಚೆಚ್ಚು ಪುಸ್ತಕಗಳನ್ನು ಓದಬೇಕು. ಉನ್ನತ ಶಿಕ್ಷಣ ಪಡೆಯುವ ಮೂಲಕ ಉನ್ನತ ಸ್ಥಾನ ಗಳಿಸಬೇಕು ಎಂದು ಹೇಳಿದರು.

ಕರ್ನಾಟಕ ಮಾಹಿತಿ ಆಯೋಗದ ಆಯುಕ್ತ ಡಾ.ಹರೀಶ್‌ಕುಮಾರ್, ಚಿಕ್ಕಮಗಳೂರು ಜಂಟಿ ಕೃಷಿ ನಿರ್ದೇಶಕ ಡಾ.ಎಂ.ತಿರುಮಲ್ಲೇಶ್ ಭರತ್ ಸಿ.ಯಾರಮ್ ವಿಶೇಷ ಉಪನ್ಯಾಸ ನೀಡಿದರು.

ಬೆಂಗಳೂರಿನ ನಿರಾಶ್ರಿತರ ಪರಿಹಾರ ಕೇಂದ್ರದ ನಿರ್ದೇಶಕ ಚಂದ್ರಪ್ಪ ಗೋಕಾಕ್, ಕೆಐಎಡಿಬಿ ಮೈಸೂರು ವಿಶೇಷ ಭೂಸ್ವಾಧೀನಾಧಿಕಾರಿ ಡಾ.ಎನ್.ಸಿ.ವೆಂಕಟರಾಜು, ಮಾಜಿ ಮೇಯರ್ ನಾರಾಯಣ್, ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ನೌಕರರ ಸಂಘದ ರಾಜ್ಯಾಧ್ಯಕ್ಷ ಮಂಜುನಾಥ್ ಓಣಿಕೇರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಉದ್ಯಾನವನ ಅಭಿವೃದ್ಧಿಗೆ ಶಾಸಕರಾದ ಜಿ.ಟಿ.ದೇವೇಗೌಡರಿಂದ ಚಾಲನೆ...



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.44ರ ಸಿದ್ದಲಿಂಗೇಶ್ವರ ಬಡಾವಣೆಯಲ್ಲಿ 41 ಲಕ್ಷ ರೂ.. ವೆಚ್ಚದಲ್ಲಿ ಉದ್ಯಾನವನ ಅಭಿವೃದ್ಧಿಗೆ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಿದರು. ಈ ವೇಳೆ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಜಯಪ್ರಕಾಶ್, ಸವಿತಾ ಸುರೇಶ್, ಸುರೇಶ್, ಹೆಚ್.ಕೆ.ರವೀಂದ್ರ, ರೇಖಾ ಸುರೇಶ, ಶಾರದ ಹೆಗ್ಡೆ, ಹೇಮರೆಡ್ಡಿ, ಶಿವರುದ್ರಯ್ಯ, ಭಾಸ್ಕರ್‌ಮೂರ್ತಿ, ಡಾ.ರಮೇಶ್ ಹಾಗೂ ನಿವಾಸಿಗಳು ಉಪಸ್ಥಿತರಿದ್ದರು.

ಮಹಿಳಾ ಸ್ತ್ರೀಶಕ್ತಿ ಗುಂಪುಗಳಿಂದ ಅರ್ಜಿ ಆಹ್ವಾನ

ಮೈಸೂರು,ನ.30– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಸ್ತ್ರೀಶಕ್ತಿ ಯೋಜನೆಯಡಿ ಮೈಸೂರಿನ ವಿಜಯನಗರ ಎರಡನೇ ಹಂತ, ಕೃಷ್ಣದೇವರಾಯ ವೃತ್ತದ ಹತ್ತಿರ ಇರುವ ವಿಭಾಗೀಯ ಸ್ತ್ರೀಶಕ್ತಿ ಭವನದ ಮುಂಭಾಗ ನಿರ್ಮಾಣಗೊಂಡಿರುವ ವಾಣಿಜ್ಯ ಮಳಿಗೆಗಳನ್ನು ಉದ್ಯಮಗಳಲ್ಲಿ ಆಸಕ್ತಿವುಳ್ಳ ಮಹಿಳೆಯರನ್ನೊಳಗೊಂಡ ಅರ್ಹ ಸ್ತ್ರೀಶಕ್ತಿ ಗುಂಪುಗಳಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ಅರ್ಹ ಮಹಿಳಾ ಸ್ತ್ರೀಶಕ್ತಿ ಗುಂಪುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಮಹಿಳಾ ಗುಂಪುಗಳು ಅರ್ಜಿಗಳನ್ನು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, 1ನೇ ಮಹಡಿ, ಸ್ತ್ರೀಶಕ್ತಿ ಭವನ, ಕೃಷ್ಣದೇವ ರಾಯ ವೃತ್ತ, ವಿಜಯನಗರ, ಎರಡನೇ ಹಂತ, ಮೈಸೂರು ಕಚೇರಿ ಸಮಯದಲ್ಲಿ ಪಡೆಯಬಹುದಾಗಿದ್ದು ಭರ್ತಿ ಮಾಡಿದ ಅರ್ಜಿಯ ಜೊತೆ ದಾಖಲಾತಿಗಳನ್ನು ಡಿಸೆಂಬರ್ 8ರಂದು ಸಂಜೆ 5 ಗಂಟೆಯೊಳಗೆ ಸಲ್ಲಿಸುವುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:0821–2495432 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ದಿತ್ವಾ ಚಂಡ ಮಾರುತದ ಪರಿಣಾಮ

ಡಿ.5ರವರೆಗೆ ಮೈಸೂರಲ್ಲಿ ದಟ್ಟ ಮೋಡ, ತುಂತುರು ಮಳೆ ಸಾಧ್ಯತೆ



ದಿತ್ವಾ ಚಂಡ ಮಾರುತದ ಹಿನ್ನೆಲೆ ದಟ್ಟ ಮೋಡ ಆವರಿಸಿ ಮಂಜು ಸುರಿಯುತ್ತಿರುವ ಕಾರಣ ತೀವ್ರ ಚಳಿಯಿಂದ ಪಾರಾಗಲು ಮುಂಜಾನೆಯ ಕೆಲಸ ಕಾರ್ಯಕ್ಕೆ ಬರುವವರು ಬೆಂಕಿ ಹಾಕಿ ಕಾಯಿಸಿಕೊಳ್ಳುತ್ತಿರುವುದು.

ಮೈಸೂರು, ನ.30(ಬಿಎಲ್‌ಯು)– ಶ್ರೀಲಂಕಾದಲ್ಲಿ ಜಲ ಪ್ರಳಯ ಉಂಟು ಮಾಡಿರುವ ದಿತ್ವಾ ಚಂಡ ಮಾರುತ ಮೈಸೂರು, ಕೊಡಗು, ಚಾಮರಾಜನಗರ, ಹಾಸನ ಹಾಗೂ ಮಂಡ್ಯ ಜಿಲ್ಲೆಯ ವಾತಾವರಣದ ಮೇಲೆ ಪ್ರತಿಕೂಲ ಪರಿಣಾಮ ಬೀರಿದ್ದು, ದಟ್ಟ ಮೋಡ ಕವಿದಿದೆ.

ಮೈಸೂರಿನಲ್ಲಿ ಭಾನುವಾರ ಕನಿಷ್ಠ ಉಷ್ಣಾಂಶ 18 ಡಿಗ್ರಿ ಸೆಲ್ಸಿಯಸ್ ಹಾಗೂ ಗರಿಷ್ಠ ಉಷ್ಣಾಂಶ 28 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಸದ್ಯ ಶ್ರೀಲಂಕಾದಲ್ಲಿರುವ ಚಂಡ ಮಾರುತ ಡಿಸೆಂಬರ್ 5ರ ವೇಳೆಗೆ ಆಂಧ್ರ ಪ್ರದೇಶದ ಕಾರಾವಳಿ ತೀರದಲ್ಲಿ ದುರ್ಬಲಗೊಂಡು ಅಲ್ಲಿ ತನ್ನ ಶಕ್ತಿ ಕಳೆದುಕೊಳ್ಳಲಿದೆ ಎನ್ನಲಾಗಿದೆ.

ಈ ಹಿನ್ನೆಲೆ ಮೈಸೂರಿನಲ್ಲಿ ಡಿಸೆಂಬರ್ 5 ರವರೆಗೆ ಮೋಡ ಕವಿದ ವಾತಾವರಣ ನಿರ್ಮಾಣವಾಗಲಿದ್ದು, ಆಗಾಗ್ಗೆ ತುಂತುರು ಮಳೆ ಬರುವ ಸಾಧ್ಯತೆ ಇದೆ.

ದಿತ್ವಾ ಚಂಡ ಮಾರುತದ ಪರಿಣಾಮ ಮೈಸೂರಿನಲ್ಲಿ ದಟ್ಟ ಮೋಡ ಕವಿದಿದ್ದು, ಕೆಲವೆಡೆ ತುಂತುರು ಮಳೆಯಾಗಿದೆ. ಚುಮು ಚುಮು ಚಳಿಯಿಂದ ಜನರು ಸ್ವೆಟರ್, ಜರ್ಕಿನ್, ಶಾಲುಗಳನ್ನು ಧರಿಸಿರುವುದು ಸಾಮಾನ್ಯವಾಗಿದೆ. ತೀವ್ರ ಚಳಿಯ ಕಾರಣ ಕೆಲವರು ಮುಂಜಾನೆಯ ವಾಯುವಿಹಾರದಿಂದ ದೂರ ಉಳಿದಿದ್ದಾರೆ. ಡಿಸೆಂಬರ್ ತಿಂಗಳ ಶೀತ ವಾತಾವರಣದ ಜೊತೆಗೆ ದಿತ್ವಾ ಚಂಡ ಮಾರುತದ ಪರಿಣಾಮದಿಂದ ಮುಂಜಾನೆ ವೇಳೆ ದಟ್ಟ ಮಂಜು ಮುಸುಕುತ್ತಿದೆ. ಇದರಿಂದ ಮಲೆನಾಡಿನಂತೆ ಮೈಸೂರಿನಲ್ಲಿ ಕೂಡ ತೀವ್ರ ಚಳಿಯ ಅನುಭವವಾಗುತ್ತಿದೆ. ರೈತರು ತರಕಾರಿ ಮಾರಾಟ ಮಾಡಲು ಮೈಸೂರಿನ ಎಂ.ಜಿ. ರಸ್ತೆಯ ರೈತ ಸಂತೆಗೆ ಬರುತ್ತಾರೆ. ಆ ವೇಳೆ ಮುಂಜಾನೆಯ ಚಳಿಯಿಂದ ತ್ರಾಸಗೊಳ್ಳುವ ರೈತರು ಸೇರಿದಂತೆ ತರಕಾರಿ ಮಾರಾಟಗಾರರು ಮಧ್ಯೆ ಬೆಂಕಿ ಹಾಕಿಕೊಂಡು ಚಳಿ ಕಾಯಿಸಿಕೊಳ್ಳುತ್ತಿದ್ದಾರೆ.

ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ನ.30–ಮೀನುಗಾರಿಕೆ ಇಲಾಖೆ 2025–26ನೇ ಸಾಲಿನ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಧರ್ತಿ ಆಭಾ ಜನಜಾತೀಯ ಗ್ರಾಮ ಉತ್ಕರ್ಷ ಅಭಿಯಾನ ಉಪಯೋಜನೆಗಳಡಿ ಮೈಸೂರು ತಾಲೂಕಿನ ಅಮಚವಾಡಿ, ಕುಮಾರಬೀಡು, ಕೆಂಚಲಗೂಡು, ಉದ್ಬೂರು, ಗುಮಚನಹಳ್ಳಿ ಮತ್ತು ತೊರೆಯನ ಕಾಟೂರು ಸದರಿ ಗ್ರಾಮದ ಬುಡಕಟ್ಟು ಸಮುದಾಯದ, ಪರಿಶಿಷ್ಟ ಪಂಗಡ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಮೀನು ಮಾರಾಟಕ್ಕಾಗಿ ಐಸ್ ಬಾಕ್ಸ್‌ನೊಂದಿಗೆ ದ್ವಿಚಕ್ರ ವಾಹನ, ಐಸ್ ಬಾಕ್ಸ್‌ನೊಂದಿಗೆ ತ್ರಿಚಕ್ರ ವಾಹನ ಮತ್ತು ಜೀವಂತ ಮೀನು ಮಾರಾಟ ಕೇಂದ್ರಗಳನ್ನು ಪಿಎಂಎಂಎಸ್‌ವೈ ಯೋಜನೆ ಘಟಕ ವೆಚ್ಚದಂತೆ ಸ್ಥಾಪಿಸಲು ಘಟಕ ವೆಚ್ಚದ ಶೇ.90ರಷ್ಟು ಸಹಾಯಧನ ನೀಡಲಾಗುವುದು. ಅರ್ಜಿ ನಮೂನೆಯನ್ನು ಸಂಬಂಧಿಸಿದ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಯಿಂದ ಪಡೆದು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಡಿ.15ರೊಳಗೆ ಕಚೇರಿ ವೇಳೆಯಲ್ಲಿ ಈ ಕಚೇರಿಗೆ ಸಲ್ಲಿಸತಕ್ಕದ್ದು. ನಿಗದಿತ ಅವಧಿ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಮಾಹಿತಿಗಾಗಿ ಈ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.12.2025 ಸೋಮವಾರ, ಮಳೆ ನಕ್ಷತ್ರ: ಅನೂರಾಧ, 20.11.2025 ರಿಂದ 02.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಶ್ರೀ ಗೀತಾ ಪ್ರಚಾರಿಣಿ ಸಭಾ ಟ್ರಸ್ಟ್ (ಬ್ರಹ್ಮೀಭೂತ ಶ್ರೀ ಶಂಕರಾನಂದ ಭಾರತೀ ಸ್ವಾಮಿಗಳಿಂದ ಸ್ಥಾಪಿತ ಗೀತಾಮಂದಿರ, ಮೈಸೂರು:** 91ನೇ ವರ್ಷದ ಶ್ರೀ ಗೀತಾ ಜಯಂತಿ ಮಹೋತ್ಸವ. ಬೆಳಗ್ಗೆ 7 ಗಂಟೆಗೆ ಗೀತಾ ಜಯಂತಿ, ಧ್ವಜಾರೋಹಣ. ಬೆಳಗ್ಗೆ 8ಕ್ಕೆ ಸಾಮೂಹಿಕ ಭಗವದ್ಗೀತೆ ಪಾರಾಯಣ, 8.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ. ಸಂಜೆ 5.45ಕ್ಕೆ ಶ್ರೀ ವಿದ್ಯಾ ವಿಷ್ಣು ಸಭಾ ಟ್ರಸ್ಟ್‌ನಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30ರಿಂದ ಬಿ.ಎನ್.ಮಾಧವಾಚಾರ್ ಅವರಿಂದ ಶ್ರೀ ರಾಮಚಾರಿತ್ರ ಮಂಜರಿ. ಸ್ಥಳ: ಗೀತಾ ಮಂದಿರ, ಅಶೋಕ ರಸ್ತೆ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ತಲೆ ಕೂದಲು, ಗಂಟಲು, ದಂತ ಮತ್ತು ಆಮವಾತಕ್ಕೆ ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10 ರಿಂದ.
- **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ:** ವಿಶ್ವ ಏಡ್ಸ್ ದಿನ–2025. ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಘನ ಉಪಸ್ಥಿತಿ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್. ಸ್ಥಳ: ಅಮೃತ ಮಹೋತ್ಸವ ಭವನ, ಜೆ.ಕೆ.ಮೈದಾನ. ಬೆಳಗ್ಗೆ 11 ಗಂಟೆಗೆ.
- **ನನ್ನವ್ವ ಸಾಂಸ್ಕೃತಿಕ ಕಲಾ ತಂಡ:** ಡಿಸೆಂಬರ್ ತಿಂಗಳ 5ನೇ ಕನ್ನಡ ರಾಜ್ಯೋತ್ಸವ–2025. ರಾಜ್ಯ ಮಟ್ಟದ ಸಾಲು ಮರದ ತಿಮ್ಮಕ್ಕ ಕವಿಗೋಷ್ಠಿ. ಸ್ಥಳ: ನಮನ ಕಲಾ ಮಂಟಪ, ಅಶೋಕ ವೃತ್ತ. ಬೆಳಗ್ಗೆ 11ಕ್ಕೆ.
- **ಹಿರಿಯ ನಾಗರಿಕರ ಮಂಡಲಿ:** ಮಾಸಿಕ ಉಪನ್ಯಾಸ. 'ಹಿರಿಯ ನಾಗರಿಕರ ಆದಾಯ ತೆರಿಗೆಯಲ್ಲಿ ವಿನಾಯಿತಿಗಳು' ಕುರಿತು ಆದಾಯ ತೆರಿಗೆ ಸಲಹೆಗಾರರಾದ ಎನ್.ಎಲ್.ನಿತ್ಯಾನಂದ ಅವರಿಂದ ಉಪನ್ಯಾಸ. ಅಧ್ಯಕ್ಷತೆ: ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ.ಹೆಚ್.ಎಂ.ನಾಗರಾಜು. ಸ್ಥಳ: ಸರಸ್ವತಿ ಸಮುದಾಯ ಭವನ(ಹಿರಿಯ ನಾಗರಿಕರ ಮಂಡಳಿ), ಆಸ್ಪತ್ರೆ ರಸ್ತೆ, ಜಯಲಕ್ಷ್ಮೀಪುರಂ. ಸಂಜೆ 5 ಗಂಟೆಗೆ.
- **ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ಹನುಮ ಜಯಂತಿ ಕಾರ್ಯಕ್ರಮ. ಸಂಜೆ 6.30ರಿಂದ ಪುಣ್ಯಾಹವಾಚನ, ರಕ್ಷಾ ಬಂಧನ, ಗಣಪತಿ ಹೋಮ, ನವಗ್ರಹ ಹೋಮ, ಸುದರ್ಶನ ಹೋಮ, 9.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ. ರಾತ್ರಿ 10ಕ್ಕೆ ಶ್ರೀ ಮುರುಗನ್ ತಂಡದಿಂದ ಅಖಂಡ ಭಜನೆ, ಸ್ಥಳ: ದೇವಸ್ಥಾನದ ಆವರಣ, ಹನುಮಂತನಗರ, ಬನ್ನಿಮಂಟಪ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಎಂ.ಆರ್.ಸುಧಾ, ವ್ಯಾಖ್ಯಾನ ಡಾ.ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಕಸ್ತೂರಿ ಶಂಕರ್, 7.45 ಚಿತ್ರಗೀತೆಗಳು, 8.30 ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಸಂಗೀತ ವಿದ್ವಾಂಸರಾದ ರಾ.ಚಂದ್ರಶೇಖರಯ್ಯ ಅವರೊಂದಿಗೆ ವಿ.ನಂಜುಂಡಸ್ವಾಮಿಯವರು ನಡೆಸಿದ್ಧ ಸಂವಾದ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ ಮೇಧಾ ಮಂಜುನಾಥ್–ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ, ಪ್ರಸ್ತುತಿ: ದಿಗ್ವಿಜಯ್.ಬಿ, 12.05 ವನಿತಾ ವಿಹಾರ, 12.35–ದೇವರನಾಮ, 12.45 ನಮ್ಮ ಆರೋಗ್ಯ ಅಂತಾರಾಷ್ಟ್ರೀಯ ವಿಶೇಷ ಚೇತನರ ದಿನಾಚರಣೆಯ ಸಂದೇಶ ಮತ್ತು ಮಹತ್ವ ಕುರಿತು ಮೈಸೂರಿನ ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆಯ ವಾಕ್–ಭಾಷಾ ದೋಷ ವಿಭಾಗದ ಮುಖ್ಯಸ್ಥರಾದ ಡಾ.ಜಯಶ್ರೀ ಶಾನಬಾಳ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ, 1.00 ಪ್ರಗತಿ ಪಥ –ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ –ಪ್ರಧಾನಮಂತ್ರಿ ಗ್ರಾಮ್ ಸಡಕ್ ಯೋಜನೆ ಕುರಿತು ಮಾಹಿತಿ. 1.20 ಭಾವಗೀತೆಗಳು–ಟಿ.ಎನ್.ಅಶ್ವಿನಿ. 2.30 ಪ್ರದೇಶ ಸಮಾಚಾರ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಕರ್ನಾಟಕ ಶಾಸ್ತ್ರೀಯ ಸಂಗೀತ: ಜಿ.ಎನ್.ಬಾಲಸುಬ್ರಮಣ್ಯಮ್–ಹಾಡುಗಾರಿಕೆ, 4.00 ಮಹಿಳಾರಂಗ ನನ್ನ ಹಕ್ಕು ನನ್ನ ಜವಾಬ್ದಾರಿ–ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ. ಭಾಗವಹಿಸುತ್ತಾರೆ–ಮೈಸೂರಿನ ವಕೀಲರಾದ ಎಂ.ಎನ್.ಸುಮನಾ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಎಸ್.ಎನ್.ಭಟ್ ಸೈಪಂಗಲ್ಲು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ವಿ.ಸಿ.ಫಾರಂ, ಕೃಷಿ ಮೇಳ ಕುರಿತು ಸಂವಾದ. ಭಾಗವಹಿಸುತ್ತಾರೆ–ಮಂಡ್ಯದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸಂಶೋಧನಾ ನಿರ್ದೇಶಕರಾದ ಡಾ.ಜಿ.ಎಂ. ದೇವಗಿರಿ ಹಾಗೂ ವಿಸ್ತರಣಾ ನಿರ್ದೇಶಕರಾದ ಡಾ.ಸಿ.ರಾಮಚಂದ್ರ. ಪ್ರಸ್ತುತಿ–ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಸಂಸತ್ ಸಮೀಕ್ಷಾ, 8.15 ಯುವವಾಣಿ: ಸದ್ವಿದ್ಯ ಸೆಮಿ ರೆಸಿಡೆನ್ಷಿಯಲ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಎನ್.ರವಿಕಿರಣ್ –ಗೋಟುವಾದ್ಯ ವಾದನ 10.00 Recordings of the proceedings of the question hour in the parliament.

ಹರಿಣಗಳ ವಿರುದ್ಧ ಭಾರತಕ್ಕೆ ಪ್ರಯಾಸದ ಗೆಲುವು

ಸರಣಿಯಲ್ಲಿ 1-0 ಯಿಂದ ಮುನ್ನಡೆ, ಶತಕ ಸಿಡಿಸಿದ ಕೊಹ್ಲಿ ಪಂದ್ಯಶ್ರೇಷ್ಠ



ರಾಂಚಿ, ನ.30– ರೋಚಕತೆಯಿಂದ ಕೂಡಿದ್ದ ಏಕದಿನ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಅವರ ಶತಕ, ರೋಹಿತ್ ಶರ್ಮಾ ಮತ್ತು ನಾಯಕ ಕೆ.ಎಲ್.ರಾಹುಲ್ ಅವರ ಅರ್ಧಶತಕಗಳ ನೆರವಿನಿಂದ ದಕ್ಷಿಣ ಆಫ್ರಿಕಾ ವಿರುದ್ಧ ಭಾರತ 17 ರನ್‌ಗಳ ಜಯಗಳಿಸಿದೆ. ಆ ಮೂಲಕ 3 ಪಂದ್ಯಗಳ ಏಕದಿನ ಸರಣಿಯಲ್ಲಿ ಭಾರತ 1–0 ಅಂತರದ ಮುನ್ನಡೆ ಸಾಧಿಸಿದೆ.

ರಾಂಚಿಯ ಜೆಎಸ್‌ಸಿಎ ಕ್ರಿಡಾಂಗಣದಲ್ಲಿ ಭಾನುವಾರ ನಡೆದ ಪ್ರಥಮ ಏಕದಿನ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 50 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 349 ರನ್ ಪೇರಿಸಿತು. ಕಠಿಣ ಮೊತ್ತ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ 49.2 ಓವರ್‌ಗಳಲ್ಲಿ 332 ರನ್‌ಗಳಿಗೆ ಆಲೌಟ್ ಆಗಿ ಸೋಲೊಪ್ಪಿಕೊಂಡಿತು.

ಆರಂಭದಲ್ಲಿ ಆಫ್ರಿಕಾ ವಿಕೆಟ್ ಕಳೆದುಕೊಂಡಿದ್ದರೂ, ಮಧ್ಯಮ ಕ್ರಮಾಂಕ ಮತ್ತು ಇನ್ನಿಂಗ್ಸ್ ಕೊನೆಯಲ್ಲಿ ಬ್ಯಾಟ್ಸ್‌ಮನ್‌ಗಳು ಅಬ್ಬರಿಸಿದ ಪರಿಣಾಮ ಪಂದ್ಯ ರೋಚಕತೆಯತ್ತ ಸಾಗಿತ್ತು. ಸ್ಲಾಗ್ ಓವರ್‌ನಲ್ಲಿ ಭಾರತೀಯ ಬೌಲರ್‌ಗಳು ಉತ್ತಮ ನಿಯಂತ್ರಣ ಸಾಧಿಸಿದ ಪರಿಣಾಮ ಭಾರತ ಪಂದ್ಯವನ್ನು ಕೊನೆಯ ಓವರ್‌ನಲ್ಲಿ ಗೆದ್ದುಕೊಂಡಿತು.

ಆರಂಭಿಕ ಆಘಾತ: ಭಾರತ ನೀಡಿದ ಬೃಹತ್ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ 11 ರನ್ ಆಗುವಷ್ಟರಲ್ಲೇ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಹರ್ಷಿತ್ ರಾಣಾ ಅವರ ಮೊದಲ ಓವರ್‌ನಲ್ಲಿ ರಿಯಾನ್ ರಿಕೆಲ್ಟನ್ ಮತ್ತು ಕ್ವಿಂಟನ್ ಡಿಕಾಕ್ ಅವರ ವಿಕೆಟ್ ಎಗರಿಸಿದರೆ, ಅರ್ಶದೀಪ್ ಸಿಂಗ್ 7 ರನ್ ಗಳಿಸಿದ್ದ ನಾಯಕ ಏಡನ್ ಮಾಕ್ರಂ ಅವರನ್ನು ಬಲಿ ಪಡೆಯುವುದರಲ್ಲಿ ಯಶಸ್ವಿಯಾದರು.

ಈ ವೇಳೆ ಜೊತೆಯಾದ ಮ್ಯಾಥ್ಯೂ ಬ್ರೀಟ್ಜ್ಕೆ ಮತ್ತು ಟೋನಿ ಡಿ ಜೋರ್ಜಿ 66 ರನ್ ಜೊತೆಯಾಟವಾಡುವ ಮೂಲಕ ಇನ್ನಿಂಗ್ಸ್ ಕಟ್ಟಿದರಾದರೂ, ಟೋನಿ ಡಿ ಜೋರ್ಜಿ 39 ರನ್ ವಿಕೆಟ್ ಒಪ್ಪಿಸಿದರು. ಈ ವೇಳೆ ಬಂದ ಡೆವಾಲ್ಡ್ ಬ್ರೆವಿಸ್ 37 ರನ್ ಗಳಿಸಿ ಬಂದಷ್ಟೇ ವೇಗವಾಗಿ ನಿರ್ಗಮಿಸಿದರು. ಈ ವೇಳೆ ತಂಡದ ಮೊತ್ತ 21.4 ಓವರ್‌ಗಳಲ್ಲಿ 130 ರನ್ ಆಗಿತ್ತು. ಈ ವೇಳೆ ಕ್ರೀಸ್‌ಗೆ ಆಗಮಿಸಿದ ಮಾರ್ಕೋ ಯಾನ್ಸನ್ 6ನೇ ವಿಕೆಟಿಗೆ ಮ್ಯಾಥ್ಯೂ ಬ್ರೀಟ್ಜ್ಕೆ ಜೊತೆಗೂಡಿ 69 ಎಸೆತಗಳಲ್ಲಿ 97 ರನ್ ಚಚ್ಚಿದರು. ಆದರೆ 39 ಎಸೆತಗಳಲ್ಲಿ 8 ಬೌಂಡರಿ, 3 ಸಿಕ್ಸರ್ ಒಳಗೊಂಡ ಬಿರುಸಿನ 70 ರನ್ ಗಳಿಸಿ ಮಾರ್ಕೋ ಯಾನ್ಸನ್ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ ಮ್ಯಾಥ್ಯೂ ಬ್ರೀಟ್ಜ್ಕೆ 80 ಎಸೆತಗಳಲ್ಲಿ 72 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇನ್ನಿಂಗ್ಸ್ ಕೊನೆಯಲ್ಲಿ ಪ್ರೆನೆಲನ್ ಸುಬ್ರಯೆನ್ ಹಾಗೂ ನಂಡ್ರೆ ಬರ್ಗರ್ ತಲಾ 17 ರನ್ ಗಳಿಸಿ ವಿಕೆಟ್ ಒಪ್ಪಿಸಿದರೇ, ಕಾರ್ಬಿನ್ ಬಾಷ್ ಏಕಾಂಗಿ ಹೋರಾಟದ ಫಲವಾಗಿ ದಕ್ಷಿಣ ಆಫ್ರಿಕಾ 300 ರನ್ ದಾಟಿತಾದರೂ ಗುರಿ ತಲುಪಲು ಸಾಧ್ಯವಾಗಲಿಲ್ಲ. ಉಳಿದಂತೆ ಕಾರ್ಬಿನ್ ಬಾಷ್ 4 ಸಿಕ್ಸರ್, 5 ಬೌಂಡರಿ ಒಳಗೊಂಡ 67 ರನ್ ಗಳಿಸಿ ನಿರ್ಗಮಿಸಿದರು. ಭಾರತದ ಪರ ಕುಲದೀಪ್ ಯಾದವ್ 4, ಹರ್ಷಿತ್ ರಾಣಾ 3, ಅರ್ಷ್‌ದೀಪ್ ಸಿಂಗ್ 2, ಪ್ರಸಿದ್ಧ ಕೃಷ್ಣ 1 ವಿಕೆಟ್ ಕಬಳಿಸಿದರು.

ರೋ–ಕೋ ಕಮಾಲ್: ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 18 ರನ್ ಗಳಿಸಿ ಉತ್ತಮ ಲಯದಲ್ಲಿದ್ದಂತೆ ಕಾಣುತ್ತಿದ್ದ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಅವರ ವಿಕೆಟ್ ಅನ್ನು ಬಹುಬೇಗ ಕಳೆದುಕೊಂಡಿತು. ಈ ವೇಳೆ ಜೊತೆಯಾದ ಅನುಭವಿಗಳಾದ ರೋಹಿತ್ ಶರ್ಮಾ ಮತ್ತು ಕೊಹ್ಲಿ ಇನ್ನಿಂಗ್ಸ್ ಕಟ್ಟಲಾರಂಭಿಸಿದರು. ಆರಂಭದಲ್ಲಿ ರೋಹಿತ್ ಗಿಂತಲೂ ವಿರಾಟ್ ಕೊಹ್ಲಿ ಅವರು ವೇಗವಾಗಿ ಬ್ಯಾಟ್ ಬೀಸಿದರು. ಈ ಹಂತದಲ್ಲಿ ದೊಡ್ಡ ಹೊಡೆತಕ್ಕೆ ಕೈ ಹಾಕಿದ್ದ ರೋಹಿತ್ ಅವರ ಕ್ಯಾಚೊಂದನ್ನು ದಕ್ಷಿಣ ಆಫ್ರಿಕಾ ಫೀಲ್ಡರ್ ಜಾರ್ಝಿ ಅವರು ಕೈ ಚೆಲ್ಲಿದರು. ಇದನ್ನು ಸದುಪಯೋಗಪಡಿಸಿಕೊಂಡ ಈ ಜೋಡಿ 2ನೇ ವಿಕೆಟ್ 136 ರನ್‌ಗಳ ಜೊತೆಯಾಟವಾಡಿತು. ಆದರೆ ಈ ವೇಳೆ 51 ಎಸೆತಗಳಲ್ಲಿ 3 ಸಿಕ್ಸರ್, 5 ಬೌಂಡರಿ ಒಳಗೊಂಡ 57 ರನ್ ಗಳಿಸಿ ರೋಹಿತ್ ವಿಕೆಟ್ ಒಪ್ಪಿಸಿದರು. ಈ ಹಂತದಲ್ಲಿ ಅವರು ಏಕದಿನ ಕ್ರಿಕೆಟ್ ನಲ್ಲಿ ಅತಿ ಹೆಚ್ಚು ಸಿಕ್ಸರ್(352) ಸಿಡಿಸಿದ ವಿಶ್ವದಾಖಲೆ ಬರೆದರು.

ನಂತರ ಬಂದ ಋತುರಾಜ್ ಗಾಯಕ್ವಾಡ್ 8, ವಾಷಿಂಗ್ಟನ್ ಸುಂದರ್ 13 ರನ್ ಗಳಿಸಿ ಬಹುಬೇಗ ವಿಕೆಟ್ ಒಪ್ಪಿಸಿದರು. ಈ ವೇಳೆ ಜೊತೆಯಾದ ನಾಯಕ ಕೆ.ಎಲ್.ರಾಹುಲ್ ಹಾಗೂ ಕೊಹ್ಲಿ 5ನೇ ವಿಕೆಟ್‌ಗೆ 74 ರನ್ ಗಳಿಸಿದರು. ಮತ್ತೊಂದೆಡೆ ಅಬ್ಬರಿಸಿದ ಕೊಹ್ಲಿ ತಮ್ಮ 52ನೇ ಶತಕ ಸಿಡಿಸಿ ಸಂಭ್ರಮಿಸಿದರು. ಅಂತಿಮವಾಗಿ ಕೊಹ್ಲಿ 120 ಎಸೆತಗಳಲ್ಲಿ 7 ಸಿಕ್ಸರ್, 11 ಬೌಂಡರಿ ಒಳಗೊಂಡ 135 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ನಾಯಕನಿಗೆ ತಕ್ಕ ಆಟವಾಡಿದ ರಾಹುಲ್ 60, ರವಿಂದ್ರ ಜಡೇಜಾ ಅವರ 32 ರನ್‌ಗಳ ನೆರವಿನಿಂದ ಭಾರತ 300 ದಾಟುವುದರೊಂದಿಗೆ ಬೃಹತ್ ಮೊತ್ತ ದಾಖಲಿಸಲು ಸಾಧ್ಯವಾಯಿತು. ದಕ್ಷಿಣ ಆಫ್ರಿಕಾ ಪರ ಮಾರ್ಕೋ ಯಾನ್ಸನ್, ಬರ್ಗರ, ಕಾರ್ಬಿನ್ ಬಾಶ್ ಮತ್ತು ಬಾರ್ಟ್‌ಮನ್ ತಲಾ 2 ವಿಕೆಟ್ ಪಡೆದರು. ಶತಕ ಬಾರಿಸಿದ ವಿರಾಟ್ ಕೊಹ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಸಚಿನ್ ದಾಖಲೆ ಬ್ರೇಕ್: ವಿಶ್ವದಾಖಲೆ ಬರೆದ ಕೊಹ್ಲಿ



ರಾಂಚಿ: ದಕ್ಷಿಣ ಆಫ್ರಿಕಾ ವಿರುದ್ಧ ಮೊದಲ ಏಕದಿನ ಪಂದ್ಯದಲ್ಲಿ ಶತಕ ಸಿಡಿಸುವ ಮೂಲಕ ವಿರಾಟ್ ಕೊಹ್ಲಿ ಸಚಿನ್ ತೆಂಡೂಲ್ಕರ್ ದಾಖಲೆಯನ್ನು ಮುರಿದು ವಿಶ್ವದಾಖಲೆ ನಿರ್ಮಿಸಿದ್ದಾರೆ. ಐಸಿಸಿ ಒಂದು ಮಾದರಿಯ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಶತಕ ಸಿಡಿಸಿದ ದಾಖಲೆಗೆ ಕೊಹ್ಲಿ ಪಾತ್ರವಾಗಿದ್ದಾರೆ. ಇಲ್ಲಿವರೆಗೆ ಸಚಿನ್ ತೆಂಡೂಲ್ಕರ್ ಟೆಸ್ಟ್ ಕ್ರಿಕೆಟ್‌ನಲ್ಲಿ 51 ಶತಕ ಹೊಡೆದಿದ್ದರು. ಕೊಹ್ಲಿ ಇಂದು 102 ಎಸೆತಗಳಲ್ಲಿ 52ನೇ ಶತಕ ಸಿಡಿಸಿ ಸಚಿನ್ ದಾಖಲೆಯನ್ನು ಮುರಿದರು.

ಅತಿ ಹೆಚ್ಚು ಶತಕ ಸಿಡಿಸಿದ ಆಟಗಾರರು

52	ವಿರಾಟ್ ಕೊಹ್ಲಿ	ಏಕದಿನ
51	ಸಚಿನ್ ತೆಂಡೂಲ್ಕರ್	ಟೆಸ್ಟ್
49	ಸಚಿನ್ ತೆಂಡೂಲ್ಕರ್	ಏಕದಿನ
45	ಜಾಕ್ವೆಸ್ ಕಾಲಿಸ್	ಟೆಸ್ಟ್
41	ರಿಕಿ ಪಾಂಟಿಂಗ್	ಟೆಸ್ಟ್

ಹಿಟ್‌ಮ್ಯಾನ್ ಅಬ್ಬರಕ್ಕೆ ಅಫ್ರಿದಿ ದಾಖಲೆ ಉಡೀಸ್

ರಾಂಚಿ: ದಕ್ಷಿಣ ಆಫ್ರಿಕಾ ವಿರುದ್ಧ ನಡೆಯುತ್ತಿರುವ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ಹಿಟ್ ಮ್ಯಾನ್ ರೋಹಿತ್ ಶರ್ಮಾ ಹೊಸ ಇತಿಹಾಸ ನಿರ್ಮಿಸಿದ್ದಾರೆ.



ಪಂದ್ಯದಲ್ಲಿ ಆಕರ್ಷಕ ಅರ್ಧಶತಕ ಸಿಡಿಸಿದ ರೋಹಿತ್ 3 ಸಿಕ್ಸರ್ ಸಿಡಿಸಿ ಅಂತಾರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಅತಿಹೆಚ್ಚು ಸಿಕ್ಸರ್ ಸಿಡಿಸಿದ ವಿಶ್ವದ ನಂ.1 ಆಟಗಾರ ಎಂಬ ದಾಖಲೆ ಬರೆದಿದ್ದಾರೆ.

ಮಾರ್ಕೋ ಜಾನ್ಸನ್ ಅವರ ಪಾಲಿನ 5ನೇ ಈವರ್‌ನ 5ನೇ ಎಸೆತದಲ್ಲಿ ಭರ್ಜರಿ ಸಿಕ್ಸರ್ ಸಿಡಿಸುವ ಮೂಲಕ ಏಕದಿನ ಕ್ರಿಕೆಟ್‌ನಲ್ಲಿ 352 ಸಿಕ್ಸರ್ ಪೂರೈಸಿದರು. ಇದರೊಂದಿಗೆ ಏಕದಿನ ಕ್ರಿಕೆಟ್‌ನಲ್ಲಿ 351 ಸಿಕ್ಸರ್ ಸಿಡಿಸಿದ್ದ ಪಾಕ್ ಮಾಜಿ ನಾಯಕ ಶಾಹಿದ್ ಅಫ್ರಿದಿ ಅವರ ದಾಖಲೆಯನ್ನು ನುಚ್ಚುನೂರು ಮಾಡಿ, ನಂ.1 ಪಟ್ಟಕ್ಕೇರಿದರು. 331 ಸಿಕ್ಸರ್ ಸಿಡಿಸಿರುವ ವೆಸ್ಟ್ ಇಂಡಿಸ್‌ನ ಕ್ರಿಸ್ ಗೇಲ್ 3ನೇ ಸಾಲಿನಲ್ಲಿದ್ದಾರೆ.

ಟಾಪ್–5 ಸಿಕ್ಸರ್ ವೀರರು: ರೋಹಿತ್ ಶರ್ಮಾ 352 ಸಿಕ್ಸರ್, ಶಾಹಿದ್ ಅಫ್ರಿದಿ 351 ಸಿಕ್ಸರ್, ಕ್ರಿಸ್ ಗೇಲ್ 331 ಸಿಕ್ಸರ್, ಸನತ್ ಜಯಸೂರ್ಯ 270 ಸಿಕ್ಸರ್, ಎಂ.ಎಸ್ ಧೋನಿ 229 ಸಿಕ್ಸರ್

ಹಾಸ್ಯ ನಟ ಉಮೇಶ್ ನಿಧನ



ಬೆಂಗಳೂರು, ನ.30–ಕನ್ನಡದ ಹಿರಿಯ ಹಾಸ್ಯ ನಟ ಎಂ.ಎಸ್. ಉಮೇಶ್ ಅವರು ಇಂದು ವಿಧಿವಶರಾಗಿದ್ದಾರೆ. ಅವರಿಗೆ 82 ವರ್ಷ ವಯಸ್ಸಾಗಿತ್ತು. ಹಲವು ದಿನಗಳಿಂದ ಕಿದ್ವಾಯಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ಇಂದು ಬೆಳಗ್ಗೆ 8.30ರ ಸುಮಾರಿಗೆ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಬೆಂಗಳೂರಿನ ಬನಶಂಕರಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿತು. ಬ್ರಾಹ್ಮಣ ಸಂಪ್ರದಾಯದಂತೆ ಉಮೇಶ್ ಅವರ ಸಹೋದರ ರಮೇಶ್ ಪಾರ್ಥಿವ ಶರೀರಕ್ಕೆ ಅಂತಿಮ ವಿಧಿ ವಿಧಾನ ನೆರವೇರಿಸಿ ಅಗ್ನಿ ಸ್ಪರ್ಶ ಮಾಡಿದರು.

ಮಕ್ಕಳ ರಾಜ್ಯ ಚಿತ್ರ 1960ರಲ್ಲಿ ಬಂದಿತ್ತು ಎಂ.ಎಸ್.ಉಮೇಶ್ ಅವರು ಈ ಚಿತ್ರದ ನಾಯಕರಾಗಿದ್ದರು. ಬಿ.ಆರ್.ಪಂತುಲು ಈ ಚಿತ್ರವನ್ನು ನಿರ್ದೇಶನ ಮಾಡಿದ್ದರು. ಈ ಒಂದು ಚಿತ್ರದ ಮೂಲಕವೇ ಎಂ. ಎಸ್. ಉಮೇಶ್ ಕನ್ನಡಿಗರಿಗೆ ಪರಿಚಯ ಆದರು.

ಅಪಾರ್ಥ ಮಾಡ್ಕೋಬೇಡಿ: 350ಕ್ಕೂ ಹೆಚ್ಚು ಕನ್ನಡ ಸಿನಿಮಾಗಳಲ್ಲಿ ನಟಿಸಿದ್ದ ಉಮೇಶ್ ಅವರು 'ಅಪಾರ್ಥ ಮಾಡ್ಕೋಬೇಡಿ' ಡೈಲಾಗ್ ನಿಂದ ಮನೆಮಾತಾಗಿದ್ದರು. ಅನಂತನಾಗ್ ಮುಖ್ಯಭೂಮಿಕೆಯಲ್ಲಿದ್ದ ಗೋಲ್‌ಮಾಲ್ ರಾಧಾಕೃಷ್ಣ ಚಿತ್ರದ ಸೀತಾಪತಿ ಪಾತ್ರ ತುಂಬಾ ಉಮೇಶ್ ಅವರಿಗೆ ಬಹಳಷ್ಟು ಜನಪ್ರಿಯತೆ ತಂದುಕೊಟ್ಟಿತು.

ಮೈಸೂರಿನಲ್ಲಿ ಉಮೇಶ್ 1945 ರ ಏಪ್ರಿಲ್ 24 ರಂದು ಎ.ಎಲ್. ಶ್ರೀಕಂಠಯ್ಯ ಮತ್ತು ನಂಜಮ್ಮ ದಂಪತಿ ಮಗನಾಗಿ ಹುಟ್ಟಿ ಬೆಳೆದ ಉಮೇಶ್ ರಂಗಭೂಮಿ ಸೆಳೆತಕ್ಕೆ ಒಳಗಾಗಿದ್ದರು. 4ನೇ ವಯಸ್ಸಿನಲ್ಲಿ ಮಾಸ್ಟರ್ ಹಿರಣ್ಣಯ್ಯ ನಡೆಸುತ್ತಿದ್ದ ಜನಪ್ರಿಯ ರಂಗಭೂಮಿ ತಂಡ ಸೇರಿ ಬಾಲ ಕಲಾವಿದರ ಪಾತ್ರಗಳಲ್ಲಿ ನಟಿಸಿದ್ದರು.

10 ದಿನಗಳ ಬೆಳಗಾವಿ ಅಧಿವೇಶನದ ಅಂದಾಜು ವೆಚ್ಚ 21 ಕೋಟಿ ರೂ.

ಬೆಳಗಾವಿ, ನ.30– ಇಲ್ಲಿನ ಸುವರ್ಣ ವಿಧಾನ ಸೌಧದಲ್ಲಿ ಡಿ.8 ರಿಂದ 19ರವರೆಗೆ ನಡೆಯುವ 14ನೇ ಚಳಿಗಾಲದ ಅಧಿವೇಶನಕ್ಕೆ 21 ಕೋಟಿ ರೂ. ವೆಚ್ಚ ಅಂದಾಜಿಸಲಾಗಿದೆ. ಕಳೆದ ವರ್ಷ 15.30 ಕೋಟಿ ವೆಚ್ಚವಾಗಿತ್ತು. ಈ ಬಾರಿ ರಕ್ಷಣೆ ಹಾಗೂ ಆಹಾರಕ್ಕಾಗಿ ಹೆಚ್ಚುವರಿ ವೆಚ್ಚ ಮಾಡಲಾಗುತ್ತಿದೆ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

ಪ್ರತಿವರ್ಷ ವೆಚ್ಚದಲ್ಲಿ ಶೇ 10ರಷ್ಟು ಹೆಚ್ಚಳ ಆಗುವುದು ಸಹಜ. ಆದರೆ, ಇತ್ತೀಚೆಗೆ ನವದೆಹಲಿಯಲ್ಲಿ ಬಾಂಬ್ ಸ್ಫೋಟದ ಹಿನ್ನೆಲೆಯಲ್ಲಿ ಈ ಬಾರಿ ಭದ್ರತೆಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ಸುಮಾರು 6 ಸಾವಿರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗುತ್ತಿದೆ. ಪ್ರತಿವರ್ಷ ಈ ಸಂಖ್ಯೆ 4 ಸಾವಿರ ಇರುತ್ತಿತ್ತು.

ಈ ವರ್ಷ ಊಟಕ್ಕೂ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಒಂದೊಂದು ದಿನ ರಾಜ್ಯದ ಒಂದೊಂದು ಪ್ರದೇಶದ ವಿಶೇಷ ಖಾದ್ಯಗಳನ್ನು ಉಣಬಡಿಸಲಾಗುವುದು. ದೈನಂದಿನ ಊಟದಲ್ಲಿ ಜೋಳದ ರೊಟ್ಟಿ, ಸಜ್ಜಿ ಖಡಕ್ ರೊಟ್ಟಿ, ಅಕ್ಕಿರೊಟ್ಟಿ, ಚಪಾತಿ, ತಹರೇವಾರು ಚಟ್ನಿ, ಮೂರು ತರಹದ ಪಲ್ಯ, ಕುಚಲಕ್ಕಿ, ಸಾದಾ ಅನ್ನ, ಮೊಸರನ್ನ, ಮಸಾಲೆ ಅನ್ನ ಸಿದ್ಧಪಡಿಸಲಾಗುವುದು. ಕುಂದಾ, ಕರದಂಟು, ಮೈಸೂರು ಶ್ರೀ, ಬೇಳೆ ಹಲ್ವ, ಗಜ್ಜರಿ ಹಲ್ವ, ಮೋತಿಚೂರ್ ಉಂಡಿ, ಜಾಮೂನ್, ಗೋಧಿಹುಗ್ಗಿ, ರಸ್‌ಮಲಾಯ್... ಹೀಗೆ ಹಲವಾರು ಸಿಹಿ ಖಾದ್ಯಗಳನ್ನೂ ಹೆಚ್ಚುವರಿಯಾಗಿ ಸೇರಿಸಲಾಗಿದೆ.

2023ರವರೆಗೆ ಒಟ್ಟು 13 ಅಧಿವೇಶನಗಳು ನಡೆದಿದ್ದು, ಒಟ್ಟು 169.6 ಕೋಟಿ ಹಣ ಖರ್ಚಾಗಿದೆ. ಸುವರ್ಣ ವಿಧಾನಸೌಧದ ಬಳಿ ಶಾಸಕರ ಭವನ ನಿರ್ಮಿಸಿದರೆ ವಸತಿ ವೆಚ್ಚ ತಗ್ಗಿಸಬಹುದು ಎಂಬ ಆಗ್ರಹವನ್ನು ಈ ಭಾಗದ ಸಂಘಟನೆಗಳು ಮಾಡುತ್ತಲೇ ಬಂದಿವೆ. ಪ್ರಸಕ್ತ ವರ್ಷವೂ 4,100ಕ್ಕೂ ಹೆಚ್ಚು ಕೋಣೆಗಳನ್ನು ಜಿಲ್ಲಾಡಳಿತ ಬುಕ್ ಮಾಡಿದೆ.

ಇಂದು ವಿಶೇಷ ಉಪನ್ಯಾಸ

ಮೈಸೂರು, ನ.30–ಮೈಸೂರು ಜಯಲಕ್ಷ್ಮೀಪುರಂ ಆಸ್ಪತ್ರೆ ರಸ್ತೆಯಲ್ಲಿರುವ ಹಿರಿಯ ನಾಗರಿಕರ ಮಂಡಳಿ ವತಿಯಿಂದ ಡಿ.1ರಂದು ಸಂಜೆ 5 ಗಂಟೆಗೆ 'ಹಿರಿಯ ನಾಗರಿಕರ ಆದಾಯದಲ್ಲಿ ತೆರಿಗೆ ವಿನಾಯ್ತಿಗಳು' ಕುರಿತು ಆದಾಯ ತೆರಿಗೆ ಸಲಹೆಗಾರರ ಎನ್.ಎಲ್.ನಿತ್ಯಾನಂದ ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದು ಕಾರ್ಯದರ್ಶಿ ಕೆ.ಎಸ್.ಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ: ರೀ... ನಿಮ್ಮ ಮೊಬೈಲ್ ಕದ್ಕೊಂಡ್ ಹೋಗ್ತಾ ಇದ್ದಾನೆ ನೋಡಿ

ಗಂಡ : ಎಲ್ಲೇ ಹೋಗ್ತಾನೆ. ಬ್ಯಾಟರಿ ಖಾಲಿಯಾದ ಮೇಲೆ ನಮ್ಮ ಮನೆಗೆ ಬರಬೇಕು.

ಹೆಂಡತಿ: ಯಾಕೆ?

ಗಂಡ : ಚಾರ್ಜರ್ ನಮ್ಮ ಮನೇಲೆ ಅಲ್ವಾ ಇರೋದು!

ಮೈಸೂರು ಮಿತ್ರ

ಸೋಮವಾರ, 1 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಶಾಸ್ತ್ರದಲ್ಲಿ ದೋಷವಿದ್ದರೆ ಹೃದಯದಲ್ಲಿ ತಿದ್ದಬಹುದು. ಹೃದಯದಲ್ಲಿ ದೋಷವಿದ್ದರೆ ಶಾಸ್ತ್ರ ಏನು ಮಾಡುವುದು? –ದ.ರಾ.ಬೇಂದ್ರೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಊರಿಗೆ ದೊರೆ ಆದರೂ ತಾಯಿಗೆ ಮಗನೆ.

ನಿಮ್ಮ ಪತ್ರಗಳು

ಬಿಹಾರದ ಸೋಲು, ಸಿದ್ದರಾಮಯ್ಯಗೆ ವರ

ಮಾನ್ಯರೆ,



ಚುನಾವಣೆಗಳ ಫಲಿತಾಂಶ ಹೇಗೇ ಬಂದರೂ ರಾಜಕೀಯ ಪಕ್ಷಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಅರ್ಥೈಸಿಕೊಂಡು ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತವೆ ಎಂಬುದಕ್ಕೆ ಇತ್ತೀಚಿನ ತಾಜಾ ಉದಾಹರಣೆ ಬಿಹಾರ ಚುನಾವಣೆಯಲ್ಲಿ ಕಾಂಗ್ರೆಸ್ ನೆಲ ಕಚ್ಚಿದುದು.

ಈ ಫಲಿತಾಂಶದಿಂದ ಹೈಕಮಾಂಡ್ ತೀವ್ರ ನಿಗಾ ಘಟಕಕ್ಕೆ ಹೋಗಿರುವುದರಿಂದ ಕರ್ನಾಟಕದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನೆ ಮಾಡುವ ಇಲ್ಲವೇ ಅವರ ಮೇಲೆ ಅಧಿಕಾರ ಚಲಾಯಿಸುವ ಶಕ್ತಿ ಕಳೆದುಕೊಂಡಿದೆ. ಅವರ ಸ್ಥಾನ ಅಭಾದಿತ ಮಾತ್ರವಲ್ಲ ಅವರು ಏನು ಮಾಡಿದರೂ ಹೈಕಮಾಂಡ್ ಉಸಿರೆತ್ತುವ ಸ್ಥಿತಿಯಲ್ಲಿ ಇಲ್ಲ ಎಂದು ಎಲ್ಲರೂ ಅರ್ಥೈಸುತ್ತಿದ್ದಾರೆ. ಈ ಮೂಲಕ ಸಿದ್ದರಾಮಯ್ಯನವರು ತಮ್ಮ ಪಕ್ಷದ ಸೋಲನ್ನೇ ತಮ್ಮ ಭದ್ರತೆಗೆ ಉಪಯೋಗಿಸಿಕೊಳ್ಳುವ ಚಾಣಾಕ್ಷತನ ತೋರಿದರು ಎಂಬುದರಲ್ಲಿ ಎರಡು ಮಾತಿಲ್ಲ. ಕೆಲವರಂತೂ ಸಿದ್ದರಾಮಯ್ಯ ಇರುವವರೆಗೆ ಕಾಂಗ್ರೆಸ್ ಸಿದ್ದರಾಮಯ್ಯ ಇಲ್ಲವೆಂದರೆ ಕಾಂಗ್ರೆಸ್ಸೇ ಇಲ್ಲ ಎಂದೂ ಫರ್ಮಾನು ಹೊರಡಿಸುವಷ್ಟರ ಮಟ್ಟಿಗೆ ಸಿದ್ದರಾಮಯ್ಯನವರ ಚತುರತೆಯನ್ನು ಮೆಚ್ಚುಕೊಳ್ಳ ತೊಡಗಿದ್ದಾರೆ. (ಹಿಂದೊಮ್ಮೆ ಇಂದಿರಾ ಅಂದರೆ ಇಂಡಿಯಾ, ಇಂಡಿಯಾ ಅಂದರೆ ಇಂದಿರಾ ಎನ್ನುವ ಘೋಷಣೆಯನ್ನು ಅಂದಿನ ಕಾಂಗ್ರೆಸ್ ಅಧ್ಯಕ್ಷರು ನೀಡಿದಂತೆ).

ಆದರೆ ಹಿಂದೆ ಹಿಮಾಚಲ ಪ್ರದೇಶ, ತೆಲಂಗಾಣಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಕರ್ನಾಟಕದಲ್ಲಿ ಸಿದ್ದರಾಮಯ್ಯನವರು ಜಾರಿಗೊಳಿಸಿದ ಗ್ಯಾರಂಟಿಗಳ ಪ್ರಭಾವದಿಂದ ಅಲ್ಲಿ ಕಾಂಗ್ರೆಸ್ ಗೆದ್ದಿದೆ. ಅದರ ಸಂಪೂರ್ಣ ಶ್ರೇಯಸ್ ಸಿದ್ದರಾಮಯ್ಯನವರಿಗೆ ಸಲ್ಲುತ್ತದೆ ಎಂದೇ ಬಿಂಬಿಸಿದ್ದರು. ನ.24ರಂದು ಮುಖ್ಯಮಂತ್ರಿಗಳು ಶಿಡ್ಲಘಟ್ಟದ ಕಾರ್ಯಕ್ರಮವೊಂದರಲ್ಲಿ ಇನ್ನು ಮುಂದೆ ದೇಶಕ್ಕೆ ಗುಜರಾತ್ ಮಾದರಿಯಲ್ಲ ಕರ್ನಾಟಕ ಮಾದರಿ ಎಂದೂ ಅಪ್ಪಣೆ ಕೊಡಿಸಿದ್ದಾರೆ.

ಆದರೆ ಈಗ ಬಿಹಾರ್ ಚುನಾವಣೆಯ ಸಂದರ್ಭದಲ್ಲಿ ಕರ್ನಾಟಕಕ್ಕಿಂತಲೂ ದೊಡ್ಡ ಮತ್ತು ಹೆಚ್ಚಿನ ಮೊತ್ತದ ಗ್ಯಾರಂಟಿಗಳನ್ನು ಮಹಾಘಟಬಂಧನ್ ಘೋಷಿಸಿದರೂ ಅಲ್ಲಿ ಕಾಂಗ್ರೆಸ್ ನೆಲಕಚ್ಚಿದೆ. ಸಿದ್ದರಾಮಯ್ಯನವರ ಗ್ಯಾರಂಟಿಗಳು ಜನಪರವೂ ಅಲ್ಲ ಪ್ರಗತಿ ಪರವೂ ಅಲ್ಲ. ಕೇವಲ ಆಮಿಷಗಳ ಮೂಲಕ ಸರಕಾರದ ಹಣವನ್ನು ಅನುತ್ಪಾದಕ ದಾರಿಯಲ್ಲಿ ಹರಿ ಬಿಟ್ಟು ರಾಜ್ಯವನ್ನು ದಿವಾಳಿಯತ್ತ ತಳ್ಳುತ್ತವೆ ಎಂದು ಅಲ್ಲಿನ ಮಹಿಳೆಯರು ಮತ್ತು ಯುವಜನ ಮನಗಂಡೇ ಘಟಬಂಧನಕ್ಕೆ ಮಣ್ಣು ಮುಕ್ಕಿಸಿದ್ದಾರೆ ಎಂದೇಕೆ ಸಿದ್ದರಾಮಯ್ಯನವರು ಆತ್ಮ ವಿಮರ್ಶೆ ಮಾಡಿಕೊಳ್ಳಬಾರದು? ಆ ಮೂಲಕ ಸಿದ್ದರಾಮಯ್ಯನವರ ಆಡಳಿತ ವಿಧಾನ ಮತ್ತು ಗ್ಯಾರಂಟಿಗಳು ಬೆಲೆ ಕಳೆದುಕೊಂಡು ಈಗ ಬಿಹಾರ್ ಚುನಾವಣೆಯಲ್ಲಿ ಪಕ್ಷಕ್ಕೆ ಹಾನಿ ಮಾಡಿದುವು ಎಂದೇ ಭಾವಿಸಬಹುದಲ್ಲವೇ? ಚುನಾವಣೆ ನಡೆಯುವ ಸಮಯದಲ್ಲಿ ಇತರೆ ರಾಜ್ಯದಲ್ಲಿರುವ ಆಯಾ ಪಕ್ಷದ ಸರಕಾರಗಳು ಕೈಗೊಳ್ಳುವ ಆಡಳಿತ ವೈಖರಿಗಳು ಚುನಾವಣೆ ನಡೆಯುವ ರಾಜ್ಯದ ಮೇಲೆ ಪ್ರಭಾವ ಬೀರೇ ಬೀರುತ್ತವೆ ಎಂಬುದು ಸಾರ್ವತ್ರಿಕವಾಗಿ ಒಪ್ಪಿಕೊಂಡಿರುವ ವಿಷಯ.

ಅದರಲ್ಲಿಯೂ ಇಂದಿನ ಇಂಟರ್‌ನೆಟ್ ಮತ್ತು ಪ್ರಭಾವಶಾಲಿ ಮಾಧ್ಯಮಗಳನ್ನು ಕ್ಷಣ ಕ್ಷಣವೂ ಗಮನಿಸುವ ಚಾತುರ್ಯ ಹೊಂದಿರುವ ಜನ ತಾವು ಮತದಾನ ಮಾಡುವಾಗ ಇಂತಹುದನ್ನು ವಿಮರ್ಶೆ ಮಾಡುವ ಶಕ್ತಿ ಹೊಂದಿರುತ್ತಾರೆ ಎಂಬುದಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕಿಲ್ಲ. ವಿರೋಧ ಪಕ್ಷಗಳು ಸರಕಾರದ ಮೇಲೆ ಮುಗಿ ಬೀಳಲು ಸಿಕ್ಕಿದ್ದ ಒಂದು ಹೊಸ ಅಸ್ತ್ರವನ್ನು ಚತುರ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮಗೆ ಅನುಕೂಲಕರ ದಿಕ್ಕಿನಲ್ಲಿ ಬಳಸಿಕೊಂಡು ವ್ಯರ್ಥ ಮಾಡುವಲ್ಲಿ ಸಫಲರಾದರು ಎಂದು ಅವರನ್ನು ಅಭಿನಂದಿಸೋಣವೇ?

–ದೊಡ್ಡಕಮರವಳ್ಳಿ, ಸಿದ್ದಲಿಂಗಪ್ಪ, ಜೆ.ಪಿ.ನಗರ, ಮೈಸೂರು.

ತಿ.ನರಸೀಪುರ ಪುರಸಭೆಯ ನಿರ್ಲಕ್ಷ್ಯ; ಪರಿತಪಿಸುತ್ತಿರುವ ನಿವಾಸಿಗಳು



ಮಾನ್ಯರೆ,

ತಿ.ನರಸೀಪುರದಲ್ಲಿ ಪುರಸಭೆ ಇದ್ದು ಇಲ್ಲದಂತಾಗಿದೆ. ಮನೆಗಳಿಂದ ಕಸ ಸಂಗ್ರಹಿಸುವ ಪುರಸಭೆ ವಾಹನದ ಸಿಬ್ಬಂದಿ ಸರಿಯಾಗಿ ಕರ್ತವ್ಯ ನಿರ್ವಹಿಸದ ಕಾರಣ ನಿವಾಸಿಗಳು ಪರಿತಪಿಸುವಂತಾಗಿದೆ. ತ್ರಿವೇಣಿನಗರ ವ್ಯಾಪ್ತಿಯಲ್ಲಿ ನಾಯಿಯೊಂದು ಸತ್ತು 3 ದಿನಗಳಾದರೂ ಅದನ್ನು ಅಲ್ಲಿಂದ ತೆಗೆಯದೇ ಬಿಟ್ಟಿರುವುದರಿಂದ ಕೊಳೆತ ವಾಸನೆಯಿಂದ ಬಡಾವಣೆ ನಿವಾಸಿಗಳಿಗೆ ತೀವ್ರ ತೊಂದರೆ ಎದುರಿಸುವಂತಾಗಿದೆ. 7ನೇ ವಾರ್ಡಿನ ಮಹಾನಾಯಕ ವೃತ್ತದ ರಸ್ತೆಯ ಚರಂಡಿಯಲ್ಲಿ ಕಸದ ರಾಶಿಯೇ ತುಂಬಿಕೊಂಡಿದ್ದರೂ ಅದನ್ನು ತೆಗೆಸುವ ಕೆಲಸ ಸಹ ಪುರಸಭೆಯಿಂದ ಆಗುತ್ತಿಲ್ಲ. ಇದು ಸಹ ನಿವಾಸಿಗಳಲ್ಲಿ ಅನಾರೋಗ್ಯದ ಆತಂಕ ಕಾಡುತ್ತಿದೆ. ಮನೆ ಮನೆ ಕಸ ಸಂಗ್ರಹಿಸಲು ಪ್ರತಿ ನಿತ್ಯ ಪುರಸಭೆ ವಾಹನ ಬರುತ್ತಿದೆಯಾದರೂ ಸತ್ತಿರುವ ನಾಯಿಯನ್ನು ಬೇರೆಡೆಗೆ ಸಾಗಿಸಲು ಮುಂದಾಗುತ್ತಿಲ್ಲ. ಈ ಬಗ್ಗೆ ನಿವಾಸಿಗಳು ಸಿಬ್ಬಂದಿ ಗಮನಕ್ಕೆ ತಂದರೂ ಅವರು ಉಢಾಪೆಯಿಂದ ವರ್ತಿಸುತ್ತಿರುವುದರಿಂದ ಬಡಾವಣೆ ನಿವಾಸಿಗಳು ದುರ್ವಾಸನೆ ತಡೆಯಲಾಗದೇ ಮೂಗು ಮುಚ್ಚಿಕೊಂಡು ಓಡಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಈ ಬಗ್ಗೆ ಕ್ರಮ ಕೈಗೊಂಡು ಬಡಾವಣೆ ನಿವಾಸಿಗಳಿಗೆ ಅನುಕೂಲ ಕಲ್ಪಿಸಿಕೊಡಬೇಕು. **–ನೊಂದ ನಿವಾಸಿಗಳು, ತ್ರಿವೇಣಿನಗರ, ತಿ.ನರಸೀಪುರ**

ವೀರಮಾತೆಗೆ ನಮೋ ನಮಃ !

ಮಾನ್ಯರೆ,

ತನ್ನ ಮರಿಗಳನ್ನು ರಕ್ಷಿಸಿಕೊಳ್ಳಲು ತಾಯಿ ಬೆಕ್ಕೊಂದು ಚಿರತೆಯೊಂದಿಗೆ ಹೋರಾಟ ಮಾಡಿ ಪ್ರಾಣಬಿಟ್ಟ ಬಗ್ಗೆ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕು ಬೆಳಗನಹಳ್ಳಿಯ ತೋಟದ ಮನೆಯಲ್ಲಿ ಸಂಭವಿಸಿದೆಯೆಂದು ವರದಿಯಾಗಿದೆ. ಸೋಮಶೇಖರ್ ಎಂಬುವರ ತೋಟದ ಮನೆಯಲ್ಲಿ ಸಾಕಿದ್ದ ಬೆಕ್ಕೊಂದು ಮನೆಯ ತಾರಸಿ ಮೇಲೆ 5 ಮರಿಗಳಿಗೆ ಜನ್ಮ ನೀಡಿದ್ದು, ಅವುಗಳನ್ನು ಕಾವಲು ಕಾಯುತ್ತಿತ್ತು. ಚಿರತೆಯೊಂದು ಬೆಕ್ಕಿನ ಮೇಲೆ ದಾಳಿ ನಡೆಸಿದೆ. ಆಗ ತನ್ನ ಮರಿಗಳನ್ನು ಕಾಪಾಡಿಕೊಳ್ಳಲು ಬೆಕ್ಕು ಚಿರತೆಯೊಂದಿಗೆ ಹೋರಾಡಿದರೂ ಚಿರತೆ ಮುಂದೆ ಬೆಕ್ಕಿನ ಆಟ ಸಾಗದೇ ತಾಯಿ ಬೆಕ್ಕು ವೀರ ಮರಣ ಅಪ್ಪಿದೆ. ತನ್ನ ಮರಿಗಳನ್ನು ರಕ್ಷಿಸಿಕೊಳ್ಳಲು, ತನ್ನ ಪ್ರಾಣವನ್ನೇ ಬಲಿಕೊಟ್ಟ ತಾಯಿ ಬೆಕ್ಕು ನಿಜವಾಗಿ ವೀರ ಮಾತೆಯೇ ಸರಿ. ಮನುಷ್ಯರಲ್ಲಿ ಕಾಣಬಹುದಾದ ಮಾನವೀಯ ಸಂಬಂಧಗಳು ಪಶು ಪಕ್ಷಿ ಪ್ರಾಣಿಗಳಲ್ಲಿಯೂ ಇರುತ್ತವೆ ಎಂಬುದಕ್ಕೆ ಮೇಲಿನ ಪ್ರಕರಣವೇ ಸಾಕ್ಷಿ. ತನ್ನ ಮರಿಗಳನ್ನು ರಕ್ಷಿಸಲು ತನ್ನ ಪ್ರಾಣವನ್ನೇ ಬಲಿಕೊಟ್ಟ ತಾಯಿ ಬೆಕ್ಕಿಗೆ ಗೌರವಪೂರ್ವಕ ಶ್ರದ್ಧಾಂಜಲಿ. **–ಕೆ.ವಿ.ವಾಸು, ವಕೀಲರು, ಮೈಸೂರು.**



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ದೃಷ್ಟಿದೋಷ ಅಸ್ಪಷ್ಟ; ದೃಷ್ಟಿಕೋನದ ದೋಷ ಅನಿಷ್ಟ!

ಸೃಷ್ಟಿಯೊಳಗೆ ಮನುಷ್ಯನದು ವಿಶಿಷ್ಟವಾದ ಬದುಕು. ಒಂದೇ ಜಾತಿಯ ಪ್ರಾಣಿಪಕ್ಷಿಗಳ ಜೀವನ ಶೈಲಿ ಬಹುತೇಕ ಒಂದೇ ಇರುತ್ತದೆ. ಆದರೆ ಮನುಷ್ಯ ಜಾತಿಯ ಜೀವನ ಶೈಲಿ ಮಾತ್ರ ವೈವಿಧ್ಯಮಯ. ಪ್ರಾದೇಶಿಕವಾಗಿ ಭಿನ್ನವಾಗಿರುವುದಲ್ಲದೆ, ಒಂದೇ ಪ್ರದೇಶದಲ್ಲಿ ನೂರಾರು ಭಾಷೆ, ಹತ್ತಾರು ಸಂಸ್ಕೃತಿ, ಹಲವಾರು ಬದುಕಿನ ಶೈಲಿ, ನಿತ್ಯ ನೂತನ ಮನುಷ್ಯನ ಜೀವನ. ಮನುಷ್ಯ ಒಮ್ಮೊಮ್ಮೆ ನಂಬಿಕೆಗೆ ಅರ್ಹವಾದ ಅಗ್ರಗಣ್ಯ ಹಾಗೂ ಮೋಸದಾಟದಲ್ಲಿಯೂ ಆಗುವುದಿಲ್ಲ ಅವನು ನಗಣ್ಯ. ದಿನಕೊಂದು ಬಣ್ಣ, ಕ್ಷಣಕೊಂದು ಬಣ್ಣ, ಏನೇನೋ ವೇಷ, ಮಾತಲ್ಲಿ ಮೋಸ ಎಂಬ ಚಿತ್ರ ಸಾಹಿತಿ ಚಿ.ಉದಯಶಂಕರ್ ಅವರ ಗೀತೆಯ ಸಾಲಿನಂತೆ ಮನುಷ್ಯನದು ವಿಚಿತ್ರ ಸ್ವಭಾವ, ವಿಭಿನ್ನ ಪ್ರಭಾವ, ಊಹೆಗೂ ನಿಲುಕದ ಮನೋಭಾವ.

ದೃಷ್ಟಿ ದೋಷವಿದ್ದರೆ ನೋಟ ಅಸ್ಪಷ್ಟವಾಗಿರುತ್ತದೆ, ಕಣ್ಣಿನ ವೈದ್ಯರ ಬಳಿಗೆ ಹೋಗಿ ಅದಕ್ಕೆ ಸೂಕ್ತ ಚಿಕಿತ್ಸೆ ಕೊಡಿಸಿ ದೃಷ್ಟಿಯನ್ನು ಸರಿಪಡಿಸಬಹುದು. ಆದರೆ ದೃಷ್ಟಿಕೋನದ ಸಮಸ್ಯೆಯಿದ್ದರೆ ಅದು ಅನಿಷ್ಟ, ಅದನ್ನು ಅಷ್ಟು ಸುಲಭವಾಗಿ ಹೋಗಲಾಡಿಸಲು ಸಾಧ್ಯವಿಲ್ಲ. ಎಷ್ಟೋ ಮಂದಿ ಸಜ್ಜನರ ಸಹವಾಸದಲ್ಲಿಯೇ ಇದ್ದರೂ ತಮ್ಮ ವಕ್ರದೃಷ್ಟಿಯಿಂದ ಪ್ರಪಂಚವನ್ನು ತಮ್ಮದೇ ಆದ ನೋಟದಲ್ಲಿ ಕಂಡು ಅವರು ತಾನೆ, ನನಗೆ ಗೊತ್ತು ಬಿಡು, ಅವರ ಇನ್ನೊಂದು ಮುಖ ನಿಮಗೆ ಗೊತ್ತಿಲ್ಲ, ಅವನು ಎಂಥಾ ಐನಾತಿ ಅಂಥ ಗೊತ್ತಾ ಅವಳು ನೀವು ಅಂದುಕೊಂಡಂತೆ ಇಲ್ಲ, ಅವನದ್ದು ಒಂದು ಅಫೇರ್ ಇದೆ ಗೊತ್ತಾ? ಅವರ ಮಗಳು ಸರಿಯಿಲ್ಲ, ಇವರ ಮಗ ಸರಿಯಿಲ್ಲ, ಅವರ ಅಪ್ಪ ಕುಡುಕ........ ಎಂದು ವಿಕಟ ನಗೆ ಬೀರುತ್ತಾ, ಅದೊಂದು ದೊಡ್ಡ ವಿದ್ಯೆ ಎಂಬಂತೆ ಬೀಗುತ್ತಿರುತ್ತಾರೆ. ಇಂಥಹ ಮಾತುಗಳನ್ನಾಡುವ ಮಹಾನುಭಾವರು ನಮ್ಮ ನಿಮ್ಮ ನಡುವೆಯೇ ಇರುತ್ತಾರೆ. ತಮ್ಮ ಬದುಕೇ ಹರಿದು ಹಂಚಿಹೋಗಿರುತ್ತದೆ. ಅನ್ಯರು ಸುಖ, ನೆಮ್ಮದಿಯಿಂದ ಇರುವುದನ್ನು ಸಹಿಸದೇ ಯಾರೂ ಸಹ ಕೇಳದೇ ಇದ್ದರೂ, ಮೇಲಿನ ಸ್ಟೇಟ್‌ಮೆಂಟ್‌ಗಳನ್ನು ಹೇಳುತ್ತಲೇ ಇರುತ್ತಾರೆ. ಅವರಿಗೆ ಒಂದು ವಿಷಯವನ್ನು ಧನಾತ್ಮಕವಾಗಿ ನೋಡುವ ದೃಷ್ಟಿಕೋನವೇ ಇರುವುದಿಲ್ಲ, ಎಲ್ಲವನ್ನೂ ಋಣಾತ್ಮಕವಾಗಿಯೇ ನೋಡುವುದು ಚಾಳಿಯಾಗಿರುತ್ತದೆ. ಬೇರೆಯವರ ಬಗ್ಗೆ ಚಿಂತಿಸುವ ಬದಲು ತಮ್ಮನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸಿದರೆ ಅವರ ಗೌರವ ಉಳಿಯುತ್ತದೆ.

ಇಂತಿಪ್ಪ ಮನುಷ್ಯನ ಬದುಕಿನಲ್ಲಿ ಒಬ್ಬೊಬ್ಬರದು ಒಂದೊಂದು ದೃಷ್ಟಿಕೋನ. ಒಬ್ಬೊಬ್ಬರದು ಒಂದೊಂದು ಅಭಿಪ್ರಾಯ. ಒಂದೇ ವಿಚಾರಕ್ಕೆ ಒಬ್ಬರು ಸದಾಭಿಪ್ರಾಯ ತಿಳಿಸಿದರೆ ಪಕ್ಕದಲ್ಲಿಯೇ ಇರುವ ಮತ್ತೊಬ್ಬರು ಭಿನ್ನಾಭಿಪ್ರಾಯ ಸ್ಫೋಟಿಸುತ್ತಾರೆ. ಸುಮ್ಮನೆ ಹರಟೆ ಕಟ್ಟೆಯಲ್ಲಿ ಕಾಲಹರಣ ಮಾಡುವ ಜನ ಸಾಧನೆ ಮಾಡಿರುವವರನ್ನು ಟೀಕಿಸುತ್ತಲೇ ಇರುತ್ತಾರೆ. ಅವರಿಗೆ ಟೀಕಿಸುವುದೇ ಒಂದು ಸಾಧನೆಯಾಗಿರುತ್ತದೆ. ಕೊರೊನಾ ವೈರಸ್ ಕಡಿಮೆಯಾಗಿದ್ದರೂ ಇಂತಹ ವಕ್ರದೃಷ್ಟಿಯ ವೈರಸ್‌ಗಳು ಸದಾ ಕಾಲ ಸಕ್ರಿಯವಾಗಿದ್ದು ಸಮಾಜದ ಸ್ವಾಸ್ಥ್ಯವನ್ನು ಕದಡುತ್ತಲೇ ಇವೆ.

ತಾನು ಕಳ್ಳ, ಪರರನ್ನು ನಂಬ ಎಂಬ ಗಾದೆ ಮಾತಿನಂತೆ ಒಳ್ಳೆಯ ವ್ಯಕ್ತಿಗಳನ್ನು, ಅವರ ಕೆಲಸ ಕಾರ್ಯಗಳನ್ನು ಗುಮಾನಿಯಿಂದಲೇ ನೋಡುವ ಮನೋಭಾವವನ್ನು ಕೆಲವರು ಬೆಳೆಸಿಕೊಂಡಿರುತ್ತಾರೆ. ಕಾಮಾಲೆ ಕಣ್ಣಿನವನಿಗೆ ಕಾಣೋದೆಲ್ಲಾ ಹಳದಿ ಎನ್ನುವಂತೆ ಅನೇಕ ಜನರು ಪೂರ್ವಾಗ್ರಹಪೀಡಿತರಾಗಿ ವರ್ತಿಸುತ್ತಾರೆ. ಅದೊಂದು ರೀತಿಯ ಮಾನಸಿಕ ಕಾಯಿಲೆಯಾಗಿರುತ್ತದೆ. ಕೆಲವರಿಗೆ ಬೇರೆಯವರ ಮನೆ ಹಾಳು ಮಾಡುವ ಖಯಾಲಿಯೂ ಇರುತ್ತದೆ. ಮದುವೆ ಸಂಬಂಧಗಳು ಏರ್ಪಡಬೇಕಾದ ಸಂದರ್ಭದಲ್ಲಿ ಅನಾವಶ್ಯಕವಾಗಿ ತಮ್ಮ ಅಭಿಪ್ರಾಯಗಳನ್ನು ತೇಲಿಬಿಟ್ಟು ಸಂಬಂಧಗಳು ಮುರಿದು ಬೀಳುವಂತೆ ಮಾಡಿ ಒಳಗೊಳಗೆ ಖುಷಿ ಪಡುವವರು ಸಹ ಇರುತ್ತಾರೆ. ಇಂತಹ ವಿಕೃತ ಮನಸ್ಸಿನವರಿಂದ ಏನು ತಪ್ಪು ಮಾಡದೇ ಇದ್ದರೂ ಅಮಾಯಕರು ಶಿಕ್ಷೆ ಅನುಭವಿಸುತ್ತಾರೆ. ಗಾಳಿಸುದ್ದಿಯಿಂದ ಅನೇಕರು ಮನನೊಂದು ಆತ್ಮಹತ್ಯೆ ಮಾಡಿಕೊಳ್ಳುವುದು ಉಂಟು.

ತಮಗೆ ಗೊತ್ತಿಲ್ಲದ ಸಂಗತಿಯನ್ನು ಗೊತ್ತಿಲ್ಲ ಎಂದು ಹೇಳುವುದು ದೊಡ್ಡತನ. ಕಂಡ ವಿಚಾರಕ್ಕೆ ಉಪ್ಪುಕಾರ ಸೇರಿಸಿ ಹೇಳುವುದು ಸಣ್ಣತನ. ಕಣ್ಣಿನಲ್ಲಿ ನೋಡಿದ್ದೇವೆ ಎಂದಾಕ್ಷಣ ಅದು ಸತ್ಯವಾಗಿರಬೇಕು ಅಂತೇನಿಲ್ಲ, ತಮ್ಮ ಎಣಿಕೆಯಂತೆಯೇ ಇರಬೇಕು ಅಂತೇನಿಲ್ಲ. ವಾಸ್ತವ ಸಂಗತಿ ಅರಿಯದೆ ಅಭಿಪ್ರಾಯ ಹೇಳಲೇಬಾರದು. ಇಂತಹವರಿಗೆ ರಾಮಲಕ್ಷ್ಮಣ ಚಿತ್ರದ ನೋಡಿದ್ದು ಸುಳ್ಳಾಗಬಹುದು, ಕೇಳಿದ್ದು ಸುಳ್ಳಾಗಬಹುದು, ನಿಧಾನಿಸಿ ಯೋಚಿಸಿದಾಗ ನಿಜವು ತಿಳಿವುದು ಎಂಬ ಗೀತೆಯು ಒಂದೊಳ್ಳೆ ನೀತಿಪಾಠವನ್ನು ಹೇಳುತ್ತದೆ.

ಉದ್ಯೋಗ ಮಾಡುವ ಸ್ಥಳಗಳಲ್ಲಿ ಫ್ಯಾನ್ ಗಾಳಿಗಿಂತ ಗಾಳಿಸುದ್ದಿಗಳೇ ಹೆಚ್ಚು ಸುಳಿದಾಡುತ್ತವೆ. ಹತ್ತಾರು ವರ್ಷಗಳಿಂದ ಸಹೋದ್ಯೋಗಿಗಳಾಗಿದ್ದರೂ, ಅವರ ವ್ಯಕ್ತಿತ್ವ ಅರಿತಿದ್ದರೂ, ತಾವು ಕಂಡ ಒಂದು ಸನ್ನಿವೇಶವನ್ನು ಆಧರಿಸಿ, ಅದಕ್ಕೆ ವಗ್ಗರಣೆ ಹಾಕಿ ಇಲ್ಲಸಲ್ಲದ ಸುದ್ದಿಗಳನ್ನು ಹರಡಿ ಅವರ ವ್ಯಕ್ತಿತ್ವದ ತೇಜೋವಧೆ ಮಾಡುತ್ತಾರೆ. ಅದರಿಂದ ಒಂದು ರೀತಿಯ ಖುಷಿ ಅನುಭವಿಸುತ್ತಾರೆ. ಹಳ್ಳಿಗಳಲ್ಲಿ ಇಂದಿಗೂ ಮದ್ದು ಹಾಕುವ ಕೆಟ್ಟ ಚಾಳಿ ಚಾಲ್ತಿಯಲ್ಲಿದೆ. ದೇಹಕ್ಕೆ ಮದ್ದನ್ನು ಹಾಕಿದರೆ ಅದನ್ನು ಸುಲಭವಾಗಿ ತೆಗೆಯಿಸಬಹುದು, ಆದರೆ ಮನಸ್ಸಿಗೆ ಮದ್ದು ಹಾಕಿದರೆ ಅದನ್ನು ತೆಗೆಯುವುದು ಅಷ್ಟು ಸುಲಭವಲ್ಲ. ದೇಹಕ್ಕೆ ಆಗಲಿ ಮನಸ್ಸಿಗೆ ಆಗಲಿ ಮದ್ದು ಹಾಕುವುದು ಒಂದು ರೀತಿಯ ವಿಕೃತ ಕೃತ್ಯ.

ಮನುಷ್ಯನದು ವಿಚಿತ್ರ ಸ್ವಭಾವ. ಬಹುತೇಕರಿಗೆ ಸಹಿಷ್ಣುತೆ ಕಡಿಮೆ, ಹೊಟ್ಟೆಕಿಚ್ಚು ಹೆಚ್ಚು. ತಮ್ಮೊಟ್ಟಿಗೆ ಇರುವ, ತಮಗೆ ಹಿತೈಷಿಗಳಂತೆ ಇರುವ ಕೆಲವರ ಕುರಿತು ಅವರಿಗೆ ಕಾಳಜಿ, ಪ್ರೀತಿಗಿಂತ ದ್ವೇಷ, ಅಸೂಯೆಯನ್ನು ಹೊಂದಿರುತ್ತಾರೆ. ಪಕ್ಕದ ಮನೆಯ ಹುಡುಗ ಏನಾದರೂ ದೊಡ್ಡ ಸಾಧನೆ ಮಾಡಿದರೆ ಅವನನ್ನು ಮುಕ್ತ ಕಂಠದಿಂದ ಪ್ರಶಂಸಿಸುವ ವಿಶಾಲ ಮನೋಭಾವ ಹೊಂದಿರದೆ, ಆತ ಏನಾದರೂ ಸಣ್ಣ ತಪ್ಪು ಮಾಡಿದರೆ ಅದನ್ನು ಊರಿಗೆಲ್ಲಾ ಹಂಚಿ ಸಂಭ್ರಮಿಸುತ್ತಾರೆ. ಅದರಿಂದ ಒಂದು ರೀತಿಯ ಕೆಟ್ಟ ಆನಂದವನ್ನು ಅನುಭವಿಸುತ್ತಾರೆ.

ಕೈಗೆ ಎಟುಕದ ದ್ರಾಕ್ಷಿ ಹುಳಿ ಎಂಬ ನರಿಯ ಅಭಿಪ್ರಾಯದಂತೆ ಕೆಲವರಿಗೆ ತಮ್ಮ ಪ್ರಯತ್ನದಲ್ಲಿ ಯಶಸ್ಸು ಸಿಗದೇ ಇದ್ದಾಗ, ಅದು ಯಾರಿಗೂ ಸಿಗಬಾರದು ಎಂದು ಇಲ್ಲಸಲ್ಲದ ಗಾಸಿಪ್ ಹಬ್ಬಿಸಿ, ಅದು ಯಾರಿಗೂ ಸಿಗದಂತೆ ಮಾಡಿ ವಿಘ್ನ ಸಂತೋಷ ಅನುಭವಿಸುತ್ತಾರೆ. ಇವರ ನಮ್ಮ ನಿಮ್ಮ ನಡುವೆ ನಗುಮುಖದಿಂದಲೇ ವ್ಯವಹರಿಸುತ್ತಿರುತ್ತಾರೆ. ಆದರೆ ಒಳಗೆ ಒಂದು ಕೀಚಕ ವ್ಯಕ್ತಿತ್ವ ಹೊಂದಿರುತ್ತಾರೆ. ಮನುಷ್ಯನಂತೆ ಸನ್ನಿವೇಶಕ್ಕೆ ತಕ್ಕಹಾಗೆ ಮುಖವಾಡ ಧರಿಸುವ ಪ್ರಾಣಿ ಮತ್ತೊಂದು ಇಲ್ಲ.

ಮನುಷ್ಯ ಮೂಲಭೂತವಾಗಿ ಸಂಘ ಜೀವಿ. ಇತರರ ಸಂತೋಷದಲ್ಲಿ ತಾನೂ ಸಂತೋಷಪಟ್ಟರೆ ಅವನಿಗೆ ಸಮಾಧಾನ, ನೆಮ್ಮದಿ ಇರುತ್ತದೆ. ಅವನಲ್ಲಿ ಮನುಷ್ಯತ್ವ ವೃದ್ಧಿಸುತ್ತದೆ. ಅದರ ಬದಲು ಅನ್ಯರು ಸಂತೋಷದಿಂದ ಇರುವುದನ್ನು ಕಂಡು ಈರ್ಷೆಪಟ್ಟರೆ ಅದರಿಂದ ಅಸಮಾಧಾನ, ಅತೃಪ್ತಿ ಹೆಚ್ಚಾಗಿ ನೆಮ್ಮದಿ ಕಳೆದುಕೊಳ್ಳುತ್ತಾರೆ. ಇದರಿಂದ ಮನುಷ್ಯನಲ್ಲಿನ ರಾಕ್ಷಸಗುಣ ಜಾಗೃತಗೊಂಡು ಪ್ರಪಂಚ, ಸಮಾಜ, ಜನರನ್ನು ನೋಡುವ ದೃಷ್ಟಿಕೋನವೇ ಬದಲಾಗಿ ಬಿಡುತ್ತದೆ. ಅಸಹಿಷ್ಣುತೆ ಪರಾಕಾಷ್ಠೆಯನ್ನು ಮುಟ್ಟುವ ಕೆಲವರಂತೂ ಇಲ್ಲ ಸಲ್ಲದ ಗಾಸಿಪ್ ಹಬ್ಬಿಸಿ ಒಬ್ಬರ ವ್ಯಕ್ತಿತ್ವಕ್ಕೆ ಕಪ್ಪು ಚುಕ್ಕೆ ತರುತ್ತಾರೆ.

ಮನುಷ್ಯನಲ್ಲಿ ಮನುಷ್ಯತ್ವ ಇದ್ದರೆ ಮಾತ್ರ ಅವನನ್ನು ಮನುಷ್ಯ ಎನ್ನಬಹುದು. ಇಲ್ಲವಾದರೆ ಅವನನ್ನು ಒಂದು ಪ್ರಾಣಿ ಎನ್ನಬಹುದು. ಕ್ಷಮಿಸಿ ಡಾ.ರಾಜ್‌ಕುಮಾರ್ ಸಂಪತ್ತಿಗೆ ಸವಾಲ್ ಸಿನಿಮಾದಲ್ಲಿ ಹೇಳುವಂತೆ, ಪ್ರಾಣಿಗಳೇ ಗುಣದಲಿ ಮೇಲು, ಮಾನವನದಕಿಂತ ಕೀಳು........ ಹಾಲನ್ನು ಕುಡಿದ ಜನರು, ವಿಷವನ್ನೇ ಕಕ್ಕುತಲಿಹರು...... ಉಪಕಾರವ ಮಾಡಲಾರ, ಬದುಕಿದರೆ ಸೈರಿಸಲಾರ...! ಅನೇಕ ವಿದ್ಯಾವಂತರೂ ಸಹ ಅರಿಷಡ್ವರ್ಗಗಳಲ್ಲಿನ ಮದ, ಮತ್ಸರದಿಂದ ಮುಕ್ತಿ ಪಡೆದಿರುವುದಿಲ್ಲ. ಕೆಲವು ಶ್ರೀಮಂತರು ತಮ್ಮ ಸಂಪತ್ತಿನ ಮದದಿಂದ ಲೋಕವನ್ನು ತಾವು ನೋಡುವ ದೃಷ್ಟಿಯೇ ಸರಿಯಾಗಿದೆ ಎಂದು ತಪ್ಪಾಗಿ ಭಾವಿಸುತ್ತಾರೆ. ಹಣವಂತರೆಲ್ಲಾ ಗುಣವಂತರಲ್ಲಾ ಎಂಬುದನ್ನು ತಮ್ಮ ನಡವಳಿಕೆಗಳಿಂದಲೇ ತೋರುತ್ತಾರೆ. ಬಡವರ ಬಗ್ಗೆ ಒಂದು ತಾತ್ಸಾರ ಮನೋಭಾವ ಹೊಂದಿರುತ್ತಾರೆ. ಬಡವರಿಗೆ ಸ್ವಾಭಿಮಾನ ಇರುವುದಿಲ್ಲ, ಹಣಕ್ಕೋಸ್ಕರ ಏನು ಬೇಕಾದರೂ ರಾಜಿ ಮಾಡಿಕೊಂಡು ಬದುಕುತ್ತಾರೆ ಎಂಬ ತಪ್ಪು ಅಭಿಪ್ರಾಯ ಹೊಂದಿರುತ್ತಾರೆ. ಆದರೆ ಹಣ, ಆಸ್ತಿ, ಖ್ಯಾತಿಗಾಗಿ ಏನು ಬೇಕಾದರೂ ಮಾಡಲು ಕೆಲವು ಶ್ರೀಮಂತರು ಸಿದ್ಧರಾಗಿರುತ್ತಾರೆ. ಆದರೆ ಎಲ್ಲಾ ಬಡವರು ಆ ಕೆಲಸ ಮಾಡುವುದಿಲ್ಲ. ಬಡವರನ್ನು ಭಿಕ್ಷುಕರು ಎಂದು ಭಾವಿಸುವುದು ತಪ್ಪು. ಭಿಕ್ಷುಕರಿಗೂ ಸ್ವಾಭಿಮಾನ ಇರುತ್ತದೆ ಎಂಬುದನ್ನು ಮರೆಯಬಾರದು. ಸ್ವಾಭಿಮಾನಿಗಳು ತಮ್ಮ ಕಾಯಕ ನಿಷ್ಠೆಯಿಂದ ಬದುಕು ಸಾಗಿಸಲು ಶ್ರಮ ಪಡುತ್ತಾರೆಯೇ ಹೊರತು ಬೇರೆಯವರ ಅನ್ನಕ್ಕೆ ಕೈ ಹಾಕುವುದಿಲ್ಲ.

ತಮ್ಮ ಸ್ವಾರ್ಥ ಸಾಧನೆಗೆ ಇನ್ನೊಬ್ಬರ ಬದುಕನ್ನು ಹಾಳು ಮಾಡುವಂತಹ ನೀಚ ಕೆಲಸಕ್ಕೆ ಕೈಹಾಕಬಾರದು. ಚಾಡಿ ಮಾತು ಹೇಳುವುದು ಒಂದು ದೌರ್ಬಲ್ಯವಾದರೆ ಅದನ್ನು ಕೇಳುವುದು ಸಹ ಒಂದು ದೊಡ್ಡ ದೌರ್ಬಲ್ಯವಾಗಿರುತ್ತದೆ. ಚಾಡಿ ಹೇಳುವ ದುಷ್ಟ ದೃಷ್ಟಿಕೋನದ ಜನರಿಂದ ದೂರ ಇರಬೇಕು. ಒಮ್ಮೆ ಅವರ ಮಾತನ್ನು ನಿರಾಕರಿಸಿ ಕಳುಹಿಸಿದರೆ ಮತ್ತೆ ಅವರು ಬಂದು ಏನನ್ನೂ ಹೇಳುವುದಿಲ್ಲ. ನೀವು ಹೇಳಿಕೆ ಮಾತನ್ನು ಕೇಳುತ್ತೀರಿ ಎಂದಾದರೆ ತಮ್ಮ ಬೇಳೆ ಬೇಯಿಸಿಕೊಳ್ಳಲು ಯಾರ ಬಾಳನ್ನು ಬೇಕಾದರೂ ಹಾಳು ಮಾಡುತ್ತಾರೆ. ಅವರು ಹೊರ ಪ್ರಪಂಚಕ್ಕೆ ಸಜ್ಜನರಂತೆ ಕಂಡರು, ಒಳಗೆ ಇರುವುದೆಲ್ಲಾ ದುರ್ಜನ ವ್ಯಕ್ತಿತ್ವ. ಇಂತಹ ನಯವಂಚಕರಿಂದ, ಸಮಯ ಸಾಧಕರಿಂದ ಆರೋಗ್ಯಕರ ಅಂತರ ಕಾಪಾಡಿಕೊಳ್ಳುವುದು ಒಳ್ಳೆಯದು. ದೃಷ್ಟಿಕೋನ ಉತ್ತಮವಾಗಿದ್ದರೆ ಬದುಕು ಸಹ ಉತ್ತಮವಾಗಿರುತ್ತದೆ. ತಮ್ಮ ಬದುಕನ್ನು ಸುಧಾರಿಸಿಕೊಳ್ಳುವ ಮನೋಭಾವ ವೃದ್ಧಿಸಿಕೊಂಡರೆ ಬದುಕು ನಂದನವನವಾಗುತ್ತದೆ.

ಹೂರಣ: **ದೃಷ್ಟಿ ದೋಷಕ್ಕೆ ಚಿಕಿತ್ಸೆ ಸುಲಭ, ದೃಷ್ಟಿಕೋನದ ದೋಷಕ್ಕೆ ಚಿಕಿತ್ಸೆ ದುರ್ಲಭ!**



> “ ಮನುಷ್ಯನಲ್ಲಿ ಮನುಷ್ಯತ್ವ ಇದ್ದರೆ ಮಾತ್ರ ಅವನನ್ನು ಮನುಷ್ಯ ಎನ್ನಬಹುದು. ಇಲ್ಲವಾದರೆ ಅವನನ್ನು ಒಂದು ಪ್ರಾಣಿ ಎನ್ನಬಹುದು. ಅನೇಕ ವಿದ್ಯಾವಂತರೂ ಸಹ ಅರಿಷಡ್ವರ್ಗಗಳಲ್ಲಿನ ಮದ, ಮತ್ಸರದಿಂದ ಮುಕ್ತಿ ಪಡೆದಿರುವುದಿಲ್ಲ. ಕೆಲವು ಶ್ರೀಮಂತರು ತಮ್ಮ ಸಂಪತ್ತಿನ ಮದದಿಂದ ತಾವು ಲೋಕವನ್ನು ನೋಡುವ ದೃಷ್ಟಿ ಸರಿಯಾಗಿದೆ ಎಂದು ತಪ್ಪಾಗಿ ಭಾವಿಸುತ್ತಾರೆ. ಹಣವಂತರೆಲ್ಲಾ ಗುಣವಂತರಲ್ಲಾ ಎಂಬುದನ್ನು ತಮ್ಮ ನಡವಳಿಕೆಗಳಿಂದ ತೋರುತ್ತಾರೆ. ಬಡವರ ಬಗ್ಗೆ ಒಂದು ತಾತ್ಸಾರ ಮನೋಭಾವ ಹೊಂದಿರುತ್ತಾರೆ. ಬಡವರಿಗೆ ಸ್ವಾಭಿಮಾನ ಇರುವುದಿಲ್ಲ. ಹಣಕ್ಕೋಸ್ಕರ ಏನು ಬೇಕಾದರೂ ರಾಜಿ ಮಾಡಿಕೊಂಡು ಬದುಕುತ್ತಾರೆ ಎಂಬ ತಪ್ಪು ಅಭಿಪ್ರಾಯ ಹೊಂದಿರುತ್ತಾರೆ. ಆದರೆ ಹಣ, ಆಸ್ತಿ, ಖ್ಯಾತಿಗಾಗಿ ಏನು ಬೇಕಾದರೂ ಮಾಡಲು ಕೆಲವು ಶ್ರೀಮಂತರು ಸಿದ್ಧರಾಗಿರುತ್ತಾರೆ. ಆದರೆ ಎಲ್ಲಾ ಬಡವರು ಆ ಕೆಲಸ ಮಾಡುವುದಿಲ್ಲ. ಬಡವರನ್ನು ಭಿಕ್ಷುಕರು ಎಂದು ಭಾವಿಸುವುದು ತಪ್ಪು. ಭಿಕ್ಷುಕರಿಗೆ ಸ್ವಾಭಿಮಾನ ಇರುತ್ತದೆ ಎಂಬುದನ್ನು ಮರೆಯಬಾರದು. ಸ್ವಾಭಿಮಾನಿಗಳು ತಮ್ಮ ಕಾಯಕ ನಿಷ್ಠೆಯಿಂದ ಬದುಕು ಸಾಗಿಸಲು ಶ್ರಮ ಪಡುತ್ತಾರೆಯೇ ಹೊರತು ಬೇರೆಯವರ ಅನ್ನಕ್ಕೆ ಕೈ ಹಾಕುವುದಿಲ್ಲ.

ಭೈರವದಿಂದ ಭೈರವಿವರೆಗೆ ಸಂಗೀತೋತ್ಸವಕ್ಕೆ ಚಾಲನೆ



ಮೈಸೂರಿನ ರಮಾಗೋವಿಂದ ಕಲಾವೇದಿಕೆಯಲ್ಲಿ ಪಂಡಿತ ಪುಟ್ಟರಾಜ ಗವಾಯಿಯವರ 16ನೇ ಪುಣ್ಯಸ್ಮರಣೆ ಅಂಗವಾಗಿ ಏರ್ಪಡಿಸಿದ್ದ ಭೈರವದಿಂದ ಭೈರವಿವರೆಗೆ ಸಂಗೀತೋತ್ಸವದಲ್ಲಿ ಶಿವಮೊಗ್ಗದ ಮಲ್ಲಿಕಾರ್ಜುನ ಕಲಬುರಗಿ ಅವರಿಗೆ 'ಪುಟ್ಟಶ್ರೀ ಸಮ್ಮಾನಿತ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಗದಗದ ಅಂಬಾದಾಸ್ ಎಸ್.ಜಮಾದಾರ್, ದಾವಣಗೆರೆಯ ಚನ್ನವೀರಯ್ಯ ಹಿರೇಮಠ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ನ.30(ಜಿಎ)–ಮೈಸೂರಿನ ಕುವೆಂಪುನಗರದಲ್ಲಿರುವ ರಮಾಗೋವಿಂದ ಕಲಾವೇದಿಕೆಯಲ್ಲಿ ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ, ಶ್ರೀ ಗುರು ಪುಟ್ಟರಾಜ ಸಂಗೀತ ವಿದ್ಯಾಲಯವು ಪದ್ಮಭೂಷಣ ಪಂಡಿತ ಪುಟ್ಟರಾಜ ಗವಾಯಿಯವರ 16ನೇ ಪುಣ್ಯಸ್ಮರಣೆ ಅಂಗವಾಗಿ ಏರ್ಪಡಿಸಿದ್ದ ಭೈರವದಿಂದ ಭೈರವಿವರೆಗೆ ಸಂಗೀತೋತ್ಸವಕ್ಕೆ ಶಾಸಕ ಟಿ.ಎಸ್. ಶ್ರೀವತ್ಸ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಮೈಸೂರಿನ ಖ್ಯಾತ ಸಂಗೀತ ವಿದ್ವಾಂಸ ಕೆ.ವಾಸುದೇವಾಚಾರ್ಯರ ಅವರ ಮನೆ ಮಹಾರಾಜ ಸಂಸ್ಕೃತ ಪಾಠಶಾಲೆಗೆ ಅನತಿ ದೂರದಲ್ಲಿಯೇ ಇದೆ. ಅವರ ಜನ್ಮ ದಿನ ಅಥವಾ ಪುಣ್ಯಸ್ಮರಣೆಯ ದಿನ ಸರ್ಕಾರದ ವತಿಯಿಂದಲೇ ಕಾರ್ಯಕ್ರಮ ನಡೆಸಬೇಕು ಎಂದು ಮನವಿ ಸಲ್ಲಿಸಲಾಯಿತು. ಮನವಿಗೆ ಮುಖ್ಯಮಂತ್ರಿಗಳು ಸಮ್ಮತಿಸಿದ್ದಾರೆ ಎಂದರು.

ಸಂಗೀತಕ್ಕೆ ಮನುಷ್ಯನಿಂದ ಹಿಡಿದು ಪ್ರಾಣಿಗಳವರೆಗೆ ಎಂತಹವರನ್ನು ತಲೆದೂಗಿಸುವ ಶಕ್ತಿ ಇದೆ. ಸಂಗೀತದಿಂದ ಆರೋಗ್ಯ ವೃದ್ಧಿಯಾಗಬಹುದು ಎಂಬುದನ್ನು ಮೈಸೂರಿನವರೇ ಆದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಸಾಬೀತುಪಡಿಸಿದ್ದಾರೆ. ಸಂಗೀತ ಕಲಿಯಲು ವಯಸ್ಸಿನ ಅಂತರವಿಲ್ಲ. ಯಾರು ಬೇಕಾದರೂ ಕಲಿಯಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗೋಕರ್ಣ ಸ್ವರಾತ್ಮ ಗುರುಕುಲ ವಿಷ್ಣುಗುಪ್ತ ವಿಶ್ವವಿದ್ಯಾಪೀಠ ಅಶೋಕೆಯ ಪ್ರಾಚಾರ್ಯ ಡಾ.ಹರೀಶ್ ಹೆಗಡೆ ಸಂಪಾದಿಸಿರುವ 'ಗಾನಸುಧಾ–ಬಿಲಾವಲ ಥಾಟ' ಕೃತಿಯನ್ನು ಹಿರಿಯ ಸಂಗೀತಗಾರ ಪಂಡಿತ ವೀರಭದ್ರಯ್ಯ ಹಿರೇಮಠ ಬಿಡುಗಡೆಗೊಳಿಸಿದರು.

ಶಿವಮೊಗ್ಗದ ಮಲ್ಲಿಕಾರ್ಜುನ ಕಲಬುರಗಿ ಅವರಿಗೆ 'ಪುಟ್ಟಶ್ರೀ ಸಮ್ಮಾನಿತ' ಪ್ರಶಸ್ತಿಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಪ್ರದಾನ ಮಾಡಿದರು. ಗದಗದ ಅಂಬಾದಾಸ್ ಎಸ್.ಜಮಾದಾರ್, ದಾವಣಗೆರೆಯ ಚನ್ನವೀರಯ್ಯ ಹಿರೇಮಠ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಎಸ್‌ಜಿಪಿ ಸಂಗೀತಸಭಾ ಗೌರವಾಧ್ಯಕ್ಷರೂ ಆದ ಪಾಲಿಕೆ ಮಾಜಿ ಸದಸ್ಯ ಮ.ವಿ.ರಾಮಪ್ರಸಾದ್, ಡಾ.ಮಹೇಶ್ ಚಿಕ್ಕಲ್ಲೂರು ಮತ್ತಿತರರು ಉಪಸ್ಥಿತರಿದ್ದರು.

ಸಿದ್ದಲಿಂಗೇಶ್ವರ ಬಡಾವಣೆಯಲ್ಲಿ ರಾಜ್ಯೋತ್ಸವ



ಮೈಸೂರಿನ 44ನೇ ವಾರ್ಡ್ ವ್ಯಾಪ್ತಿಯ ಸಿದ್ದಲಿಂಗೇಶ್ವರ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದಿಂದ ನಡೆದ ರಾಜ್ಯೋತ್ಸವದಲ್ಲಿ ವಾರ್ಡ್ ಸೂಪರ್‌ವೈಸರ್ ಗುರುಸ್ವಾಮಿ, ಅಂಚೆ ಇಲಾಖೆ ಕಲಾವತಿ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು,ನ.30–ಮೈಸೂರಿನ 44ನೇ ವಾರ್ಡ್ ವ್ಯಾಪ್ತಿಯ ಸಿದ್ದಲಿಂಗೇಶ್ವರ ಬಡಾವಣೆಯ ಕ್ಷೇಮಭಿವೃದ್ಧಿ ಸಂಘದ ವತಿಯಿಂದ 70ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು..

ಶಾಸಕ ಜಿ.ಟಿ.ದೇವೇಗೌಡ, ಪಾಲಿಕೆ ಮಾಜಿ ಸದಸ್ಯೆ ಸವಿತಾ ಸುರೇಶ್ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ವಾರ್ಡ್ ಸೂಪರ್‌ವೈಸರ್ ಗುರುಸ್ವಾಮಿ, ಅಂಚೆ ಇಲಾಖೆಯ ಕಲಾವತಿ ಅವರನ್ನು ಅಭಿನಂದಿಸಲಾಯಿತು. ನಂತರ ವಾರ್ಡಿನ ಉದ್ಯಾನವನ ಒಳಾಂಗಣದಲ್ಲಿ 40 ಲಕ್ಷ ರೂ. ವೆಚ್ಚದ ಜಿಮ್, ಮಕ್ಕಳ ಆಟಿಕೆ ಹಾಗೂ ನಾಗರಿಕರಿಗೆ ಅನುಕೂಲವಾಗುವಂತೆ ಶೆಲ್ಟರ್ ನಿರ್ಮಾಣಕ್ಕೆ ಶಾಸಕ ಜಿ.ಟಿ.ದೇವೇಗೌಡರು ಗುದ್ದಲಿಪೂಜೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಜೆಡಿಎಸ್ ಮುಖಂಡ ಸುರೇಶ್, ಸಂಘದ ಅಧ್ಯಕ್ಷ ಹುಚ್ಚೇಗೌಡ, ಪದಾಧಿಕಾರಿಗಳಾದ ರವೀಂದ್ರ, ರಮೇಶ್, ಜಯಪ್ರಕಾಶ್, ಪುಟ್ಟಸ್ವಾಮಿ, ವಿಜಯ ಪ್ರಕಾಶ್, ರೇಖಾ, ಶಾರದ ಹೆಗಡೆ, ಹೇಮರೆಡ್ಡಿ ಶಿವರುದ್ರಯ್ಯ, ಭಾಸ್ಕರ ಮೂರ್ತಿ ಮುಂತಾದವರು ಉಪಸ್ಥಿತರಿದ್ದರು.

ಇಂದು ಕನ್ನಡ ಗಾಯನ ಕಾರ್ಯಕ್ರಮ

ಮೈಸೂರು,ನ.30(ಜಿಎ)–ಮೈಸೂರು ಮೆಲೋಡಿ ಸಿಂಗರ್ಸ್ ಗ್ರೂಪ್ ವತಿಯಿಂದ 70ನೇ ಕನ್ನಡ ರಾಜ್ಯೋತ್ಸವ ಅಂಗವಾಗಿ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ಡಿ.1ರಂದು ಸಂಜೆ 4 ಗಂಟೆಯಿಂದ ರಾತ್ರಿ 9 ಗಂಟೆವರೆಗೆ ಅಕ್ಷರ ಮಾಲೆ ಶೀರ್ಷಿಕೆ ಅಡಿ ಕನ್ನಡ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವಿವಿಧ ಕ್ಷೇತ್ರದ ಸಾಧಕರಿಗೆ

ಆಚಾರ್ಯ ಶ್ರೀ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ



ಮೈಸೂರಿನ ಕನ್ನಡ ಸಾಹಿತ್ಯ ಭವನದಲ್ಲಿ ಭಾನುವಾರ ವಿವಿಧ ಕ್ಷೇತ್ರದ ಸಾಧಕರಿಗೆ ಆಚಾರ್ಯ ಶ್ರೀ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ನ.30(ಪಿಎಂ)– ಹಿಮಾಲಯ ಪ್ರತಿಷ್ಠಾನ ವತಿಯಿಂದ ಕನ್ನಡ ರಾಜ್ಯೋತ್ಸವ ಪ್ರಯುಕ್ತ ವಿವಿಧ ಕ್ಷೇತ್ರದ ಸಾಧಕರಿಗೆ ಆಚಾರ್ಯ ಶ್ರೀ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರಿನ ವಿಜಯನಗರದ ಕನ್ನಡ ಸಾಹಿತ್ಯ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸಾಹಿತ್ಯ ಕ್ಷೇತ್ರದಿಂದ ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ (ಸಿಪಿಕೆ), ಡಾ.ಪ್ರದೀಪ್ ಕುಮಾರ್ ಹೆಬ್ರಿ, ಡಾ.ಜಯಪ್ಪ ಹೊನ್ನಾಳಿ, ಮಾಧ್ಯಮ ಕ್ಷೇತ್ರದಿಂದ ಎಂ.ಆರ್.ಸತ್ಯನಾರಾಯಣ, ಸಮಾಜ ಸೇವೆ ಕ್ಷೇತ್ರದಿಂದ ಎಸ್.ಬಸವಣ್ಣ, ಡಾ.ಈ.ಸಿ.ನಿಂಗರಾಜ್ ಗೌಡ, ಶಿಕ್ಷಣ ಕ್ಷೇತ್ರದಿಂದ ಎಸ್.ಮುರಳಿ, ಎಚ್.ಎಸ್.ಭವಾನಿ, ದೇವರಾಜ್ ಪಿ.ಚಿಕ್ಕಹಳ್ಳಿ, ವೈದ್ಯಕೀಯ ಕ್ಷೇತ್ರದಿಂದ ಡಾ.ಅನೀಲ್ ದೀಕ್ಷಿತ್, ರಂಗಭೂಮಿ ಕ್ಷೇತ್ರದಿಂದ ಕೆರೆಹಳ್ಳಿ ದೊರೆಸ್ವಾಮಿ, ಸಂಗೀತ ಕ್ಷೇತ್ರದಿಂದ ಶುಭಾ ರಾಘವೇಂದ್ರ, ಧಾರ್ಮಿಕ ಕ್ಷೇತ್ರದಿಂದ ಎಸ್.ಅಭಿಲಾಶ್ ದೀಕ್ಷಿತ್ ಅವರಿಗೆ ಗಣ್ಯರು ಪ್ರಶಸ್ತಿ ಪ್ರದಾನ ಮಾಡಿದರು.

ಸಾನಿಧ್ಯ ವಹಿಸಿದ್ದ ಬೇಬಿ ಮಠದ ಡಾ.ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಮಾತನಾಡಿ, ಆಚಾರ್ಯ ಶ್ರೀ ವಿದ್ಯಾರಣ್ಯರು, ಕನ್ನಡ ನಾಡಿಗೆ ಅಪಾರ ಕೊಡಿಗೆ ನೀಡಿದರು. ಅದರ ಫಲವಾಗಿಯೇ ಸಂಸ್ಕೃತಿ, ಆಚಾರ, ವಿಚಾರಗಳ ನೆಲೆಗಟ್ಟಿನಲ್ಲಿ ನಾಡನ್ನು ಕಟ್ಟಲು ಪ್ರೇರಣೆ ದೊರಕಿತು. ಶ್ರೀಗಳ ಪರಿಶ್ರಮದಿಂದ ಕನ್ನಡ ಭಾಷೆ ಎಲ್ಲೆಡೆ ಪಸರಿಸಿತು ಎಂದು ನುಡಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಭಾಷೆ, ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ಜವಾಬ್ದಾರಿ ಎಲ್ಲರ ಮೇಲಿದೆ. ಸಂಸ್ಕೃತಿಯಿಂದ ಮನುಷ್ಯನ ಜೀವನದಲ್ಲಿ ಸಂಸ್ಕಾರ ಮೂಡುತ್ತದೆ. ಆ ಮೂಲಕ ಆತನ ಬದುಕು ಸಮಾಜಮುಖಿಯಾಗಿರುತ್ತದೆ. ಇಂತಹದೊಂದು ವಾತಾವರಣ ಸೃಷ್ಟಿಸುವ ಮೂಲಕ ಸಂಸ್ಕೃತಿ ವಿಸ್ತರಿಸುವ ಅಭಿಮಾನದ ಹೊಣೆಗಾರಿಕೆ ಪ್ರತಿಯೊಬ್ಬರ ಮೇಲಿದೆ ಎಂದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಪದ್ಮಾ ಶೇಖರ್, ಎಡಿಸಿ ಡಾ.ಶಿವರಾಜ್ ಮಾತನಾಡಿದರು. ಇದೇ ಸಂದರ್ಭದಲ್ಲಿ ಹಿಮಾಲಯ ಪ್ರತಿಷ್ಠಾನದ 'ದರ್ಶನಂ' ಕಿರು ಹೊತ್ತಿಗೆ ಬಿಡುಗಡೆ ಮಾಡ ಲಾಯಿತು. ಸಮಾಜ ಸೇವಕ ಎನ್.ಶ್ರೀಧರ ದೀಕ್ಷಿತ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿಮಾಲಯ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಎನ್.ಅನಂತ, ಉಪಾಧ್ಯಕ್ಷರಾದ ಎಸ್.ನಾಗಮಲ್ಲು, ಎಸ್.ಕೃಷ್ಣಮೂರ್ತಿ, ಸಂಚಾಲಕ ಎಂ.ವಿ. ನಾಗೇಂದ್ರ ಬಾಬು, ಕಾರ್ಯದರ್ಶಿ ಎ.ಹರ್ಷವರ್ಧನ, ಸಲಹೆಗಾರರಾದ ಕೆ.ವಿ.ರಾಮನಾಥ್, ರವೀಂದ್ರರಾವ್, ಬಿ.ಪ್ರಶಾಂತ್ ಮತ್ತಿತರರು ಹಾಜರಿದ್ದರು.

ರಾಜ್ಯದ ಎಲ್ಲಾ ತಾಲೂಕು ಆಸ್ಪತ್ರೆಗಳಲ್ಲಿ ಟೆಲಿ ಐಸಿಯು ಸೌಲಭ್ಯ

ಬೆಂಗಳೂರು, ನ.30– ಆರೋಗ್ಯ ಇಲಾಖೆ ಈಗಾಗಲೇ ಟೆಲಿ ಐಸಿಯು ಸೌಲಭ್ಯವನ್ನು 42 ತಾಲೂಕು ಆಸ್ಪತ್ರೆಗಳಲ್ಲಿ ಪ್ರಾರಂಭಿಸಿದ್ದು, ಮುಂದಿನ ವರ್ಷದಲ್ಲಿ ರಾಜ್ಯದ ಎಲ್ಲಾ ತಾಲೂಕು ಆಸ್ಪತ್ರೆಗಳಲ್ಲಿಯೂ ಪ್ರಾರಂಭಿಸಲು ಸಿದ್ಧತೆ ನಡೆಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.



ಟೆಲಿಮೆಡಿಸಿನ್ ಸೊಸೈಟಿ ಆಫ್ ಇಂಡಿಯಾ ಭಾರತೀಯ ವಿಧಿಜ್ಞಾನ ಸಂಸ್ಥೆ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 21ನೇ ಅಂತಾರಾಷ್ಟ್ರೀಯ ಸಮಾವೇಶದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಟೆಲಿ ಐಸಿಯು ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಅತ್ಯುತ್ತಮ ದರ್ಜೆಯ ಕ್ಯಾಮೆರಾ ಬಳಸಲಾಗುತ್ತಿದ್ದು, ದೂರದಲ್ಲಿದ್ದುಕೊಂಡೇ ತಜ್ಞ ವೈದ್ಯರು ಹಳ್ಳಿಯಲ್ಲಿರುವ ರೋಗಿಗೆ ಚಿಕಿತ್ಸೆ ನೀಡಲು ಸ್ಥಳೀಯ ವೈದ್ಯರಿಗೆ ನೆರವಾಗಬಹುದು. ಎಐ ತಂತ್ರಜ್ಞಾನ ಬಳಸಿ ಈ ವರ್ಷವೇ ಟೆಲಿ ರೆಡಿಯೋಲಾಜಿ, ಆಪ್ತ ಸಮಾಲೋಚನೆ ಸೇವೆ ಮುಖಾಂತರ ರೋಗ ಪತ್ತೆ ಮಾಡುವ ನೂತನ ವ್ಯವಸ್ಥೆ ಜಾರಿಗೆ ತರಲು ಸಿದ್ಧತೆ ನಡೆದಿದೆ ಎಂದು ಹೇಳಿದರು.

ಈಗಾಗಲೇ 82 ತಾಲೂಕು ಆಸ್ಪತ್ರೆಗಳಲ್ಲಿ ಟೆಲಿ ಕಾರ್ಡಿಯೋಲಾಜಿ ವ್ಯವಸ್ಥೆ ಮೂಲಕ ಜನರಿಗೆ ಆರೋಗ್ಯ ಸೇವೆ ನೀಡುತ್ತಿದ್ದು, ದುಬಾರಿ ದರದ ಇಂಜೆಕ್ಷನ್ ಸಹ ಉಚಿತವಾಗಿ ನೀಡಲಾಗುತ್ತಿದೆ. ಇದರಿಂದ 600 ಜೀವಗಳನ್ನು ಕಳೆದ ಒಂದೂವರೆ ವರ್ಷದಲ್ಲಿ ಉಳಿಸಲಾಗಿದೆ. ಕೇವಲ 8–9 ನಿಮಿಷದಲ್ಲಿ ಪರಿಣತ ವೈದ್ಯರು ಇಸಿಜಿ ಪರೀಕ್ಷಿಸಿ ಸೂಕ್ತ ಚಿಕಿತ್ಸೆ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಹೇಳಿದರು.

ಆರೋಗ್ಯ ಇಲಾಖೆ ತಂತ್ರಜ್ಞಾನ ಬಳಸಿಕೊಂಡು ಆರೋಗ್ಯ ಉಪಕರಣಗಳ ನಿರ್ವಹಣೆ ಮಾಡುವ ಕೆಲಸ ಮಾಡುತ್ತಿದೆ. ನಾವು ಎಲ್ಲಾ ತಂತ್ರಜ್ಞಾನ ಬಳಸಿ ಹಳ್ಳಿಯಲ್ಲಿ ವಾಸಿಸುವವರಿಗೂ ಉತ್ತಮ ಚಿಕಿತ್ಸೆ ನೀಡಲು, ಪರಿಣಿತ ವೈದ್ಯರ ಸಲಹೆ ಸಿಗುವಂತೆ ಮಾಡಲು ಕಾರ್ಯೋನ್ಮುಖರಾಗಿದ್ದೇವೆ ಎಂದು ತಿಳಿಸಿದರು.

ಕರ್ನಾಟಕ ವೈದ್ಯಕೀಯ ಸೌಲಭ್ಯ ಹಾಗೂ ಆರೋಗ್ಯ ಪ್ರವಾಸೋದ್ಯಮದಲ್ಲಿ ಮುಂಚೂಣಿಯಲ್ಲಿದ್ದು, ಬೇರೆ ಬೇರೆ ದೇಶಗಳಿಂದ ಜನರು ಇಲ್ಲಿಗೆ ಬರುತ್ತಿದ್ದಾರೆ. ಆರೋಗ್ಯ ಕ್ಷೇತ್ರದಲ್ಲಿ ಎಐ ಮತ್ತು ಡಿಜಿಟಲ್ ತಂತ್ರಜ್ಞಾನದ ಬಳಕೆ ಅತ್ಯಗತ್ಯವಾಗಿದೆ ಎಂದು ಹೇಳಿದರು.

ಡಿ.16 ಡಿಫೆನ್ಸ್ ಅಂಕಣ ಕುರಿತು ವಿಶೇಷ ಕಾರ್ಯಾಗಾರ


ಮೈಸೂರು,ನ.30(ಜಿಎ)–ಮೈಸೂರಿನ ಡಿಫೆನ್ಸ್ ಪರೀಕ್ಷೆಯ ತರಬೇತಿ ಕೇಂದ್ರವಾದ ಆಲ್ಫಾ ಲೀಡ್ ಅಕಾಡೆಮಿ ವತಿಯಿಂದ ಪತ್ರಕರ್ತರಿಗಾಗಿ ಡಿ.16ರಂದು ಬೆಳಗ್ಗೆ 11 ಗಂಟೆಗೆ ನಜರ್‌ಬಾದ್‌ನಲ್ಲಿರುವ ಅಕಾಡೆಮಿಯಲ್ಲಿ ಡಿಫೆನ್ಸ್ ಅಂಕಣಗಳ ಕುರಿತು ವಿಶೇಷ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಲ್ಫಾ ಲೀಡ್ ಅಕಾಡೆಮಿ ಸಂಸ್ಥಾಪಕರು, ಏರ್ ಫೋರ್ಸ್‌ನ ನಿವೃತ್ತ ಅಧಿಕಾರಿ ಗ್ರೂಪ್ ಕ್ಯಾಪ್ಟನ್ ಅಭಿನವ ಚತುರ್ವೇದಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿಫೆನ್ಸ್ ವಿಷಯದ ಕುರಿತು ಅಂಕಣಗಳನ್ನು ಹೇಗೆ ಬರೆಯಬೇಕು. ಯಾವುದಕ್ಕೆ ಕಟ್ಟುಪಾಡುಗಳಿವೆ. ಯಾವ ಅಂಶಗಳನ್ನು ಬರೆಯಬಹುದು ಹಾಗೂ ಬರೆಯಬಾರದು ಎಂಬುದನ್ನು ಕುರಿತು ಹಾಗೂ ಹಲವಾರು ವಿಷಯಗಳ ಕುರಿತು ಚರ್ಚಿಸಲಾಗುತ್ತದೆ ಎಂದರು.

ಈ ವಿಶೇಷ ಕಾರ್ಯಕ್ರಮಕ್ಕೆ ಪ್ರತಿ ದಿನಪತ್ರಿಕೆಯಿಂದ ಇಬ್ಬರು ಪತ್ರಕರ್ತರಿಗೆ ಪಾಲ್ಗೊಳ್ಳುವ ಅವಕಾಶವಿರುತ್ತದೆ. ಕಾರ್ಯಾಗಾರ ದಿನದ ನಂತರದಿಂದ ದಿನಪತ್ರಿಕೆಯಲ್ಲಿ ಅದ್ಭುತವಾಗಿ ಹಾಗೂ ಅಚ್ಚುಕಟ್ಟಾಗಿ ಪ್ರಕಟಗೊಳ್ಳುವ ಅಂಕಣವನ್ನು ಮತ್ತು ಬರೆದ ಪತ್ರಕರ್ತರಿಗೆ ಅಥವಾ ಅಂಕಣಕಾರರಿಗೆ 'ಫೀಲ್ಡ್ ಮಾರ್ಷಲ್ ಕೆ.ಎಮ್. ಕಾರ್ಯಪ್ಪ ಅತ್ಯುತ್ತಮ ಡಿಫೆನ್ಸ್ ಜರ್ನಲಿಸ್ಟ್' ಎಂಬ ಪ್ರಶಸ್ತಿಯನ್ನು ಹಾಗೂ ನಗದು ಬಹುಮಾನವನ್ನು ಜ.26ರ ಗಣರಾಜ್ಯೋತ್ಸವ ಹಾಗೂ ಆ.15 ಸ್ವಾತಂತ್ರ್ಯ ದಿನಾಚರಣೆ ದಿನದಂದು ನೀಡಿ ಪ್ರಶಂಸಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ 919019353966 ಸಂಪರ್ಕಿಸಿ ಎಂದರು.

ಯು.ಎಂ.ಶಾಂತಪ್ಪ ನಿಧನ

ಮೈಸೂರು,ನ.30– ಮೈಸೂರಿನ ಸ್ಥಳೀಯ ರಾಜಕೀಯದಲ್ಲಿ ಸಕ್ರಿಯವಾಗಿದ್ದ



ಯು.ಎಂ.ಶಾಂತಪ್ಪ ಅವರು ಭಾನುವಾರ ಸಂಜೆ ನಿಧನರಾದರು. ಅವರಿಗೆ 93 ವರ್ಷ ವಯಸ್ಸಾಗಿತ್ತು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ಅವರು, ಜನತಾ ಪಕ್ಷದ ಕೃಷ್ಣರಾಜ ಬ್ಲಾಕ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಮೃತರು ರೂಪ ಪ್ರಕಾಶನದ ಮಾಲೀಕರೂ ಆದ ಯು.ಎಸ್.ಮಹೇಶ್ ಅವರ ತಂದೆಯಾಗಿದ್ದು, ಅವರೊಂದಿಗೆ ಮೂವರು ಪುತ್ರಿಯರು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಶಾಂತಪ್ಪ ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಡಿ.1ರ ಸೋಮವಾರ) ಮಧ್ಯಾಹ್ನ 3ಕ್ಕೆ ವಿದ್ಯಾರಣ್ಯಪುರಂ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಗರ ಸಾರಿಗೆ ಬಸ್ ಚಾಲಕ ರವಿಗೆ ಸನ್ಮಾನ.



ಮೈಸೂರಿನ ಕ್ಯಾತಮಾರನಹಳ್ಳಿ ಶ್ರೀ ಕಾವೇರಿ ಯುವಕರ ಬಳಗ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಕನ್ನಡ ಭಾಷಾಭಿಮಾನ ಮತ್ತು ಸೇವೆ ಪರಿಗಣಿಸಿ ಮೈಸೂರು ನಗರ ಸಾರಿಗೆ ಬಸ್ ಚಾಲಕ ರವಿ ಅವರನ್ನು ಸನ್ಮಾನಿಸಲಾಯಿತು. ಕ್ಯಾತಮಾರನಹಳ್ಳಿಯ ಮುಖಂಡ ಜೆ.ವೆಂಕಟೇಶ್, ಬಳಗದ ಅಧ್ಯಕ್ಷರು, ಕಾರ್ಯದರ್ಶಿಗಳು, ಸಂಚಾಲಕರು ಮತ್ತಿತರರು ಹಾಜರಿದ್ದರು.

ಅರ್ಜಿ ಆಹ್ವಾನ

ಮೈಸೂರು,ನ.30–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ರಾಜ್ಯ ಮಹಿಳಾ ಯೋಜನೆಯು 2025–26 ಅಭಿವೃದ್ಧಿ ನಿಗಮದ ಯೋಜನೆ ಯಾದ ಉದ್ಯೋಗಿನಿ ಸಾಲಿಗೆ ಅನುಷ್ಠಾನ ಗೊಳಿಸಲಾಗುತ್ತಿದ್ದು, ಸದರಿ ಯೋಜನೆ ಸೌಲಭ್ಯಕ್ಕಾಗಿ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿರುತ್ತದೆ. ನಂಜನಗೂಡು ಕ್ಷೇತ್ರ ವ್ಯಾಪ್ತಿಯ ಮಹಿಳಾ ಅಭ್ಯರ್ಥಿಗಳು ಉದ್ಯೋಗಿನಿ ಯೋಜನೆಯಡಿ ಸ್ವಯಂ ಉದ್ಯೋಗ ಕೈಗೊಳ್ಳಲು ಸ್ಥಳೀಯ ಬಾಪೂಜಿ ಸೇವಾ ಕೇಂದ್ರ, ಗ್ರಾಮ ಓನ್, ಕರ್ನಾಟಕ ಓನ್ ಕೇಂದ್ರಗಳಲ್ಲಿ https://sevasindhu. karnataka.gov.in ಪೋರ್ಟಲ್‌ನಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಡಿ.15ರ 5.30 ಗಂಟೆಯೊಳಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ಬದುಕು ಕಟ್ಟಿಕೊಳ್ಳಲು ಅವಕಾಶಗಳನ್ನು ಬಳಸಿಕೊಳ್ಳಿ

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಭಿಪ್ರಾಯ



ಉದ್ಯೋಗ ಮೇಳವನ್ನು ಸಚಿವ ಚಲುವರಾಯಸ್ವಾಮಿ ಉದ್ಘಾಟಿಸಿದರು.

ನಾಗಮಂಗಲ, ನ.30– ಎಲ್ಲರೂ ಬದುಕನ್ನು ಕಟ್ಟಿಕೊಳ್ಳಲು ಹೆಚ್ಚಿನ ಅವಕಾಶಗಳಿವೆ. ಅವುಗಳನ್ನು ನಾವು ಸರಿಯಾಗಿ ಬಳಸಿಕೊಂಡರೆ ನಮ್ಮ ಬದುಕು ಹಸನಾಗುತ್ತದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ಇಲ್ಲಿನ ಸರ್ಕಾರಿ ಕಾಲೇಜಿನಲ್ಲಿ ನಡೆದ ಯೂನಿಕ್ ಸರ್ವಿಸ್ ಲಿಮಿಟೆಡ್‌ನಿಂದ ಆಯೋಜಿಸಿದ್ದ ಟಾಟಾ ಎಲೆಕ್ಟ್ರಾನಿಕ್ ಕಂಪನಿಯ ಉದ್ಯೋಗ ಮೇಳವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪಿಯುಸಿ, ಪದವಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶಗಳಿದ್ದು, ಗ್ರಾಮೀಣ ಯುವಕರೇ ಹೆಚ್ಚು ಕೆಲಸಗಳನ್ನು ಮಾಡುವ ಆಸೆ ಹೊಂದಿರುತ್ತಾರೆ. ಎಲ್ಲರೂ ನಿರುದ್ಯೋಗಿಗಳು ಎಂದು ಕುಳಿತುಕೊಂಡರೆ ಆಗುವುದಿಲ್ಲ. ಪ್ರತಿಯೊಂದು ಹಂತದಲ್ಲಿ ಅವರಿಗೆ ಉದ್ಯೋಗ ಮಾಡಲು ಅವಕಾಶವಿದ್ದು, ಆ ಸಂದರ್ಭಗಳನ್ನು ಅನುಸರಿಸಿದವರು ಉದ್ಯೋಗಕ್ಕೆ ಹೋಗಬೇಕೆಂದು ತಿಳಿಸಿದರು.

ನಾನು ಕೃಷಿ ಕ್ಷೇತ್ರ ನೋಡಿದಾಗ ಒಂದು ಎಕರೆ ಜಮೀನಿನಲ್ಲಿ ಪ್ರತಿ ತಿಂಗಳು 50 ಸಾವಿರದಿಂದ 1 ಲಕ್ಷ ರೂ. ಗಳಿಸುತ್ತಿರುವ ರೈತ ಕುಟುಂಬಗಳಿವೆ. ಅದೇ ರೀತಿ ಬೇರೆ ಬೇರೆ ಕಂಪನಿಗಳಲ್ಲಿಯೂ ಕೆಲಸ ಮಾಡುವಂತಹ ಅವಕಾಶಗಳು ಹೆಚ್ಚಿನ ಪ್ರಮಾಣದಲ್ಲಿದ್ದು, ಮಾಹಿತಿ ಕೊರತೆಯಿಂದ ಯುವಕರು ಕೆಲಸ ಸಿಗುವುದಿಲ್ಲ ಎಂದು ಕುಳಿತಿರುತ್ತಾರೆ. ನಾಗಮಂಗಲ ತಾಲೂಕಿನ ಎಲ್ಲಾ ಯುವಕರಿಗೆ ಕೆಲಸ ಸಿಗಲಿ ಎಂಬ ಉದ್ದೇಶದಿಂದ ಉದ್ಯೋಗ ಮೇಳ ಆಯೋಜಿಸಿದಾಗ ಬರುವವರ ಸಂಖ್ಯೆ ಕಡಿಮೆಯಾಗಿದೆ. ಬಂದಿರುವ ನೀವೆಲ್ಲರೂ ಈ ಬಗ್ಗೆ ಸಮರ್ಪಕ ಮಾಹಿತಿ ನೀಡಿ, ಮತ್ತಷ್ಟು ಜನ ಆಗಮಿಸಿ ಇದರ ಸದುಪಯೋಗ ಪಡೆಯಲಿ ಎಂದರು.

ಯೂನಿಕ್ ಸರ್ವಿಸ್ ಲಿಮಿಟೆಡ್ ಸಂಸ್ಥಾಪಕ ನಾಗೇಶ್ ಮಾತನಾಡಿ, ಉದ್ಯೋಗಾವಕಾಶಗಳು ಎಲ್ಲೆಡೆ ಸಿಗುತ್ತವೆ. ಹಳ್ಳಿಗಳಲ್ಲಿ ನಮಗೆ ಉದ್ಯೋಗ ವಿಲ್ಲವೆಂದು ಕಾದು ಕುಳಿತಿದ್ದರೆ, ನಗರಗಳ ಕಂಪನಿಗಳಲ್ಲಿ ಕೆಲಸ ಮಾಡುವ ಜನರಿಲ್ಲ ವೆಂದು ಒದ್ದಾಡುತ್ತಿರುತ್ತಾರೆ. ಈ ಎರಡರ ಮಧ್ಯೆ ಸೇತುವೆಯಾಗಿ ಕೆಲಸ ಮಾಡುವುದು ನಮ್ಮ ಸಂಸ್ಥೆ ಕೆಲಸ ಎಂದರು.

ಯುವಕರ ವಿದ್ಯಾರ್ಹತೆ ಮತ್ತು ಅವರ ವೃತ್ತಿ ಬಗೆಯ ಪರಿಣತಿ ಆಧರಿಸಿ ಅವರಿಗೆ ಒಂದು ವರ್ಷದ ತರಬೇತಿ ನೀಡುವ ಮೂಲಕ ಅವರಿಗೆ ಬೇರೆ ಬೇರೆ ಕೆಲಸಗಳಲ್ಲಿ ತೊಡಗಿಸಲಾಗುವುದು. ಸೈನ್ಯಕ್ಕೆ ಸೇರುವವರಿಗೂ ಸಹ ನಾವು ತರಬೇತಿ ನೀಡುತ್ತೇವೆ ಎಂದರು.

ಉದ್ಯೋಗಾವಕಾಶ ಬಯಸುವ ಯುವಕರು ಮಂತ್ರಿಗಳ ಕಚೇರಿಯಲ್ಲಿ ಬಂದು ಮಾಹಿತಿ ಪಡೆದು ತಮ್ಮ ದಾಖಲೆಗಳನ್ನು ಕೊಟ್ಟು ಉದ್ಯೋಗಮೇಳ ಅವಕಾಶ ಪಡೆದುಕೊಂಡು ಕೆಲಸಕ್ಕೆ ಸೇರಿಕೊಳ್ಳುವಂತೆ ತಿಳಿಸಿದರು.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚಿನ್ ಚಲುವರಾಯಸ್ವಾಮಿ, ಕೆಎಂಎಫ್ ನಿರ್ದೇಶಕ ಎನ್.ಅಪ್ಪಾಜಿಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಜೆ.ರಾಜೇಶ್, ಕಂಪನಿಯ ಮುಖ್ಯಸ್ಥರಾದ ಶಾಂತಲಾ ಮೋಹನ್, ವೀಣಾ ಶಿವಮೂರ್ತಿ, ಮುರಳಿ, ಹೆಚ್.ಟಿ.ಕೃಷ್ಣೇಗೌಡ, ಪುರಸಭೆ ಮುಖ್ಯಾಧಿಕಾರಿ ವೀಣಾ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೆ.ನಾಗೇಶ್, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಜೆ.ವೈ.ಮಂಜುನಾಥ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಂ.ಪ್ರಕಾಶ್, ನಿರ್ದೇಶಕ ಸುರೇಂದ್ರ, ಮುಖಂಡರಾದ ಮೂಡ್ಲಿಗೌಡ, ಚಿಕ್ಕಮ್ಮ, ಯಶೋಧಮ್ಮ, ಸಾವಿತ್ರಮ್ಮ ಸೇರಿದಂತೆ ಹಲವರಿದ್ದರು.

ಸೋಲನ್ನು ಸವಾಲಾಗಿ ಸ್ವೀಕರಿಸುವವರೇ ಸಾಧಕರು

ಶಾಲಾ ಶಿಕ್ಷಣ ಇಲಾಖೆ ಪದವಿಪೂರ್ವ ಉಪನಿರ್ದೇಶಕ ಸಿ.ಚಲುವಯ್ಯ



ಸಮಾರಂಭದಲ್ಲಿ ಪ್ರಥಮ ಸ್ಥಾನ ಪಡೆದ ಮೈಸೂರು ಬಾಲಕಿಯರ ತಂಡಕ್ಕೆ ಗಣ್ಯರು ಬಹುಮಾನ ವಿತರಿಸಿದರು.

ಮಂಡ್ಯ, ನ.30– ಕ್ರೀಡೆಗಳಲ್ಲಿ ಸೋಲನ್ನು ಸವಾಲಿನ ಮೆಟ್ಟಿಲಾಗಿ ಸ್ವೀಕರಿಸುವವರೇ ಸಾಧಕರಾಗುತ್ತಾರೆ ಎಂದು ಶಾಲಾ ಶಿಕ್ಷಣ ಇಲಾಖೆ ಪದವಿಪೂರ್ವ ಉಪನಿರ್ದೇಶಕ ಸಿ.ಚಲುವಯ್ಯ ತಿಳಿಸಿದರು.

ನಗರದ ಪಿಇಟಿ ಕ್ರೀಡಾಂಗಣದಲ್ಲಿ ಶಾಲಾ ಶಿಕ್ಷಣ ಇಲಾಖೆ ಪದವಿ ಪೂರ್ವ ಉಪನಿರ್ದೇಶಕರ ಕಚೇರಿ ಮಂಡ್ಯ ಹಾಗೂ ಜನತಾ ಶಿಕ್ಷಣ ಟ್ರಸ್ಟ್ ಪಿಇಎಸ್ ಪದವಿ ಪೂರ್ವ ಕಾಲೇಜು ಸಹಯೋಗದಲ್ಲಿ ಆಯೋಜಿಸಿದ್ದ 2 ದಿನಗಳ ಕಾಲ ನಡೆದ ರಾಜ್ಯಮಟ್ಟದ ಕಾಲೇಜು ವಿದ್ಯಾರ್ಥಿಗಳ ಖೋ ಖೋ ಪಂದ್ಯಾವಳಿ ಸಮಾರೋಪ ಸಮಾರಂಭದಲ್ಲಿ ಕ್ರೀಡಾಪಟುಗಳಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

ಇತ್ತೀಚೆಗೆ ಗ್ರಾಮೀಣ ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಹೆಚ್ಚು ಭಾಗಿಯಾಗಿ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುತ್ತಿದ್ದಾರೆ. ಉತ್ತಮ ಕ್ರೀಡಾಪಟುಗಳು ಕ್ರೀಡಾ ಮೀಸಲಾತಿ ಕೋಟಾದಿಂದ ಉದ್ಯೋಗಗಳನ್ನು ಪಡೆದುಕೊಳ್ಳಬಹುದು ಎಂದು ಕಿವಿಮಾತು ಹೇಳಿದರು.

ಮಂಡ್ಯದಲ್ಲಿ ನಡೆದ ರಾಜ್ಯ ಮಟ್ಟದ ಖೋ ಖೋ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದು ವಿಜೇತರಾದ ಬಾಲಕ ಮತ್ತು ಬಾಲಕಿಯರ ತಂಡವು ಕರ್ನಾಟಕ ರಾಜ್ಯ ಪ್ರತಿನಿಧಿಸಿ ರಾಷ್ಟ್ರಮಟ್ಟದ ಖೋ ಖೋ ಪಂದ್ಯಕ್ಕೆ ಆಯ್ಕೆಯಾಗಿದ್ದಾರೆ. ಉತ್ತಮ ಪ್ರದರ್ಶನ ನೀಡಿ ಕೀರ್ತಿ ತನ್ನಿ ಎಂದು ಆಶಿಸಿದರು.

ಪಿಟಿಇ ಸಂಸ್ಥೆ ಅಧ್ಯಕ್ಷ ವಿಜಯ ಆನಂದ್ ಮತ್ತು ಆಡಳಿತ ಮಂಡಳಿಯನ್ನು ನಾವು ಕ್ರೀಡಾಕೂಟ ನಡೆಸಲು ಸಹಕಾರ ನೀಡಿ ಎಂದು ಕೇಳಿಕೊಂಡೆವು. ಅದರಂತೆ ಎಲ್ಲಾ ಸಹಕಾರ ಮತ್ತು ಊಟೋಪಚಾರ ನೀಡಿ ಉತ್ತಮವಾಗಿ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳು ಎಂದರು.

ಪಿಇಟಿ ಕಾರ್ಯದರ್ಶಿ ಶಿವಪ್ರಸಾದ್ ಮಾತನಾಡಿ, ಕ್ರೀಡೆಗಳಲ್ಲಿ ಭಾಗವಹಿಸುವುದು ಮುಖ್ಯವಾಗುತ್ತದೆ. ಗೆಲುವು ಸೋಲು ಮುಖ್ಯವಲ್ಲ. ವಿದ್ಯಾರ್ಥಿಗಳಲ್ಲಿ ಕ್ರೀಡಾಸಕ್ತಿ ಮುಖ್ಯ. ಇದರಿಂದ ಮನಸ್ಸು ಮತ್ತು ದೇಹ ಸಮತೋಲನವಾಗಿ ಬೆಳೆಸಲು ಸಹಕಾರಿಯಾಗುತ್ತದೆ ಎಂದರು.

ಸೋತವರು ನೊಂದುಕೊಳ್ಳಬೇಕಿಲ್ಲ. ಮುಂದೆ ಉತ್ತಮ ಪ್ರದರ್ಶನ ನೀಡಲು ನಿಮಗೆ ಅವಕಾಶವಿದೆ. ನಿರಂತರ ಶ್ರಮ ಮತ್ತು ಸಮಯಪ್ರಜ್ಞೆಯಿಂದ ಕ್ರೀಡಾ ನಿಯಮ ಮತ್ತು ಕೌಶಲ್ಯತೆಗಳನ್ನು ಕಲಿಯಿರಿ ಎಂದು ಸಲಹೆ ನೀಡಿದರು.

ಈ ವೇಳೆ 33 ಬಾಲಕಿಯರ ತಂಡದಲ್ಲಿ ಅಂತಿಮವಾಗಿ ಮೈಸೂರು ಮತ್ತು ಬೆಂಗಳೂರು ಉತ್ತರ ತಂಡಗಳ ನಡುವೆ ನೇರ ಸೆಣಸಾಟ ನಡೆದು ಮೈಸೂರು ತಂಡ ಗೆಲುವು ಸಾಧಿಸಿ ಪ್ರಥಮ ಬಹುಮಾನ ಪಡೆಯಿತು. 33 ಬಾಲಕರ ತಂಡದಲ್ಲಿ ಅಂತಿಮವಾಗಿ ದಾವಣಗೆರೆ ಮತ್ತು ಬೆಂಗಳೂರು ತಂಡಗಳ ನಡುವೆ ನೇರ ಸೆಣಸಾಟ ನಡೆದು ದಾವಣಗೆರೆ ತಂಡ ಪ್ರಥಮ ಸ್ಥಾನ ಪಡೆಯಿತು.

ಕಾರ್ಯಕ್ರಮದಲ್ಲಿ ಸರ್ಕಾರಿ ನೌಕರರ ಸಂಘದ ಜಿಲ್ಲಾ ಉಪಾಧ್ಯಕ್ಷ ಎಂ.ಎಲ್.ಕೃಷ್ಣೇಗೌಡ, ಪ್ರಾಂಶುಪಾಲರ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಕಾಂತರಾಜು, ನಿಂಗೇಗೌಡ, ಕ್ರೀಡಾ ಸಂಯೋಜಕ ಎಸ್.ಎಂ.ಗುರುಸ್ವಾಮಿ, ಪಿಇಎಸ್ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಕೆ.ಸಣ್ಣಮೊಗ, ದೈಹಿಕ ಶಿಕ್ಷಣ ಉಪನ್ಯಾಸಕ ಬಿ.ಎಂ.ಲೋಕೇಶ್, ದೈಹಿಕ ಶಿಕ್ಷಕ ಉಪನ್ಯಾಸಕ ಗೋಪಾಲಕೃಷ್ಣ, ನೋಡಲ್ ಅಧಿಕಾರಿಗಳಾದ ಜಗದೀಶ್, ರಮೇಶ್ ಛಲವಾದಿ, ಪ್ರಾಂಶುಪಾಲೆ ವೀಣಾ, ಎಸ್.ಓ.ಅಶ್ವಿನಿ, ಮೋಹನ್, ಸಿಬ್ಬಂದಿ ಹಾಜರಿದ್ದರು.

ಮಾದಿಗ ಸಮುದಾಯ ರಾಜಕೀಯವಾಗಿ ಹಿಂದುಳಿದಿದೆ



ಮಾದರ ಮಹಾಸಭಾ ಸದಸ್ಯತ್ ನೋಂದಣಿ ಅಭಿಯಾನದಲ್ಲಿ ಚಂದ್ರಶೇಖರ್ ಮಾತನಾಡಿದರು.

ಮದ್ದೂರು, ನ.30– ರಾಜ್ಯದ ಪ.ಜಾತಿಯಲ್ಲಿ ಮಾದರ/ಮಾದಿಗ ಸಮುದಾಯ ಬಹುಸಂಖ್ಯೆಯನ್ನು ಹೊಂದಿದ್ದರೂ ಶಿಕ್ಷಣ, ಉದ್ಯೋಗ, ಆರ್ಥಿಕ, ರಾಜಕೀಯವಾಗಿ ಬಹಳಷ್ಟು ಹಿಂದುಳಿದಿದೆ ಎಂದು ಅಖಿಲ ಕರ್ನಾಟಕ ಡಾ.ಬಾಬುಜಗಜೀವನರಾಂ ಸಂಘಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಎನ್.ಆರ್.ಚಂದ್ರಶೇಖರ್ ತಿಳಿಸಿದರು.

ತಾಲೂಕಿನ ಚಾಮನಹಳ್ಳಿಯಲ್ಲಿ ನಡೆದ ಕರ್ನಾಟಕ ಮಾದರ ಮಹಾಸಭಾ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರಾಜ್ಯ ಮಾದಿಗ ಸಮುದಾಯಕ್ಕೆ ಒಂದೇ ಒಂದು ಮೆಡಿಕಲ್, ಇಂಜಿನಿಯರಿಂಗ್ ಕಾಲೇಜು ಇಲ್ಲ. ಉನ್ನತ ವ್ಯಾಸಂಗವಿಲ್ಲ. ಐಎಎಸ್, ಐಪಿಎಸ್, ಕೆಎಎಸ್ ತರಬೇತಿ ಕೇಂದ್ರ ಇಲ್ಲ. ರಾಜಕೀಯವಾಗಿ ಪ್ರಬಲವಾದ ಸ್ಥಾನಮಾನವಿಲ್ಲ. ಆರ್ಥಿಕ ಸಬಲೀಕರಣವಿಲ್ಲದೆ ಮಾದಿಗ ಸಮುದಾಯ ಬಡತನದ ಬೇಗೆಯಲ್ಲಿ ಬೆಂದು ನೊಂದು ಬೇಸತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮಾದರ ಮಹಾಸಭಾದ ಉದ್ದೇಶ ಮಾದಿಗ ಸಮುದಾಯವನ್ನು ಮುಖ್ಯವಾಹಿನಿಗೆ ತರುವುದಾಗಿದೆ. ಅದಕ್ಕಾಗಿ ತಮ್ಮ ಹಾಗೂ ತಮ್ಮ ಕುಟುಂಬದ ಹಿತ ದೃಷ್ಟಿಯಿಂದ ಮಹಾಸಭಾ ಸದಸ್ಯರಾಗುವ ಮೂಲಕ ಸಮಾಜ ಸದೃಢರಾಗಬೇಕು ಎಂದು ಮನವಿ ಮಾಡಿದರು.

ತಾಲೂಕು ಮಟ್ಟದಲ್ಲಿ ಹಸಿರು ಕ್ರಾಂತಿ ಹರಿಕಾರ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನರಾಂ ಭವನ ನಿರ್ಮಾಣಕ್ಕೆ ನಿವೇಶನ ಮಂಜೂರು ಮಾಡಬೇಕು ಎಂದು ತಾಲೂಕು ಆಡಳಿತ ಹಾಗೂ ಶಾಸಕರಿಗೆ ಮನವಿ ಮಾಡಲಾಗುವುದು ಎಂದರು.

ಸಮುದಾಯದ ಹಿರಿಯ ಮುಖಂಡ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಸಮುದಾಯದ ಹಿತದೃಷ್ಟಿಯಿಂದ ಹಾಗೂ ಯುವ ಜನತೆಯ ಭವಿಷ್ಯಕ್ಕಾಗಿ 'ಮಾದಿಗರಿಂದ ಮಾದಿಗರಿಗಾಗಿ ಕರ್ನಾಟಕ ಮಾದರ ಮಹಾಸಭಾ (ರಿ) ಬೆಂಗಳೂರನ್ನು ಸ್ಥಾಪನೆ ಮಾಡಿ ಸಂಸ್ಥಾಪಕ ಅಧ್ಯಕ್ಷರಾಗಿ ಆಹಾರ ಸಚಿವ ಕೆ.ಎಚ್.ಮುನಿಯಪ್ಪ, ಉಪಾಧ್ಯಕ್ಷರಾಗಿ ಮಾಜಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಮಾಜಿ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ, ಪ್ರಧಾನ ಕಾರ್ಯದರ್ಶಿಯಾಗಿ ಅಬಕಾರಿ ಸಚಿವ ಆರ್.ಬಿ.ತಿಮ್ಮಪೂರ್, ಮಾಜಿ ಸಚಿವ ಹೆಚ್.ಆಂಜನೇಯ, ಸಂಘಟನಾ ಕಾರ್ಯದರ್ಶಿಗಳಾಗಿ ಮಾಜಿ ಶಾಸಕ ತಿಮ್ಮರಾಯಪ್ಪ ಒಳಗೊಂಡ ಪಕ್ಷಾತೀತ ವಾದ ಸಂಘಟನೆಯಾಗಿದೆ ಎಂದರು.

ತಾಲೂಕು ಅಧ್ಯಕ್ಷ ಚಾಮನಹಳ್ಳಿ ಮಂಜು, ಜಿಲ್ಲಾ ಉಪಾಧ್ಯಕ್ಷರಾದ ಸಿ.ಡಿ.ಕುಚೇಲ ಮುಖಂಡರಾದ ಸಿ.ಡಿ.ಶಿವೇಂದ್ರ ಕುಮಾರ್, ವಿಶ್ವಾಸ್, ಪುಟ್ಟರಂಗಯ್ಯ, ವಳಗೆರೆಹಳ್ಳಿ ಆದೀಶ್, ಸೋಮಶೇಖರ್, ಶ್ರೀನಿವಾಸ್, ಅಪ್ಪಾಜಿ, ಭೈರವ್, ಕುಮಾರ್, ಆನಂದ, ಬೋರಯ್ಯ, ರವಿ, ವಿಜಯಕುಮಾರ್ ಇದ್ದರು.

ಅಂತಾರಾಷ್ಟ್ರೀಯ ಕ್ರೀಡಾಕೂಟಕ್ಕೆ ಆಯ್ಕೆ

ಶ್ರೀರಂಗಪಟ್ಟಣ, ನ.30– ರಾಷ್ಟ್ರೀಯ ಹ್ಯಾಂಡ್‌ಬಾಲ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ತಾಲೂಕಿನ ಕೂಡಲಕುಪ್ಪೆ ಗ್ರಾಮದ ಯುವ ಕ್ರೀಡಾಪಟು ಮೋನಿತ್‌ಗೌಡ ಅಂತಾರಾಷ್ಟ್ರೀಯ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.



ರಾಷ್ಟ್ರೀಯ ಕಬಡ್ಡಿ ಆಟಗಾರ ಮಹದೇವ್ ಅವರ ಪುತ್ರ ಮೋನಿತ್‌ಗೌಡ ತುಮಕೂರು ಜಿಲ್ಲೆ ತುರುವೇಕೆರೆ ತಾಲೂಕಿನ ಮಾಯಸಂದ್ರದ ಟಿ.ಬಿ.ಕ್ರಾಸ್ ಬಳಿಯ ಬಿಜಿಎಸ್ ವಿಶ್ವವಿದ್ಯಾಲಯದ ಮೈದಾನದಲ್ಲಿ ನ.25 ರಂದು ನಡೆದ 69ನೇ ರಾಷ್ಟ್ರೀಯ ಸ್ಕೂಲ್ ಗೇಮ್ಸ್ ಫೆಡರೇಷನ್ ಆಫ್ ಇಂಡಿಯಾ ವತಿಯಿಂದ ಆಯೋಜಿಸಿದ್ದ 17 ವರ್ಷದೊಳಗಿನ ರಾಷ್ಟ್ರಮಟ್ಟದ ಹ್ಯಾಂಡ್‌ಬಾಲ್ ಕ್ರೀಡಾಕೂಟದಲ್ಲಿ ಕರ್ನಾಟಕ ಪ್ರತಿನಿಧಿಸಿ ಪ್ರಥಮ ಸ್ಥಾನದೊಂದಿಗೆ ಚಿನ್ನದ ಪದಕ ಗಳಿಸಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ. ಇವರ ಸಾಧನೆಗೆ ಅನೇಕ ಗಣ್ಯರು ಅಭಿನಂದನೆ ಸಲ್ಲಿಸಿದ್ದಾರೆ.

ಒಂದನೇ ಪುಟದಿಂದ

42 ದಿನದಲ್ಲಿ 22 ಹುಲಿಗಳ ಸೆರೆ

ಉಪಟಳ ನೀಡುವ ಹುಲಿ ಸೆರೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ವ್ಯಾಪಕ ಒತ್ತಾಯ ಕೇಳಿಬಂದಿತು. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಹುಲಿ ಸೆರೆಗೆ ಅಗತ್ಯ ಕ್ರಮ ಕೈಗೊಂಡು ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಿದ್ದ ಪರಿಣಾಮ ಇದೀಗ 42 ದಿನಗಳ ಅವಧಿಯಲ್ಲೇ 22 ಹುಲಿಗಳನ್ನು ಸೆರೆ ಹಿಡಿಯಲಾಗಿದೆ.

ಎಲ್ಲೆಲ್ಲಿ ಹುಲಿ ಸೆರೆ: ಮೈಸೂರು ಜಿಲ್ಲೆಯ ಸರಗೂರು ತಾಲೂಕು ವ್ಯಾಪ್ತಿಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮಗಳಲ್ಲಿ ಹುಲಿಯ ಉಪಟಳ ಹೆಚ್ಚಾಗಿದ್ದರಿಂದ ಆ ಭಾಗದಲ್ಲಿ ಕೂಂಬಿಂಗ್ ಕಾರ್ಯಾಚರಣೆಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಅ.12ರಂದು ಹೆಡಿಯಾಲ ವಲಯದ ಅಳಲಹಳ್ಳಿ ಗ್ರಾಮದ ಬಳಿ 12 ವರ್ಷದ ಹೆಣ್ಣು ಹುಲಿ, ಅ.18 ರಂದು ನುಗು ವಲಯದ ಬಡಗಲಪುರ ಗ್ರಾಮದ ಬಳಿ ಒಂದೂವರೆ ವರ್ಷದ ಹೆಣ್ಣು ಹುಲಿ ಸೆರೆ, ಅ.27ರಂದು 40ರಿಂದ 45 ದಿನದ 2 ಗಂಡು ಹುಲಿ ಮರಿಗಳ ರಕ್ಷಣೆ ಮಾಡಲಾಗಿದೆ. ಅ.28ರಂದು ಹೆಡಿಯಾಲ ವಲಯದ ಈರೇಗೌಡನ ಹುಂಡಿ ಬಳಿ 6 ವರ್ಷದ ಹೆಣ್ಣು ಹುಲಿ, ನ.5ರಂದು ಹೆಡಿಯಾಲ ವಲಯದ ಹೊಸವೀಡು ಗ್ರಾಮದ ಬಳಿ ಒಂದೂವರೆ ವರ್ಷದ ಗಂಡು ಹುಲಿ, ನ.9ರಂದು ಮೊಳೆಯೂರು ವಲಯದ ಕುರ್ಣೆಗಾಲ–ಕಂದಲಿಕೆ ಕೂಡು ಗ್ರಾಮದ ಬಳಿ ಉರುಳಿನಿಂದ ಗಾಯಗೊಂಡಿದ್ದ 11–12 ವರ್ಷದ ಗಂಡು ಹುಲಿಯನ್ನು ಸೆರೆ ಹಿಡಿಯಲಾಗಿದೆ. ನ.10ರಂದು ಗುಂಡ್ಲುಪೇಟೆ ವಲಯದ ಕಲ್ಲಹಳ್ಳಿ ಗ್ರಾಮದ ಬಳಿ 4 ವರ್ಷದ ಹೆಣ್ಣು ಹುಲಿ ಸೆರೆ ಹಿಡಿದು, 3ರಿಂದ 4 ತಿಂಗಳ 3 ಮರಿಗಳನ್ನು ರಕ್ಷಣೆ ಮಾಡಲಾಗಿದೆ. ನ.12ರಂದು ಹುಣಸೂರು ತಾಲೂಕಿನ ಈರಪ್ಪನ ಕೊಪ್ಪಲು ಬಳಿ ಇಟ್ಟಿದ್ದ ಬೋನಿಗೆ 8 ತಿಂಗಳ ಗಂಡು ಹುಲಿ ಮರಿ ಬಿದ್ದು ಸೆರೆ ಸಿಕ್ಕಿತ್ತು. ನ.18 ರಂದು ಮುಳ್ಳೂರು ಸಮೀಪದ ಬೆಣ್ಣೆಗೆರೆ ಬಳಿ 8 ವರ್ಷದ ತಾಯಿ ಹುಲಿಯನ್ನು ಸೆರೆ ಹಿಡಿದು ಅದರ 45 ದಿನದ ಒಂದು ಗಂಡು, ಎರಡು ಹೆಣ್ಣು ಮರಿ ಸೇರಿದಂತೆ 3 ಮರಿಯನ್ನು ರಕ್ಷಣೆ ಮಾಡಲಾಗಿತ್ತು.

ನ.25ರಂದು ಸರಗೂರು ತಾಲೂಕಿನ ದೇವಲಾಪುರ–ಪುರದಶೆಡ್ಡು ಬಳಿ 6 ವರ್ಷದ ಗಂಡು ಹುಲಿಯನ್ನು ಸೆರೆ ಹಿಡಿಯಲಾಗಿದೆ.

ಶಿಕ್ಷಕಿ ಸೇರಿ ಮೂವರ ಸ್ಥಿತಿ ಗಂಭೀರ



ಪ್ರವಾಸ ತೆರಳಿದ್ದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಗ್ರೂಪ್ ಫೋಟೋ

ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ತರಳಬಾಳು ಪ್ರೌಢಶಾಲೆಯ 44 ವಿದ್ಯಾರ್ಥಿಗಳನ್ನು ಮುರಡೇಶ್ವರ ಮತ್ತಿತರೆಡೆಗೆ ಶೈಕ್ಷಣಿಕ ಪ್ರವಾಸಕ್ಕೆ ಕರೆದೊಯ್ಯಲಾಗಿತ್ತು. ಈ ವಿದ್ಯಾರ್ಥಿಗಳ ಜೊತೆ ನಾಲ್ವರು ಶಿಕ್ಷಕರು ಸೇರಿ ಒಟ್ಟು 48 ಮಂದಿ ಶನಿವಾರ ರಾತ್ರಿ ಮೈಸೂರಿನಿಂದ ಪ್ರಯಾಣ ಬೆಳೆಸಿದ್ದರು. ಇವರಿದ್ದ ಬಸ್ ಹೊನ್ನಾವರ ಸಮೀಪದ ಗೇರುಸೊಪ್ಪೆ ಬಳಿಯ ಸುಳೇಮರ್ಕಿ ಕ್ರಾಸ್‌ನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿ ಹೊಡೆದಿದೆ. ಈ ಅಪಘಾತದಲ್ಲಿ ವಿದ್ಯಾರ್ಥಿ ಪವನ್ ಸ್ಥಳದಲ್ಲೇ ಮೃತಪಟ್ಟಿದ್ದು, ಮೂವರು ಶಿಕ್ಷಕರು ಗಂಭೀರವಾಗಿ ಗಾಯಗೊಂಡಿದ್ದಾರೆ. ಉಳಿದವರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಮೂಲಗಳಿಂದ ತಿಳಿದು ಬಂದಿದೆ.

ಅಪಘಾತ ವಿಚಾರ ತಿಳಿಯುತ್ತಿದ್ದಂತೆಯೇ ಹೊನ್ನಾವರ ಠಾಣೆ ಪೊಲೀಸರು ಸ್ಥಳಕ್ಕೆ ದೌಡಾಯಿಸಿ, ಆಂಬುಲೆನ್ಸ್‌ಗಳ ಮೂಲಕ ಹೊನ್ನಾವರ ಮತ್ತು ಕುಮಟಾ ಆಸ್ಪತ್ರೆಗಳಿಗೆ ಗಾಯಾಳುಗಳನ್ನು ರವಾನಿಸಿದ್ದಾರೆ.

> ತರಳಬಾಳು ಪ್ರೌಢಶಾಲೆಯವರು ಶೈಕ್ಷಣಿಕ ಪ್ರವಾಸಕ್ಕೆ ನಮ್ಮಿಂದ ಅನುಮತಿ ಪಡೆದಿಲ್ಲ. ನಡೆದಿರುವ ಅಪಘಾತದಲ್ಲಿ ಓರ್ವ ವಿದ್ಯಾರ್ಥಿ ಸಾವನ್ನಪ್ಪಿ, ಇಬ್ಬರು ವಿದ್ಯಾರ್ಥಿಗಳು ಹಾಗೂ ಒಬ್ಬ ಶಿಕ್ಷಕಿ ತೀವ್ರವಾಗಿ ಗಾಯಗೊಂಡು ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಮಾಹಿತಿ ದೊರೆತಿದೆ. ನಮ್ಮ ಇಲಾಖೆಯಿಂದ ಅಲ್ಲಿನ ಉಪ ವಿಭಾಗಾಧಿಕಾರಿ ಸೇರಿದಂತೆ ಅಧಿಕಾರಿಗಳನ್ನು ಸಂಪರ್ಕಿಸಿದ್ದು, ವಿದ್ಯಾರ್ಥಿಗಳ ಯೋಗಕ್ಷೇಮ ವಿಚಾರಿಸಿಕೊಳ್ಳುವಂತೆಯೂ, ಅವರು ಮೈಸೂರಿಗೆ ಹಿಂತಿರುಗಲು ನೆರವಾಗುವಂತೆಯೂ ಮನವಿ ಮಾಡಲಾಗಿದೆ.
>
> – **ಕೃಷ್ಣ**, ದಕ್ಷಿಣ ವಲಯ ಬಿಇಓ

ಅವರಲ್ಲಿ ತೀವ್ರವಾಗಿ ಗಾಯಗೊಂಡ ಮೂವರನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಹೇಳಲಾಗಿದೆ. ಈ ಸಂಬಂಧ ಹೊನ್ನಾವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹನಗೋಡು ಬಳಿ ನಾಲ್ಕು ಹುಲಿ ಮರಿಗಳ ರಕ್ಷಣೆ





ಸೆರೆ ಸಿಕ್ಕ ಹುಲಿ ಮರಿ. ಮತ್ತೊಂದು ಚಿತ್ರದಲ್ಲಿ ಹುಲಿ ಮರಿ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದ ಕೂಂಬಿಂಗ್ ತಂಡವನ್ನು ಕಾಣಬಹುದು.

ಕೂಂಬಿಂಗ್ ಕಾರ್ಯಾಚರಣೆ ನಡೆಸಿದರೂ ಮರಿಗಳು ಪತ್ತೆಯಾಗಿರಲಿಲ್ಲ. ಇದರಿಂದ ಅರಣ್ಯ ಸಿಬ್ಬಂದಿಗೆ ತಲೆ ನೋವಾಗಿ ಪರಿಣಮಿಸಿತ್ತು. ಮರಿಗಳಿಗೆ ಕೇವಲ 3–4 ತಿಂಗಳಾಗಿರುವುದರಿಂದ ಅವುಗಳಿಗೆ ಬೇಟೆಯಾಡುವ ಶಕ್ತಿಯೂ ಇಲ್ಲ. ಅಲ್ಲದೆ, ಹೆಚ್ಚು ದೂರ ಓಡಿ ಹೋಗಲು ಸಾಧ್ಯವಾಗುವುದಿಲ್ಲ ಎಂಬುದು ಖಚಿತವಾಗಿತ್ತು. ಆದರೂ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗಿತ್ತಾದರೂ, ಮರಿಗಳ ಸುಳಿವು ಪತ್ತೆಯಾಗಿರಲಿಲ್ಲ.

ಹಸಿವಿನಿಂದ ಕಂಗೆಟ್ಟಿತ್ತು: ಕಳೆದ ಎರಡು ದಿನಗಳಿಂದ ಆಹಾರ ಸೇವಿಸಿದ ಕಾರಣ ಇಂದು ಬೆಳಗ್ಗೆ ಹಸಿವಿನಿಂದ ಕಂಗೆಟ್ಟಿದ್ದ ಹುಲಿ ಮರಿಗಳು ರವಿಕುಮಾರ್ ಎಂಬುವರಿಗೆ ಸೇರಿದ ಮೆಕ್ಕೆಜೋಳದ ಹೊಲದಲ್ಲಿ ಅಮ್ಮನಿಗಾಗಿ ಚೀರಾಡ ತೊಡಗಿದ್ದವು. ಇದನ್ನು ಗಮನಿಸಿದ ಸ್ಥಳೀಯರು ಕೂಂಬಿಂಗ್ ಕಾರ್ಯಾಚರಣೆಯಲ್ಲಿ ತೊಡಗಿದ್ದ ಸಿಬ್ಬಂದಿಗಳ ಗಮನಕ್ಕೆ ತಂದರು. ಕೂಡಲೇ ಸ್ಥಳಕ್ಕೆ ಬಂದ ಅರಣ್ಯ ಸಿಬ್ಬಂದಿ ಬೆಳಗ್ಗೆ 10.45ರ ವೇಳೆಗೆ ಒಂದು ಹುಲಿ ಮರಿ ಯನ್ನು ರಕ್ಷಿಸಿದರು. ಉಳಿದ ಮೂರು ಮರಿಗಳಿಗಾಗಿ ಶೋಧ ಕಾರ್ಯ ಮುಂದುವರೆಸಿದಾಗ ಅದೇ ಜಮೀನಿನ ವಿವಿಧೆಡೆ ಪ್ರತ್ಯೇಕ ಸ್ಥಳದಲ್ಲಿ ಅವಿತುಕೊಂಡಿದ್ದ ಮೂರು ಮರಿಗಳನ್ನು ರಕ್ಷಿಸಲಾಯಿತು.

ಸ್ಥಳಾಂತರ: ಪ್ರತ್ಯೇಕ ಸ್ಥಳದಲ್ಲಿದ್ದ ನಾಲ್ಕು ಮರಿಗಳನ್ನು ರಕ್ಷಿಸಿದ ಅರಣ್ಯ ಸಿಬ್ಬಂದಿ ಅವುಗಳನ್ನು ಬಲೆಯಲ್ಲಿಟ್ಟುಕೊಂಡು ಸುರಕ್ಷಿತವಾಗಿ ಸ್ಥಳಾಂತರಿಸಿದರು. ರಕ್ಷಿಸಲ್ಪಟ್ಟ ಹುಲಿ ಮರಿಗಳ ಆರೋಗ್ಯ ತಪಾಸಣೆ ಯನ್ನು ಪಶುವೈದ್ಯ ಡಾ.ಆದರ್ಶ್ ಪರಿಶೀಲಿಸಿದರು. ಹುಲಿ ಮರಿಗಳು ಆರೋಗ್ಯವಾಗಿರುವುದನ್ನು ಖಚಿತ ಪಡಿಸಿದ ನಂತರ ಅವುಗಳನ್ನು ಮೈಸೂರಿನ ಕೂರ್ಗಳ್ಳಿ ಯಲ್ಲಿರುವ ಮೃಗಾಲಯದ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಯಿತು.

ಡಿಸಿಎಫ್ ಮಹಮದ್ ಫಯಾಜುದ್ದೀನ್, ಮೈಸೂರು ಡಿಸಿಎಫ್ ಕೆ.ಪರಮೇಶ್, ಹುಣಸೂರು ಆರ್‌ಎಫ್‌ಓ ನಂದಕುಮಾರ್, ವೀರನಹೊಸಳ್ಳಿ ಆರ್‌ಎಫ್‌ಓ ವಿನೋದ್ ಗೌಡ, ಇಟಿಎಫ್, ಎಲ್‌ಟಿಎಫ್, ಎಸ್‌ಟಿಪಿಎಫ್ ಸಿಬ್ಬಂದಿ ಸೇರಿದಂತೆ 80ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

ಬೆಮಲ್ ಕಾರ್ಖಾನೆ ಆವರಣದಲ್ಲಿ ಅರಣ್ಯ ಇಲಾಖೆ ಕಾರ್ಯಾಚರಣೆ ಆರಂಭ

ಪತ್ತೆಯಾಗದ ಹುಲಿರಾಯ, ಕ್ಯಾಮಾರಾ ಟ್ರ್ಯಾಪ್, ಬೋನ್ ಅಳವಡಿಕೆ





ಹುಲಿ ಪ್ರತ್ಯಕ್ಷವಾದ ಹಿನ್ನೆಲೆಯಲ್ಲಿ ಮೈಸೂರಿನ ಬೆಮಲ್ ಆವರಣದಲ್ಲಿ ಡಿಸಿಎಫ್ ಕೆ.ಪರಮೇಶ್ ಪರಿಶೀಲನೆ ನಡೆಸಿದರು.

ಮೈಸೂರು, ನ.30(ಎಂಟಿವೈ)– ಅರಣ್ಯ ಇಲಾಖೆ 10 ಕ್ಯಾಮರಾ ಟ್ರ್ಯಾಪ್ ಅಳವಡಿಸಿ, ಎರಡು ಬೋನ್ ಇಟು, ಮೈಸೂರಿನ ಹೊರ ವಯಲದಲ್ಲಿರುವ ಬೆಮಲ್ ಕಾರ್ಖಾನೆ ಆವರಣದಲ್ಲಿ ಪ್ರತ್ಯಕ್ಷವಾಗಿದ್ದ ಹುಲಿ ಹುಲಿ ಪತ್ತೆಗೆ ಮುಂದಾಗಿದೆ.

ವಿಡಿಯೋ ತುಣುಕಿನೊಂದಿಗೆ ಶನಿವಾರ ಬೆಳಗ್ಗೆ ಬೆಮಲ್ ಆಢಳಿತ ಮಂಡಳಿಯವರು ಮಾಹಿತಿ ನೀಡಿದ ಬೆನ್ನಲ್ಲೇ ಅಲ್ಲಿಗೆ ಹೋಗಿದ್ದ ಅರಣ್ಯಾಧಿಕಾರಿಗಳು ಪರಿಶೀಲನೆ ನಡೆಸಿದ್ದರು. ವಿಡಿಯೋದಲ್ಲಿ ಕಂಡು ಬಂದ ರಸ್ತೆ ಪರಿಶೀಲಿಸಿದ್ದರಲ್ಲದೆ, ಸಂಸ್ಥೆಯ ವಿವಿಧೆಡೆ ಅಳವಡಿಸಿರುವ ಸಿಸಿ ಕ್ಯಾಮರಾ ದೃಶ್ಯಾವಳಿ ಪರಿಶೀಲಿಸಿದಾಗ ಎರಡು ಕ್ಯಾಮರಾದಲ್ಲಿ ಹುಲಿ ಓಡಾಡುವ ದೃಶ್ಯ ಸೆರೆ ಸಿಕ್ಕಿರುವುದನ್ನು ವೀಕ್ಷಿಸಿದ್ದಾರೆ. ಇದರಿಂದ ಬೆಮಲ್ ಆವರಣದಲ್ಲಿ ಹುಲಿ ಇರುವಿಕೆ ದೃಢಪಟ್ಟಿದ್ದು, ಆದರೂ ಹುಲಿ ಇರುವಿಕೆ ಪತ್ತೆ ಮಾಡಲು ಬೆಮಲ್ ಕ್ಯಾಂಪಸ್ ನಲ್ಲಿ 10 ಕಡೆ ಕ್ಯಾಮರಾ ಟ್ರ್ಯಾಪ್ ಅಳವಡಿಸಲಾಗಿದೆ. ಬೆಮಲ್ ಆವರಣದ ಮಣ್ಣಿನ ರಸ್ತೆ ಮೇಲೆ ನೀರು ಸಿಂಪಡಿಸಿ, ಹುಲಿ ಹೆಜ್ಜೆ ಗುರುತು ಪತ್ತೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಒಂದು ತುಮಕೂರು ಮಾದರಿಯ ದೊಡ್ಡ ಬೋನ್, ಮತ್ತೊಂದು ಸಾಮಾನ್ಯ ಬೋನ್ ಇಟ್ಟು ಹುಲಿ ಸೆರೆ ಹಿಡಿಯಲು ಅರಣ್ಯ ಇಲಾಖೆ ಪಣ ತೊಟ್ಟಿದೆ.

ಕೂಂಬಿಂಗ್ ಕಾರ್ಯಾಚರಣೆ: ಮೈಸೂರು ವಿಭಾಗದ ಡಿಸಿಎಫ್ ಕೆ.ಪರಮೇಶ್ ನೇತೃತ್ವದಲ್ಲಿ ಇಟಿಎಫ್, ಎಲ್‌ಟಿಎಫ್ ಹಾಗೂ ಮೈಸೂರು ವಿಭಾಗದ ಸುಮಾರು 30 ಸಿಬ್ಬಂದಿಯಿರುವ ತಂಡದಿಂದ ಬಿಇಎಂಎಲ್ ಆವರಣದಲ್ಲಿ ಭಾನುವಾರ ಬೆಳಗ್ಗೆ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಯಿತು. ಈ ವೇಳೆ ಹುಲಿ ಸುಳಿವು ಸಿಗದ ಕಾರಣ, ಕ್ಯಾಮರಾ ಟ್ರ್ಯಾಪ್ ಅಳವಡಿಸಲಾಗಿದೆ.

> **ಕೂಂಬಿಂಗ್ ನಡೆಸಿ, ಕ್ಯಾಮರಾ ಟ್ರ್ಯಾಪ್ ಅಳವಡಿಸಲಾಗಿದೆ**
>
> ಮೈಸೂರಿನ ಬೆಮಲ್ ಆವರಣದಲ್ಲಿ ಹುಲಿ ಕಂಡು ಬಂದ ಹಿನ್ನೆಲೆಯಲ್ಲಿ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗಿದೆ. ಅಲ್ಲದೆ, 10 ಕಡೆ ಕ್ಯಾಮರಾ ಟ್ರ್ಯಾಪ್ ಅಳವಡಿಸಿ, ಎರಡು ಬೋನ್ ಇಡಲಾಗಿದೆ. ಹುಲಿ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ.
>
> – **ಕೆ.ಪರಮೇಶ್**, ಡಿಸಿಎಫ್, ಮೈಸೂರು ವಿಭಾಗ

ಹಾದು ಹೋಗಿರುವ ಶಂಕೆ: ಭದ್ರತಾ ಸಿಬ್ಬಂದಿ ಮೊಬೈಲ್‌ನಲ್ಲಿ ಸೆರೆ ಹಿಡಿದಿರುವ ಹುಲಿ ದೃಶ್ಯ ಹಾಗೂ ಸಿಸಿ ಕ್ಯಾಮರಾದಲ್ಲಿ ದಾಖಲಾಗಿರುವ ದೃಶ್ಯಾವಳಿ ಪರಿಶೀಲಿಸಿದಾಗ ಹುಲಿ ಹೋಗುತ್ತಿರುವುದನ್ನು ಗಮನಿಸಿದರೆ ರಾತ್ರಿ ವೇಳೆಯೇ ಹುಲಿ ಕ್ಯಾಂಪಸ್‌ನಿಂದ ಕಾಂಪೌಂಡ್ ಹಾರಿ ಇಲವಾಲದ ಅಲೋಕ ಅಥವಾ ಅರಭಿತಿಟ್ಟಿನ ಅರಣ್ಯ ಪ್ರದೇಶಕ್ಕೆ ಹೋಗಿರಬಹುದೆಂಬ ಶಂಕೆಯನ್ನು ಅರಣ್ಯಾಧಿಕಾರಿಗಳು ವ್ಯಕ್ತಪಡಿಸಿದ್ದಾರೆ. ಆದರೂ ಬಿಇಎಂಎಲ್ ಸಿಬ್ಬಂದಿ ಹಾಗೂ ಸುತ್ತಮುತ್ತಲಿನ ನಿವಾಸಿಗಳು ಎಚ್ಚರಿಕೆಯಿಂದ ಇರುವಂತೆ ಸಲಹೆ ನೀಡಲಾಗಿದೆ.

ಸಂಸತ್ ಅಧಿವೇಶನ

ದೆಹಲಿ ಸ್ಫೋಟ ಮತ್ತು ವಿದೇಶಾಂಗ ನೀತಿಯ ಕಾಳಜಿ ಗಳಂತಹ ವಿಷಯಗಳನ್ನು ವಿರೋಧ ಪಕ್ಷಗಳು ಅಧಿವೇಶನದಲ್ಲಿ ಎತ್ತುವ ಸಾಧ್ಯತೆಗಳಿವೆ. ಸರ್ಕಾರದಿಂದ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಮತ್ತು ಅವರ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘವಾಲ್, ಬಿಜೆಪಿ ಅಧ್ಯಕ್ಷ ಮತ್ತು ರಾಜ್ಯಸಭಾ ನಾಯಕ ಜೆ.ಪಿ.ನಡ್ಡಾ ಇದ್ದರು. ವಿರೋಧ ಪಕ್ಷವನ್ನು ಕಾಂಗ್ರೆಸ್ ನಾಯಕರಾದ ಜೈರಾಮ್ ರಮೇಶ್, ಗೌರವ್ ಗೊಗೊಯ್ ಮತ್ತು ಪ್ರಮೋದ್ ತಿವಾರಿ, ಡಿಎಂಕೆಯ ಟಿ ಆರ್ ಬಾಲು, ಟಿಎಂಸಿಯ ಡೆರೆಕ್ ಒ'ಬ್ರೇನ್, ಮತ್ತು ಐಯುಎಂಎಲ್‌ನ ಇಟಿಮೊಹಮ್ಮದ್ ಬಶೀರ್ ಪ್ರತಿನಿಧಿಸಿದ್ದರು. ಆರ್‌ಜೆಡಿಯ ಮನೋಜ್ ಝಾ, ಎಸ್‌ಎಡಿಯ ಹರ್ ಸಿಮ್ರತ್ ಕೌರ್ ಮತ್ತು ಜೆಡಿ (ಯು)ನ ಸಂಜಯ್ ಝಾ ಭಾಗವಹಿಸಿದ್ದರು

ರೌಡಿಶೀಟರ್ ಭೀಕರ ಹತ್ಯೆ

ಎಂಬುವರು ಯಾವುದೋ ವಿಚಾರವಾಗಿ ಆತನೊಂದಿಗೆ ಮಾತಿನ ಚಕಮಕಿ ನಡೆಸಿ ಹೋಗಿದ್ದರು ಎನ್ನಲಾಗಿದೆ. ಬಳಿಕ ತಡರಾತ್ರಿ ತನ್ನ ಸ್ನೇಹಿತರಾದ ಮರೀಗೌಡ ಮತ್ತು ಕಿರಣ ಎಂಬುವರೊಂದಿಗೆ ಸ್ವಗ್ರಾಮಕ್ಕೆ ಹಿಂತಿರುಗುತ್ತಿದ್ದ ವೇಳೆ ಕಾರಿನಲ್ಲಿ ಬಂದ ದುಷ್ಕರ್ಮಿಗಳು ಈತರ ಸ್ಕೂಟರ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದ್ದಾರೆ. ನೆಲಕ್ಕುರುಳಿದ ಈತ ತಪ್ಪಿಸಿಕೊಂಡು ಓಡಲು ಯತ್ನಿಸಿದನಾದರೂ ದುಷ್ಕರ್ಮಿಗಳು ಅಟ್ಟಾಡಿಸಿಕೊಂಡು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ.

ರಕ್ತದ ಮಡುವಿನಲ್ಲಿ ಬಿದ್ದು, ಒದ್ದಾಡುತ್ತಿದ್ದ ಮಹೇಶ್‌ನನ್ನು ಸ್ಥಳಕ್ಕೆ ತೆರಳಿದ್ದ ಮೇಲುಕೋಟೆ ಠಾಣೆಯ ಇನ್ಸ್‌ಪೆಕ್ಟರ್ ಅಶೋಕ್ ಕುಮಾರ್ ಅವರು ಪಾಂಡವಪುರ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆಯೇ ಮೃತಪಟ್ಟಿದ್ದಾನೆ ಎಂದು ಹೇಳಲಾಗಿದೆ. ಈ ಸಂಬಂಧ ಮೇಲುಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತಡರಾತ್ರಿಯೇ ಘಟನಾ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಅವರು ಆರೋಪಿಗಳ ಪತ್ತೆಗಾಗಿ ಎರಡು ವಿಶೇಷ ತಂಡಗಳನ್ನು ರಚಿಸಿದ್ದಾರೆ.

ನಾಡಗೌಡ ಸಮುದಾಯಕ್ಕೆ 50 ಲಕ್ಷ ರೂ

ಅರೆ ಭಾಷೆ ಅಕಾಡೆಮಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಭರವಸೆ

ಮಡಿಕೇರಿ, ನ.30–ಭಾಗಮಂಡಲದಲ್ಲಿ ನಾಡ ಗೌಡ ಸಮುದಾಯಕ್ಕೆ ಪ್ರಸ್ತುತ 50 ಲಕ್ಷ ರೂ.ಗಳ ಬೇಡಿಕೆಯನ್ನು ಈಡೇರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಅರೆ ಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ 2024ನೇ ಸಾಲಿನ ಅರೆ ಭಾಷೆ ಅಕಾಡೆಮಿ ಗೌರವ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದ ಅವರು, ಭಾಗಮಂಡಲದಲ್ಲಿ ನಾಡ ಗೌಡ ಸಮುದಾಯಕ್ಕೆ ಈಗಾಗಲೇ ಕೋಟಿ ರೂ. ನೀಡಲಾಗಿದೆ. ಇನ್ನೂ 50 ಲಕ್ಷ ರೂ. ಬೇಕೆನ್ನುವ ಬೇಡಿಕೆ ಬಗ್ಗೆ ಪರಿಶೀಲಿಸಲಾಗುವುದು ಎಂದರು.

ಅರೆ ಭಾಷಿಕರದ್ದು ವಿಭಿನ್ನ ಸಂಸ್ಕೃತಿಯಾಗಿದೆ. ಅರೆಭಾಷೆಯನ್ನು ಉಳಿಸಿ ಬೆಳೆಸುವ ಕೆಲಸವನ್ನು ಅಕಾಡೆಮಿ ಮಾಡಲಿ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಅರೆಭಾಷೆ ಗೌಡರಿಗೆ ಮಡಿಕೇರಿಯಲ್ಲಿ ಜಮೀನು ಕೊಡಬೇಕೆನ್ನುವ ಪ್ರಸ್ತಾವನೆಯನ್ನು ಈಡೇರಿಸಲಾಗುವುದು ಎಂದು ಭರವಸೆಯಿತ್ತರು



ಕೆ.ಆರ್.ಗಂಗಾಧರ, ಯು.ಪಿ.ಶಿವಾನಂದ ಹಾಗೂ ಡಿ.ಎಸ್.ಆನಂದ ಅವರಿಗೆ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರದಾನ ಮಾಡಿದರು

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಇತಿಹಾಸ ಮರೆತವನು ಮತ್ತೆ ಇತಿಹಾಸ ಸೃಷ್ಟಿಸಲು ಸಾಧ್ಯವಿಲ್ಲ. ನಮ್ಮ ಸಂಸ್ಕೃತಿಯನ್ನು ಉಳಿಸುವಂತಹ ಕಾರ್ಯವಾಗಬೇಕು. ವೈಶಿಷ್ಟ್ಯಪೂರ್ಣ ಅರೆಭಾಷೆ ಸಾಹಿತ್ಯ, ಸಂಸ್ಕೃತಿ, ಆಚಾರ ವಿಚಾರಗಳನ್ನು ಉಳಿಸಿ ಬೆಳೆಸುವುದರ ಮೂಲಕ ಜನಾಂಗದ ಯುವ ಸಮುದಾಯಕ್ಕೆ ಹಸ್ತಾಂತರವಾಗಬೇಕೆಂದು ಕರೆ ನೀಡಿದರು.

ಅರೆಭಾಷೆಯಲ್ಲೇ ಮಾತು ಆರಂಭಿಸಿದ ಶಾಸಕ ಎ.ಎಸ್. ಪೊನ್ನಣ್ಣ ಅರೆಭಾಷೆ ಸಮುದಾಯವು ದೇಶಕ್ಕೆ ಹಾಗೂ ರಾಜ್ಯಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಈ ಭಾಷೆಯ ಆಚಾರ ವಿಚಾರ ಕಲೆ ಸಂಸ್ಕೃತಿ, ಉಳಿಸುವುದೇ ನಮ್ಮ ಸರ್ಕಾರದ ಆದ್ಯತೆಯಾಗಿದೆ ಎಂದು ಹೇಳಿದರು.

ಶಾಸಕ ಡಾ.ಮಂತರ್ ಗೌಡ ಮಾತನಾಡಿ, ಬ್ರಿಟಿಷರ ವಿರುದ್ದ ಹೋರಾಡಿದ ಸ್ವಾತಂತ್ರ್ಯ ಹೋರಾಟಗಾರ ಗುಡ್ಡೆಮನೆ ಅಪ್ಪಯ್ಯ ಗೌಡರು, ಕೆದಂಬಾಡಿ ರಾಮೇಗೌಡರು ಅವರ ಸಾಧನೆ ಮತ್ತು ಆದರ್ಶಗಳು ನಮಗೆ ಪ್ರೇರಣೆ ಯಾಗಬೇಕು. ಅರೆಭಾಷೆ ಸಂಸ್ಕೃತಿ, ಆಚಾರ ವಿಚಾರಗಳನ್ನು ಉಳಿಸಿ ಬೆಳೆಸುವಂತಾಗಬೇಕೆಂದರು

ಅಕಾಡೆಮಿ ಗೌರವ ಪ್ರಶಸ್ತಿಗೆ ಭಾಜನರಾದ ಕೆ.ಆರ್.ಗಂಗಾಧರ, ಯು.ಪಿ.ಶಿವಾನಂದ ಹಾಗೂ ಡಿ.ಎಸ್.ಆನಂದ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಿದರು. ಸಚಿವ ಭೈರತಿ ಸುರೇಶ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಅಕಾಡೆಮಿಯ ಅಧ್ಯಕ್ಷ ಸದಾನಂದ ಮಾವಜಿ, ಕ ಸಂ ಇಲಾಖೆ ನಿರ್ದೇಶಕಿ ಗಾಯತ್ರಿ ಉಪಸ್ಥಿತರಿದ್ದರು.

ಅರೆ ಸೇನಾಪಡೆ ನಿವೃತ್ತ ಯೋಧರ ಒಕ್ಕೂಟದ ವಾರ್ಷಿಕ ಮಹಾಸಭೆ



ಅರೆ ಸೇನಾಪಡೆ ನಿವೃತ್ತ ಯೋಧರ ಒಕ್ಕೂಟದ ವಾರ್ಷಿಕ ಮಹಾಸಭೆ ಒಕ್ಕೂಟದ ಅಧ್ಯಕ್ಷ ಎಂ.ಜಿ.ಯತೀಶ್ ಅಧ್ಯಕ್ಷತೆಯಲ್ಲಿ ನಡೆಯಿತು.

ಮಡಿಕೇರಿ: ಜಿಲ್ಲೆಯ ಅರೆ ಸೇನಾಪಡೆ ನಿವೃತ್ತ ಯೋಧರ ಒಕ್ಕೂಟದ ವಾರ್ಷಿಕ ಮಹಾಸಭೆ ನಗರದ ಪೊಲೀಸ್ ಮೈತ್ರಿ ಭವನದಲ್ಲಿ ಒಕ್ಕೂಟದ ಅಧ್ಯಕ್ಷ ಎಂ.ಜಿ.ಯತೀಶ್ ಅಧ್ಯಕ್ಷತೆಯಲ್ಲಿ ನಡೆಯಿತು.

ಇದುವರೆಗೂ ಆಡಳಿತ ನಡೆಸಿರುವ ಸರ್ಕಾರಗಳು ಅರೆ ಸೇನಾಪಡೆಯಲ್ಲಿ ಸೇವೆಗೈದು ನಿವೃತ್ತಿಯಾಗಿರುವ ಯೋಧರಿಗೆ ಸರ್ಕಾರದ ಸವಲತ್ತುಗಳನ್ನು ಒದಗಿಸುವಲ್ಲಿ ಮೀನಾ ಮೇಷ ಎಣಿಸುತ್ತಿದ್ದು, ಒಕ್ಕೂಟದ ವತಿಯಿಂದ ಜಿಲ್ಲೆಯಲ್ಲಿ ಬೃಹತ್ ಹೋರಾಟ ನಡೆಸಬೇಕಾಗಿದೆ ಎಂದು ಸಂಘದ ಸದಸ್ಯರಿಗೆ ಕರೆ ನೀಡಿದರು.

ಒಕ್ಕೂಟದ ಉಪಾಧ್ಯಕ್ಷ ಪುಲಿಯಂಡ ಎಂ.ಚೆಂಗಪ್ಪ ಮಾತನಾಡಿ ಕ್ಯಾಂಟೀನ್ ಸೌಲಭ್ಯ ಹಾಗೂ ವೀರ ಯೋಧರ ಸ್ಮಾರಕ ಭವನ ಜಿಲ್ಲೆಯಲ್ಲಿ ಇಲ್ಲದ ಕಾರಣ ಸರ್ಕಾರ ಯೋಧರ ನೆರವಿಗೆ ನಿಲ್ಲಬೇಕು. ಹಾಗೆಯೇ ಕೊಡಗು ಜಿಲ್ಲೆಯಲ್ಲಿ ಎಲ್ಲಿಯೂ ಅರೆ ಸೇನಾಪಡೆಯ ಸೈನಿಕ ಸ್ಮಾರಕ ಭವನವಿಲ್ಲದ ಕಾರಣ ಕುಶಾಲನಗರ ತಾಲೂಕಿನ ಮುಳ್ಳುಸೋಗೆ ಗ್ರಾಮದಲ್ಲಿ 60 ಸೆಂಟು ಖಾಲಿ ಜಾಗವಿದ್ದು ಈ ಜಾಗವನ್ನು ಯೋಧರ ಸಂಘಕ್ಕೆ ನೋಂದಣಿ ಮಾಡಿ ಕೊಡುವ ಮೂಲಕ ಅಗತ್ಯ ಅನುದಾನದೊಂದಿಗೆ ಸಕಲ ಸೌಕರ್ಯ ಒದಗಿಸಬೇಕೆಂದು ಆಗ್ರಹಿಸಿದರು.

ಒಕ್ಕೂಟದ ನಿರ್ದೇಶಕ ಜಿ.ಕೆ.ದಿನೇಶ್ ಕುಮಾರ್ ಮಾತನಾಡಿ, ಕುಶಾಲನಗರ ತಾಲೂಕಿನ ಗೊಂದಿ ಬಸವನಹಳ್ಳಿ ಗ್ರಾಮದಲ್ಲಿ ಸುಮಾರು 5 ಎಕರೆ ಸರ್ಕಾರಿ ಜಾಗವಿದ್ದು ಈ ಜಾಗದಲ್ಲಿ ನಿವೃತ್ತಯೋಧರಿಗೆ ಮನೆಗಳನ್ನು ಕಟ್ಟಲು 60X40 ಅಳತೆಯ ನಿವೇಶನಗಳಾಗಿ ಮಾರ್ಪಡಿಸಿ ಯೋಧರಿಗೆ ಒದಗಿಸಬೇಕು. ಈಗಾಗಲೇ ಈ ಜಾಗ ಒತ್ತುವರಿಯಾಗಿದ್ದು ಇದನ್ನು ತೆರವುಗೊಳಿಸಿ ಸೈನಿಕರ ಒಕ್ಕೂಟಕ್ಕೆ ನೀಡಬೇಕೆಂದು ಆಗ್ರಹಿಸಿದರು.

ಒಕ್ಕೂಟದ ಸಂಚಾಲಕ ನೂರೇರಾ ಎಂ.ಭೀಮಯ್ಯ, ನಿವೃತ್ತ ಯೋಧ ಹರೀಶ್ ಗೌಡ ಮಾತನಾಡಿದರು. ಮಹಾಸಭೆಯಲ್ಲಿ ವೀರಯೋಧರ ಕುಟುಂ ಬದ ವೀರನಾರಿಯರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು. ಒಕ್ಕೂಟದ ಕಾರ್ಯದರ್ಶಿ ಬಿ.ಎಂ. ರವೀಂದ್ರ ಸಹಕಾರ್ಯದರ್ಶಿ ಬಿ.ಎನ್.ರಾಜಶೇಖರ, ನಿರ್ದೇಶಕರಾದ ನಳಿನಿ ಕುಮಾರಿ, ಅಪ್ಪಯ್ಯ, ಮನೋಹರ, ಎಂ.ಎನ್. ಗೋಪಾಲಕೃಷ್ಣ, ಧನಂಜಯ, ಸುರೇಶ್, ಡಬ್ಲ್ಯೂ.ಎಂ. ಪೂಣಚ್ಚ, ಎ.ಸಿ.ಅಶೋಕ್, ನಂಜಪ್ಪ, ಕೆ.ಎಂ. ಪುಟ್ಟರಾಜು ಮೊದಲಾದವರು ಉಪಸ್ಥಿತರಿದ್ದರು.

ಲಯನ್ಸ್ ಕ್ಲಬ್‌ನಿಂದ ಉಚಿತ ಆರೋಗ್ಯ ತಪಾಸಣ ಶಿಬಿರ



ಲಯನ್ಸ್ ಕ್ಲಬ್ ಹಾಗೂ ಮೈಸೂರಿನ ನಾರಾಯಣ ಹೃದಯಾಲಯ ಸಂಯುಕ್ತವಾಗಿ ಉಚಿತ ಆರೋಗ್ಯ ತಪಾಸಣ ಶಿಬಿರವನ್ನು ಹಮ್ಮಿಕೊಂಡಿದ್ದವು.

ವಿರಾಜಪೇಟೆ, ನ.30–ಬಿಟ್ಟಂಗಾಲದಲ್ಲಿರುವ ಕ್ರೆಡೋ ನಾರಾಯಣ ಎಮರ್ಜೆನ್ಸಿ ಕೇರ್ ಮೆಡಿಕಲ್ ಸೆಂಟರ್ ಸಭಾಂಗಣದಲ್ಲಿ ಲಯನ್ಸ್ ಕ್ಲಬ್ ಹಾಗೂ ಮೈಸೂರಿನ ನಾರಾಯಣ ಹೃದಯಾಲಯಗಳು ಸಂಯುಕ್ತವಾಗಿ ಉಚಿತ ಆರೋಗ್ಯ ತಪಾಸಣ ಶಿಬಿರವನ್ನು ಹಮ್ಮಿಕೊಂಡಿದ್ದವು.

ಆರೋಗ್ಯ ತಪಾಸಣ ಶಿಬಿರದ ಮುಖ್ಯ ವೈದ್ಯ ಚನ್ನಪಟ್ಟಣದ ಡಾ.ಪಿ.ಗೋಪಿನಾಥ್ ಮಾತನಾಡಿ, ಮನುಷ್ಯ ಆರೋಗ್ಯವಾಗಿರಬೇಕೆಂದರೆ ಯೋಗ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. ಬಿಟ್ಟಂಗಾಲ ಸುತ್ತಮುತ್ತಲಿನ ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗಲೆಂದು ಉಚಿತ ಆರೋಗ್ಯ ತಪಾಸಣ ಶಿಬಿರ ಏರ್ಪಡಿಸಿದ್ದು, ಗ್ರಾಮೀಣ ಭಾಗದ ಜನರು ಸದುಪಯೋಗ ಪಡಿಸಿಕೊಳ್ಳುವಂತಾಗಬೇಕು ಎಂದರು.

ಲಯನ್ಸ್ ಕ್ಲಬ್ ಅಧ್ಯಕ್ಷ ಅಂಬಿಕೃಷ್ಣಮೂರ್ತಿ ಮಾತನಾಡಿ ಇಲ್ಲಿನ ಜನರು ತೀವ್ರ ಅನಾರೋಗ್ಯಕ್ಕೆ ಈಡಾದಾಗ ಮೈಸೂರಿನಂತ ನಗರಗಳ ಆಸ್ಪತ್ರೆಗೆ ತೆರಳದೆ ಇಲ್ಲಿ ನಡೆಯುವಂತ ಆರೋಗ್ಯ ತಪಾಸಣ ಶಿಬಿರದ ಪ್ರಯೋಜನವನ್ನು ಪಡೆದುಕೊಳ್ಳುವಂತೆ ಕಿವಿಮಾತು ಹೇಳಿದರು.

ಲಯನ್ಸ್ ಕ್ಲಬ್ ಕಾರ್ಯದರ್ಶಿ ಪೌಲ್ ಜೇವಿಯರ್, ಖಜಾಂಚಿ ಮಂಡೆಟಿರ ಸುರೇಶ್, ಮಾಜಿ ಅಧ್ಯಕ್ಷ ತ್ರಿಶೂಗಣಪತಿ ಮತ್ತು ಬಲ್ಲಚಂಡ ಅಶೋತ್, ಸದಸ್ಯರಾದ ಬಾನು ಕೃಷ್ಣಮೂರ್ತಿ, ಶಾಲಿನಿ ಸುರೇಶ್, ಸೋನಿ ಪೌಲ್, ಮತ್ತು ಮೈಸೂರು ನಾರಾಯಣ ಆಸ್ಪತ್ರೆಯ ವೈದ್ಯ ಡಾ. ಅಭಿಲಾಶ್ ಯಾದವ್, ಡಾ. ರಕ್ಷ ರೈ, ಡಾ. ಸಂಶಾದ್, ಬಿ.ಬಿ.ಗಂಗಮ್ಮ, ಜಸ್ಮೀನಾ ಸೇರಿದಂತೆ ಆಸ್ಪತ್ರೆಯ ಸಿಬ್ಬಂದಿಗಳು ಹಾಜರಿದ್ದರು. ಶಿಬಿರದ ಪ್ರಯೋಜನವನ್ನು 100ಕ್ಕೂ ಹೆಚ್ಚು ಮಂದಿ ಪಡೆದುಕೊಂಡರು.

ಹದಗೆಟ್ಟ ರಸ್ತೆಯಲ್ಲಿ ಮಣ್ಣು ಹಾಕಿ ಶ್ರಮದಾನ ಮಾಡಿದ ಯುವಕ ಸಂಘ



ನಾಪೋಕ್ಲು, ನ.30 (ದುಗ್ಗಳ)– ಹದಗೆಟ್ಟ ರಸ್ತೆಯ ಗುಂಡಿಗಳಿಗೆ ಮಣ್ಣು ಹಾಕಿ ಮುಚ್ಚುವ ಮೂಲಕ ಸಂಘದ ಪದಾಧಿಕಾರಿಗಳು ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಸಮೀಪದ ಕೊಟ್ಟಮುಡಿಯ ಜೀನತ್ ಯುವಕ ಸಂಘದ ಪದಾಧಿಕಾರಿ ಭಾನುವಾರ ಕೊಟ್ಟ ಮುಡಿ ಇಂದ ಕಾವೇರಿ ನದಿ ಸೇತುವೆಯವರೆಗೆ ಹದಗೆಟ್ಟ ರಸ್ತೆಯಲ್ಲಿ ಗುಂಡಿಗಳನ್ನು ಮುಚ್ಚಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಇವರ ಈ ಶ್ರಮದಾನ ಸಾರ್ವಜನಿಕರ ಪ್ರಶಂಸೆಗೆ ಪಾತ್ರವಾಯಿತು.

ಮಡಿಕೇರಿ–ನಾಪೋಕ್ಲು ಮುಖ್ಯ ರಸ್ತೆಯಲ್ಲಿ ಕೊಟ್ಟ ಮುಡಿ ಇಂದ ಕಾವೇರಿ ನದಿ ಸೇತುವೆಯವರೆಗೆ ರಸ್ತೆಗಳು ಗುಂಡಿ ಬಿದ್ದು ಸಂಚಾರಕ್ಕೆ ತೊಡಕು ಉಂಟಾಗಿ ಇಲ್ಲಿ ನಿತ್ಯವೂ ಒಂದಲ್ಲ ಒಂದು ರೀತಿ ಅಪಘಾತ ಸಂಭವಿಸುತ್ತಿತ್ತು. ರಸ್ತೆ ದುರಸ್ತಿಗೆ ಒತ್ತಾಯಿಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ರಸ್ತೆ ದುರಸ್ತಿಗೆ ಅಧಿಕಾರಿಗಳ ಸ್ಪಂದನೆ ಸಿಗದಿದ್ದರಿಂದ ಕೊಟ್ಟ ಮುಡಿಯ ಜೀನತ್ ಯುವಕ ಸಂಘದ ಪದಾಧಿಕಾರಿಗಳು ಭಾನುವಾರ ತಮ್ಮ ವಾಹನದಲ್ಲೇ ಮಣ್ಣು ತಂದು ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯಕ್ಕೆ ಮುಂದಾದರು. ಗುಂಡಿಗಳಿಗೆ ಮಣ್ಣು ಕಲ್ಲು ತುಂಬಿ ದುರಸ್ತಿ ಕಾರ್ಯ ನಡೆಸಿ ವಾಹನಗಳು ಅಪಘಾತವಾಗದಂತೆ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು

ಶ್ರಮಧಾನದಲ್ಲಿ ಕೊಟ್ಟಮುಡಿಯ ಜೀನತ್ ಯುವಕ ಸಂಘದ ಅಧ್ಯಕ್ಷ ಶೌಕತ್ ಆಲಿ.ಕೆ.ಎಚ್, ಉಪಾಧ್ಯಕ್ಷ ನೌಶದ್ ಹೆಚ್.ಎಂ. ಕಾರ್ಯದರ್ಶಿ ರಹಿಂ ಕೆ.ಎ. ಸಹ ಕಾರ್ಯದರ್ಶಿ ಮಹಮ್ಮದ್ ಕೆ.ಕೆ ಹಾಗೂ ಪದಾಧಿಕಾರಿ ಸದಸ್ಯರು ಪಾಲ್ಗೊಂಡಿದ್ದರು.

ರಸ್ತೆ ಸಂಚಾರಕ್ಕೆ ತಡೆ ಒಡ್ಡಿ ಕಾನೂನು ಉಲ್ಲಂಘನೆ: ಕ್ರಮಕ್ಕೆ ಆಗ್ರಹ

ನಾಪೋಕ್ಲು, ನ.30–ಸಾರ್ವಜನಿಕರ ರಸ್ತೆ ಸಂಚಾರಕ್ಕೆ ತಡೆ ಒಡ್ಡಿ ವ್ಯಕ್ತಿ ಒಬ್ಬರು ಕಾನೂನು ಉಲ್ಲಂಘನೆ ಮಾಡುತ್ತಿದ್ದಾರೆ ಎಂದು ಸ್ಥಳೀಯರಾದ ಬಿದ್ದಾಟಂಡ ರೋಜಿ ಚಿಣ್ಣಪ್ಪ ಮತ್ತು ಮಮತಾ ಚಿಣ್ಣಪ್ಪ ಆರೋಪಿಸಿದ್ದು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಟ್ಟಣದ ಮುಖ್ಯ ರಸ್ತೆಯಿಂದ ನಂದಿನಿ ಆಸ್ಪತ್ರೆ ಮತ್ತು ನಿವೃತ್ತ ಪ್ರಾಂಶುಪಾಲ ದಿ. ಬಿದ್ದಾಟಂಡ ಪೊನ್ನಪ್ಪ ಅವರ ಮನೆಗೆ ಸಂಪರ್ಕಿಸುವ ನಂದಿನಿ ಆಸ್ಪತ್ರೆ ಎದುರು ಹಾದುಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ವಿಧಾನ ಪರಿಷತ್ ಸದಸ್ಯ ಎಂಪಿ ಸುಜಾ ಕುಶಾಲಪ್ಪ ಅವರ ಅನುದಾನದಲ್ಲಿ ನಾಲ್ಕು ಲಕ್ಷ ರೂ. ವೆಚ್ಚದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗಿತ್ತು. ಸದರಿ ರಸ್ತೆಗೆ ಅಡ್ಡಲಾಗಿ ಕಬ್ಬಿಣದ ರಾಡುಗಳನ್ನು ಬಳಸಿ ವಾಹನ ಸಂಚರಿಸದಂತೆ ಅಡ್ಡಿಪಡಿಸಿರುವ ಬಗ್ಗೆ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಗ್ರಾಮ ಕಂದಾಯ ಇಲಾಖೆ, ಪೊಲೀಸ್ ಇಲಾಖೆಗಳಿಗೆ ದೂರು ಸಲ್ಲಿಸಿದ್ದರೂ ಅಸಹಾಯಕರಂತೆ ವರ್ತಿಸುತ್ತಿದ್ದಾರೆ. ಈ ಬಗ್ಗೆ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳುವಂತೆ ಅವರು ಒತ್ತಾಯಿಸಿದ್ದಾರೆ.

ಕೊಂಡೀರ ಸುಬ್ಬಕ್ಕಿ ನಿಧನ



ನಾಪೋಕ್ಲು, ನ.30–ಇಲ್ಲಿಗೆ ಸಮೀಪದ ಬೇತು ಗ್ರಾಮದ ನಿವಾಸಿ ದಿವಂಗತ ಕೊಂಡೀರ ಸೋಮಣ್ಣ ಅವರ ಪತ್ನಿ ಕೊಂಡೀರ ಸುಬ್ಬಕ್ಕಿ (82) ನಿಧನರಾದರು.

ಮೃತರ ಅಂತ್ಯಕ್ರಿಯೆಯು ನಿನ್ನೆ ಬೇತು ಗ್ರಾಮದ ಕೊಂಡೀರ ಕುಟುಂಬದ ರುದ್ರ ಭೂಮಿಯಲ್ಲಿ ಜರುಗಿತು. ಮೃತರು ಪುತ್ರ ಮತ್ತು ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

ಗಳಿಸಿದ ಜ್ಞಾನವನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ: ಸುತ್ತೂರು ಶ್ರೀ



ಮಾನಸ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ ಸಾಧಕರಿಗೆ ಸನ್ಮಾನ, ಹೈಟೆಕ್ ಗ್ರಂಥಾಲಯ ಲೋಕಾರ್ಪಣಾ ಸಮಾರಂಭದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳು ಮಹದೇಶ್ವರ ಬೆಟ್ಟದ ಸಾಲೂರು ಶ್ರೀಗಳನ್ನು ಅಭಿನಂದಿಸಿದರು. ಡಾ.ದತ್ತೇಶ್, ಶಾಸಕರಾದ ಮಂಜುನಾಥ್, ಎ.ಆರ್.ಕೃಷ್ಣಮೂರ್ತಿ ಇನ್ನಿತರರಿದ್ದರು

ಕೊಳ್ಳೇಗಾಲ, ನ.30–ವಿದ್ಯಾರ್ಥಿಗಳು ತಾವು ಗಳಿಸಿದ ಜ್ಞಾನವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಪೋಷಕರು ಹಾಗೂ ವಿದ್ಯೆ ಕಲಿಸಿದ ಗುರು ಗಳಿಗೆ ವಿಧೇಯರಾಗಿರಬೇಕು ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದ್ದಾರೆ.

ಪಟ್ಟಣದ ಮಾನಸ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಸಾಧಕರಿಗೆ ಸನ್ಮಾನ, ನೂತನ ಗ್ರಂಥಾಲಯ ಲೋಕಾರ್ಪಣೆ ಸಮಾರಂಭದ ಸಾನಿಧ್ಯ ವಹಿಸಿದ್ದ ಅವರು ಮಾತನಾಡಿ, ಗ್ರಂಥ ಅಧ್ಯಯನದಿಂದ ನಮ್ಮ ಜ್ಞಾನವನ್ನು ವಿಕಸನಗೊಳಿಸಿಕೊಳ್ಳಬೇಕು. ಆ ಮೂಲಕ ಜೀವನದಲ್ಲಿ ಅತ್ಯುನ್ನತ ವ್ಯಕ್ತಿಗಳಾಗಿ ರೂಪುಗೊಳ್ಳಬೇಕು ಎಂದರು. ಮೂರು ದಶಕಗಳಿಂದ ಮಾನಸ ಸಂಸ್ಥೆ ಸಲ್ಲಿಸುತ್ತಿರುವ ಶೈಕ್ಷಣಿಕ ಸೇವೆ ಅಮೋಘವಾದುದು, ಸಾಧಕರನ್ನು ಗೌರವಿ ಸುವ ಈ ಸಂಸ್ಥೆ ಮಾನವೀಯ ಕೆಲಸ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಶಾಸಕ ಎಂ.ಆರ್.ಮಂಜುನಾಥ್ ಮಾತನಾಡಿ, ಇಂದು ಮಾನಸ ಶಿಕ್ಷಣ ಸಂಸ್ಥೆ ಸಾಧಕ ವಿದ್ಯಾರ್ಥಿಗಳು ಹಾಗೂ ವಿವಿಧ ಕ್ಷೇತ್ರಗಳ ಸಾಧಕರನ್ನು ಪುರಸ್ಕರಿಸಿದ್ದು ಈ ಬೆಳವಣಿಗೆ ಇಲ್ಲಿನ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಬೇಕು, ಸಾಧನೆ ನಿಮ್ಮ ಮೊದಲ ಮೆಟ್ಟಿಲಾಗಬೇಕು. ಈನಿಟ್ಟಿನಲ್ಲಿ ಗುರಿ ಸಾಧಿಸಿ, ಕಲಿತ ಸಂಸ್ಥೆಗೆ, ಪೋಷಕರಿಗೆ ಕೀರ್ತಿ ತರುವ ಜೊತೆ ಜೊತೆಗೆ ಜಿಲ್ಲೆಗೂ ನಿಮ್ಮ ಶೈಕ್ಷಣಿಕ ಸಾಧನೆ ಕೀರ್ತಿ ತರುವಂತಾಗಲಿ ಎಂದು ಆಶಿಸಿದರು.

ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ.ವೆಂಕಟೇಶ್ ಮಾತನಾಡಿ, ಗ್ರಂಥಾಲಯಗಳು ಓದುಗರ ಪಾಲಿನ ದೇವಾಲಯಗಳಿದ್ದಂತೆ, ಪುಸ್ತಕಗಳು ಜ್ಞಾನದ ಕಿಟಕಿಗಳಿದ್ದಂತೆ, ಮಾನಸ ಶಿಕ್ಷಣ ಸಂಸ್ಥೆ ಜ್ಞಾನದ ಶಿಖರವಿದ್ದಂತೆ ಎಂದರು.

ಸಂಸ್ಥೆ ಸಂಸ್ಥಾಪಕ ಡಾ.ದತ್ತೇಶ್ ಕುಮಾರ್, ಸಾಲೂರು ಮಠಾಧ್ಯಕ್ಷ ಡಾ. ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಶಾಸಕ ಎ.ಆರ್.ಕೃಷ್ಣಮೂರ್ತಿ ಹಲವರು ಇದ್ದರು

ರಾಜಕಾರಣದ ದ್ವೇಷ, ವೈಮನಸ್ಸಿನಿಂದ ನೀತಿ ಸೌಹಾರ್ದತೆಗೆ ಧಕ್ಕೆ



ಮಾನಸೋತ್ಸವ ಸಮಾರಂಭದಲ್ಲಿ ಮಾಜಿ ಉಪ ಮುಖ್ಯಮಂತ್ರಿ ಡಾ. ಅಶ್ವಥ ನಾರಾಯಣ ಸಾಧಕ ವಿದ್ಯಾರ್ಥಿಗಳನ್ನು ಪುರಸ್ಕರಿಸಿದರು

ಕೊಳ್ಳೇಗಾಲ: ಇತ್ತೀಚಿನ ದಿನಗಳಲ್ಲಿ ರಾಜ್ಯ ರಾಜಕಾರಣಗಳಲ್ಲಿ ಎದುರಾಗಿರುವ ದ್ವೇಷ–ವೈಷಮ್ಯದಿಂದಾಗಿ ನೀತಿ ಸೌಹಾರ್ದತೆಗೆ ಧಕ್ಕೆಯಾಗುತ್ತಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಡಾ. ಅಶ್ವಥ ನಾರಾಯಣ ಅಭಿಪ್ರಾಯಪಟ್ಟಿದ್ದಾರೆ


ಮಾನಸೋತ್ಸವ ಸಮಾರಂಭದಲ್ಲಿ ಸಾಧಕ ವಿದ್ಯಾರ್ಥಿಗಳನ್ನು ಪುರಸ್ಕರಿಸಿ ಮಾತನಾಡಿ, ಇತ್ತಿಚಿನ ದಿನಗಳಲ್ಲಿ ರಾಜಕಾರಣದಲ್ಲಿ ಕೇವಲ ದ್ವೇಷ, ವೈಮನಸ್ಯ ಕಾಣುತ್ತಿದ್ದೇವೆ ಹೊರತು ಸಮಾಜಕ್ಕೆ ಮಾದರಿಯಾಗುವಂಥ ಸೌಹಾರ್ದಯುತ ವಾತಾವರಣ ಇಲ್ಲ ಎಂದರು.

ಯುವ ಪೀಳಿಗೆ ಕನಸು ನನಸಾಗಬೇಕಾದರೆ ಶೈಕ್ಷಣಿಕ ಪ್ರಗತಿಯಿಂದ ಮಾತ್ರ ಸಾಧ್ಯ, ಗುಣಮಟ್ಟದ ಶಿಕ್ಷಣ ನೀಡಿದಾಗ ಮಾತ್ರ ಒಳ್ಳೆಯ ಸಮಾಜ ನಿರ್ಮಾಣ ಸಾಧ್ಯ, ಸರ್ಕಾರಗಳು ಹಿಂದುಳಿದ ಭಾಗಗಳಲ್ಲಿನ ಮಕ್ಕಳ ಅನುಕೂಲಕ್ಕಾಗಿ ಸಾಕಷ್ಟು ಸೌಲಭ್ಯ ಒದಗಿಸುವಂತಾಗಬೇಕು, ಪ್ರಸ್ತುತ ದಿನಗಳಲ್ಲಿ ಮಕ್ಕಳ ಕಲಿಕಾ ಉತ್ಸಾಹ, ವಿಶ್ವಾಸಕ್ಕೆ ಶಕ್ತಿ ತುಂಬುವ ಕೆಲಸವನ್ನು ಸರ್ಕಾರ ಮಾಡಬೇಕು, ಎಂದರು

ಮಾಜಿ ಸಚಿವ ಎನ್ ಮಹೇಶ್, ಮಾಜಿ ಶಾಸಕ ಎಸ್. ಬಾಲರಾಜು, ಮಾನಸ ಸಂಸ್ಥೆಯ ಅಧ್ಯಕ್ಷ ನಾಗರಾಜು, ಡಾ. ಶರತ್ಚಂದ್ರ ಸ್ವಾಮಿಜಿ, ರೂಪದತ್ತೇಶ್ ಇನ್ನಿತರಿದ್ದರು

ಮಾನಸ ಸಂಸ್ಥೆಯಲ್ಲಿ ನಡೆದ ಸಾಧಕ ವಿದ್ಯಾರ್ಥಿಗಳಿಗೆ ಗೌರವ ಪುರಸ್ಕಾರ ಸಮಾರಂಭದಲ್ಲಿ ಮಾಜಿ ಉಪ ಮುಖ್ಯಮಂತ್ರಿ ಡಾ. ಅಶ್ವಥ್ ನಾರಾಯಣ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಮಾಜಿ ಸಚಿವ ಮಹೇಶ್, ಬಾಲರಾಜು, ನಾಗರಾಜು, ಡಾ.ದತ್ತೇಶ್ ಇದ್ದರು.

ಮಾನವೀಯತೆ ಸಂದೇಶ ಸಾರುವ 'ತೆರೆಯೋ ಬಾಗಿಲನು' ನಾಟಕ



ಉರ್ದುಮೂಲದ ದರವಾಝೋ ಖೋಲ್ ದೋ ನಾಟಕದ ಕನ್ನಡದ ಅನುವಾದ ತೆರೆಯೋ ಬಾಗಿಲನು ಪುಸ್ತಕವನ್ನು ಗಣ್ಯರು ಬಿಡುಗಡೆ ಮಾಡಿದರು

ಚಾಮರಾಜನಗರ, ನ.30–'ತೆರೆಯೋ ಬಾಗಿಲನು' ನಾಟಕದಲ್ಲಿ ಒಳ್ಳೆಯ ಕತೆ, ಹಾಸ್ಯ, ಚುರುಕಾದ ಸಂಭಾಷಣೆಯಿದ್ದು, ಎಲ್ಲರೂ ನಮ್ಮವರೇ ಮಾನವೀಯತೆ ಶ್ರೇಷ್ಠ ಎಂಬ ಸಂದೇಶವನ್ನು ಚಿತ್ರಿಸಲಾಗಿದೆ ಎಂದು ಬೆಂಗಳೂರು ಸಾಂಸ್ಕೃತಿಕ ಸಾಮಾಜಿಕ ವೇದಿಕೆ ಸಮಿತಿ ಚಿಂತಕ ಡಾ.ಬಿ.ಆರ್. ಮಂಜುನಾಥ್ ಹೇಳಿದರು.

ನಗರದ ರೋಟರಿ ಭವನದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಶಾಂತಲಾ ಕಲಾವಿದರು, ರೋಟರಿ ಸಂಸ್ಥೆಯಿಂದ ಕ್ರಿಶನ್‌ಚಂದ್ ಅವರ ಉರ್ದು ಮೂಲದ ದರವಾಝೋ ಖೋಲ್ ದೋ ನಾಟಕದ ಕನ್ನಡದ ಅನುವಾದ ತೆರೆಯೋ ಬಾಗಿಲನು ಪುಸ್ತಕ ಲೋಕಾರ್ಪಣೆ ಮಾಡಿ ಮಾತನಾಡಿ, 50– 60ರ ದಶಕದಲ್ಲಿ ಮನೆ ಬಾಡಿಗೆ ಪಡೆಯುವವರು ತಮ್ಮ ಸಮುದಾಯದ ಹೆಸರನ್ನು ಹೇಳಿಕೊಳ್ಳುವಂತಿರಲಿಲ್ಲ, ಆಹಾರ ಪದ್ಧತಿ ವಿಚಾರದಲ್ಲಿ ಸಸ್ಯಾಹಾರಿಯಾದವರಿಗೆ ಮನೆ ಬಾಡಿಗೆ ಪಡೆಯುವ ಅವಕಾಶವಿತ್ತು. ಮಾಂಸಾಹಾರಿಗಳು ಎಂದರೆ ಮನೆಯನ್ನು ನೀಡುತ್ತಿರಲಿಲ್ಲ, ಒಂದು ವೇಳೆ ತನ್ನ ಜಾತಿ ಧರ್ಮವನ್ನು ಮುಚ್ಚಿಟ್ಟು, ಬೇರೆ ಜಾತಿ ಧರ್ಮ ಹೇಳಿ ಮನೆಯವರಿಗೆ ಗೊತ್ತಾದಾಗ ಆ ಸಂದರ್ಭದಲ್ಲಿ ಬಾಡಿಗೆದಾರರು ಪಡುವ ಪಾಡು, ಇಂತಹ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ಹಲವಾರು ಅಂಶಗಳು 'ತೆರೆಯೋ ಬಾಗಿಲನು' ಪುಸ್ತಕದಲ್ಲಿ ಅನಾವರಣಗೊಂಡಿವೆ ಎಂದರು.

ಕ್ರಿಶ್ಚಿಯನ್ ಸಮುದಾಯದವರು ಬಾಡಿಗೆ ಕೇಳಲು ಬಂದಾಗ ಮನೆ ಮಾಲೀಕ ಹೃದಯಾಘಾತಕ್ಕೆ ಒಳಗಾಗುತ್ತಾನೆ. ಆ ಸಂದರ್ಭದಲ್ಲಿ ಕ್ರಿಶ್ಚಿಯನ್ ವೈದ್ಯರೇ ಸೂಕ್ತ ಚಿಕಿತ್ಸೆ ನೀಡಿ, ಮಾಲೀಕನ ಪ್ರಾಣ ಉಳಿಸುವುದು, ಕೊನೆಯಲ್ಲೇ ಆತನೇ ಜಗತ್ತಿನಲ್ಲೇ ಮಾನವೀಯತೆ ಶ್ರೇಷ್ಠ. ನನ್ನ ಮನೆಯ ಬಾಗಿಲು ಎಲ್ಲರಿಗೂ ತೆರೆದಿದೆ ಎಂದು ಮಗನ ಕೈಗೆ ಬೀಗದ ಕೀಲಿ ಕೊಡುವ ದೃಶ್ಯಾವಳಿಗಳು ನಾಟಕದಲ್ಲಿ ಪರಿಣಾಮಕಾರಿಯಾಗಿ ಮೂಡಿ ಬಂದಿವೆ ಎಂದರು.

ಶಾಂತಲ ಕಲಾವಿದರ ತಂಡದ ವಿ. ಚಿತ್ರಾ, ಎ.ಡಿ.ಸಿಲ್ವಾ, ಎಂ.ಲಿಂಗಪ್ಪ, ವೆಂಕಟರಾಜು ಕಿರಿಯ ಕಲಾವಿದರು ಮಾನವತೆಯೇ ಶ್ರೇಷ್ಠ ಎಂಬ ನಾಟಕದ ಸಾಲನ್ನು ಓದಿದರು. ಸಂಘದ ಅಧ್ಯಕ್ಷ ಆರ್.ಎನ್. ಸಿದ್ದಲಿಂಗಸ್ವಾಮಿ,ಚಂದ್ರಶೇಖರ್, ಅನುವಾದಕ ಸಯ್ಯದ್ ಮನ್ಸೂರ್ ಅಹಮದ್, ಕೆ.ವೆಂಕಟರಾಜು ಇದ್ದರು.

ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ



ಪಟ್ಟಣದ ತಾಲೂಕು ಕಚೇರಿ ಎದುರು ಬಿಜೆಪಿ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ನಿರಂಜನಕುಮಾರ್ ಮಾತನಾಡಿದರು.

ಗುಂಡ್ಲುಪೇಟೆ, ನ.30(ಸೋಮ್.ಜಿ)– ರೈತರ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸದ ಸರ್ಕಾರ ರಾಜ್ಯದ ಹಿಂದುಳಿದ ವರ್ಗಗಳ ಹಣ ತಿಂದು ತೇಗಿ ಎಲ್ಲಾ ಸಮುದಾಯಗಳಿಗೆ ಅನ್ಯಾಯ ಮಾಡುತ್ತಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ ಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ

ಬಿಜೆಪಿ ವತಿಯಿಂದ ಪಟ್ಟಣದಲ್ಲಿ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಮಾತನಾಡಿ, ಹಿಂದಿನಿಂದಲೂ ಸರ್ಕಾರಗಳು ಎಸ್‌ಸಿ ಹಾಗೂ ಎಸ್‌ಟಿ ವರ್ಗಗಳ ಅಭಿವೃದ್ದಿಗೆ ಕೋಟ್ಯಾಂತರ ರೂಪಾಯಿ ಅನುದಾನ ನೀಡುತ್ತಾ ಬಂದಿದ್ದರೂ, ಈ ವರ್ಗಗಳ ಬೆಂಬಲದಿಂದ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಅವರನ್ನು ವಂಚಿಸಿದೆ ಎಂದರು.

ಗ್ಯಾರಂಟಿ ಹೆಸರಿನಲ್ಲಿ ಅಗತ್ಯವಸ್ತುಗಳ ಬೆಲೆ ಏರಿಕೆ ಮಾಡಿದ್ದು ಸರ್ಕಾರದ ಸಾಧನೆಯಾಗಿದೆ. ರೈತರಿಗೆ ಗರಿಷ್ಟಮಟ್ಟದ ಕಷ್ಟ ಕೊಡಲಾಗುತ್ತಿದೆ. ಟ್ರಾನ್ಸ್ ಫಾರ್ಮರ್ ಅಳವಡಿಕೆಗೆ ಲಕ್ಷಾಂತರ ರೂ.ವಸೂಲಿ ಮಾಡಲಾಗುತ್ತಿದೆ. ಕಲ್ಲುಕಟ್ಟೆ ಜಲಾಶಯದ ಅಭಿವೃದ್ದಿಗೆ ಕೋಟಿ ರೂ.ಅನುದಾನ ಬಿಡುಗಡೆ ಮಾಡಿ ಯಾವುದೇ ಕೆಲಸಮಾಡದೆ ಹಣ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಮಂಡಲಾಧ್ಯಕ್ಷ ಸಿ.ಮಹದೇವಪ್ರಸಾದ್, ಮಾಜಿ ಅಧ್ಯಕ್ಷ ಎನ್.ಮಲ್ಲೇಶ್, ಎಲ್. ಸುರೇಶ್, ಜಿಲ್ಲಾ ಉಪಾಧ್ಯಕ್ಷ ಎಚ್.ಎಸ್. ಸೋಮಶೇಖರ್, ನಂಜಪ್ಪ, ಕೊಡಸೋಗೆ ಶಿವಪ್ರಸಾದ್, ನಾಗೇಶ್, ಸುನಿಲ್ ಮೂಡ್ನಾಕೂಡು, ಎಚ್.ವಿ.ಮಂಜುನಾಥ, ಚನ್ನಮಲ್ಲೀಪುರ ಬಸವಣ್ಣ, ಎಸ್.ಸಿ.ಮಂಜುನಾಥ್ ಇದ್ದರು.

ಜನರ ಮನಸ್ಸನ್ನು ಬದಲಿಸುವ ಶಕ್ತಿ ದೃಶ್ಯಮಾಧ್ಯಮಕ್ಕೆ ಇದೆ : ಸುತ್ತೂರು ಶ್ರೀ



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ರಚಿಸಿರುವ 'ಚಲನಚಿತ್ರ ಪೊಲೀಸ್ ಪ್ರತಿನಿಧೀಕರಣ' ಕೃತಿಯನ್ನು ಸುತ್ತೂರು ಶ್ರೀಗಳು ಬಿಡುಗಡೆ ಮಾಡಿದರು

ಚಾಮರಾಜನಗರ, ನ.30–ಚಲನಚಿತ್ರ ಹಾಗೂ ದೃಶ್ಯಮಾಧ್ಯಮ ಅತ್ಯಂತ ಪ್ರಭಾವಶಾಲಿಯಾಗಿದ್ದು ಜನರ ಮನಸ್ಸನ್ನು ಬದಲಿಸುವ ಶಕ್ತಿ ಹೊಂದಿವೆ ಎಂದು ಸುತ್ತೂರು ಕ್ಷೇತ್ರದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದ್ದಾರೆ.

ನಗರದ ಡಾ.ರಾಜಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಅಸ್ತಿತ್ವ ಸಾಂಸ್ಕೃತಿಕ ವೇದಿಕೆ ಹಾಗೂ ಹೆಮ್ಮರ ಫೌಂಡೇಷನ್ ನಿಂದ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ರಚಿಸಿರುವ 'ಚಲನಚಿತ್ರ ಪೊಲೀಸ್ ಪ್ರತಿನಿಧೀಕರಣ' ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಸಿನಿಮಾಗಳು ಜನರ ಜೀವನದ ದಿಕ್ಕನ್ನೇ ಬದಲಿಸಿರುವ ಅನೇಕ ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ ಎಂದರು.

'ಚಲನಚಿತ್ರ ಪೊಲೀಸ್ ಪ್ರತಿನಿಧೀಕರಣ' ಕೃತಿಯಲ್ಲಿ ಹಲವಾರು ಕುತೂಹಲ ಸಂಗತಿಗಳನ್ನು ಓದುಗರ ಮುಂದಿರಿಸಲಾಗಿದೆ. ಸಿನಿಮಾಗಳಲ್ಲಿ ಪೊಲೀಸ್ ಇಲಾಖೆಯ ಒಳ ಹೊರಗನ್ನು ಹೇಗೆ ಚಿತ್ರಿಸಲಾಗುತ್ತಿತ್ತು ಎಂಬ ವಸ್ತುನಿಷ್ಠ ಮಾಹಿತಿಯನ್ನು ಓದುಗರ ಕಣ್ಣು ಕಟ್ಟುವಂತೆ ನೈಜ ಸಂಗತಿಗಳನ್ನು ಚಿತ್ರಿಸಿದ್ದಾರೆ ಎಂದು ಹೇಳಿದರು.

ಮೈ.ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ. ಲೋಲಾಕ್ಷಿ ಮಾತನಾಡಿ ಕೃತಿಯಲ್ಲಿರುವ ಪ್ರತಿ ಅಕ್ಷರದ ಹಿಂದೆ ಸಂಶೋಧನೆ ಎದ್ದು ಕಾಣುತ್ತದೆ. ಪೊಲೀಸ್ ವ್ಯವಸ್ಥೆ ಹಾಗೂ ಸಿನಿಮಾ ಕ್ಷೇತ್ರವನ್ನು ಸಮ್ಮಿಳಿ ತಗೊಳಿಸಿ ವಸ್ತುನಿಷ್ಠವಾಗಿ ಕೃತಿ ರಚಿಸಲಾಗಿದೆ. ಸಣ್ಣ ವಿಚಾರಗಳೂ ಇಲ್ಲಿ ಮಹತ್ವ ಪಡೆದುಕೊಂಡಿವೆ. ಯಾರೂ ನಡೆಯದ ದಾರಿಯಲ್ಲಿ ನಡೆದು ಹೊಸತನವನ್ನು ಹೆಕ್ಕಿ ತೆಗೆದು ಅಕ್ಷರ ರೂಪ ನೀಡುವುದು ನಿಜವಾದ ಸಂಶೋಧನೆಯಾಗಿದ್ದು ಅಂತಹ ಕೆಲಸವನ್ನು ಬಿ.ಟಿ.ಕವಿತಾ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಸಂಸ್ಕೃತಿ ಚಿಂತಕ ಶಂಕರ ದೇವನೂರು ಮಾತನಾಡಿ, ಚಲನಚಿತ್ರ ಪೊಲೀಸ್ ಪ್ರತಿನಿಧೀಕರಣ ಆಳವಾದ ಅಧ್ಯಯನ, ನಿಖರ ಹಾಗೂ ನೈಜ ಮಾಹಿತಿ ಒಳಗೊಂಡಿರುವ ಕೃತಿಯಾಗಿದೆ ಎಂದರು. ಮಂಡ್ಯ ಜಿಲ್ಲೆ ಅಬಕಾರಿ ಉಪ ಆಯುಕ್ತ ಆರ್.ನಾಗಶಯನ ಇದ್ದರು.



ಕರ್ನಾಟಕ ಪ್ರಜಾಶಕ್ತಿ ವೇದಿಕೆ ಸಂಘಟನೆಯ ನೂತನ ಕಚೇರಿಯನ್ನು ಶಾಸಕ ಗಣೇಶ ಪ್ರಸಾದ್ ಉದ್ಘಾಟಿಸಿದರು. ರಾಜ್ಯಾಧ್ಯಕ್ಷ ಅಶೋಕ್‌ರಾಜ್, ನಂಜನಗೂಡು ತಾಲೂಕು ಅಧ್ಯಕ್ಷ ಶಿವರಾಜ್, ಚಾ.ನಗರ ಯುವ ಘಟಕದ ಅಧ್ಯಕ್ಷ ಶಿವ ನಾಗೇಂದ್ರ, ಯುವ ಘಟಕದ ಅಧ್ಯಕ್ಷ ನಾಗರಾಜ್, ಗ್ರಾಪಂ ಅಧ್ಯಕ್ಷೆ ಜಯಮ್ಮ, ಸದಸ್ಯ ಪುನೀತ್, ರಾಜಶೆಟ್ಟಿ, ಯ.ನಾರಾಯಣ್ ಬಿಎಸಿಸಿ ಬ್ಯಾಂಕಿನ ನಿರ್ದೇಶಕ ಚಂದ್ರು ಹಾಜರಿದ್ದರು.



7 ದಿನಗಳಿಂದ ದಲಿತ ಕುಟುಂಬದವರು ಹಾಗೂ ಮುಖಂಡರು ಪ್ರತಿಭಟನೆ ನಡೆಸುತ್ತಿದ್ದ ಸ್ಥಳಕ್ಕೆ ಶಾಸಕ ಅನಿಲ್ ಚಿಕ್ಕಮಾದು, ಸಂಸದ ಸುನಿಲ್ ಬೋಸ್ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಸಮಸ್ಯೆಗಳನ್ನು ಆಲಿಸಿದರು.

ಶಾಸಕರು, ಸಂಸದರು ಸ್ಥಳಕ್ಕೆ ಭೇಟಿ ನೀಡಿ ಭರವಸೆ ಹಿನ್ನೆಲೆ

7 ದಿನಗಳ ಪ್ರತಿಭಟನೆ ಕೈಬಿಟ್ಟ ಕೆಂಚನಹಳ್ಳಿ ಗ್ರಾಮಸ್ಥರು

ಹೆಚ್.ಡಿ.ಕೋಟೆ, ನ.30– ತಮ್ಮ ಬೇಡಿಕೆಗಳನ್ನು ಈಡೇರಿಸುವ ಮೂಲಕ ಪುನರ್ವಸತಿ ಕಲ್ಪಿಸಿಕೊಡುವಂತೆ ಆಗ್ರಹಿಸಿ 7 ದಿನಗಳಿಂದ ಕೆಂಚನಹಳ್ಳಿ ಗ್ರಾಮಸ್ಥರು ನಡೆಸುತ್ತಿದ್ದ ಪ್ರತಿಭಟನೆಯನ್ನು, ಶಾಸಕ ಅನಿಲ್ ಚಿಕ್ಕಮಾದು ಮತ್ತು ಸಂಸದ ಸುನಿಲ್ ಬೋಸ್ ನೀಡಿದ ಭರವಸೆ ಮೇರೆಗೆ ಕೈಬಿಟ್ಟಿದ್ದಾರೆ.

ಪ್ರತಿಭಟನಾ ಸ್ಥಳಕ್ಕೆ ಶಾಸಕ ಅನಿಲ್ ಚಿಕ್ಕಮಾದು ಹಾಗೂ ಸಂಸದ ಸುನಿಲ್ ಬೋಸ್ ಭೇಟಿ ನೀಡಿ, ಪ್ರತಿಭಟನಾಕಾರರ ಸಮಸ್ಯೆಗಳನ್ನು ಆಲಿಸಿ ಸರ್ಕಾರದೊಂದಿಗೆ ಚರ್ಚಿಸಿ ನಿಮ್ಮ ಬೇಡಿಕೆ ಈಡೇರಿಸಲಾಗುವುದು ಎಂದು ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಕೈಬಿಟ್ಟರು.

ತಾಲೂಕಿನ ಕೆಂಚನಹಳ್ಳಿ ಗ್ರಾಮದ ಸರ್ವೆ ನಂ.1 ರಲ್ಲಿ ಕಳೆದ 7 ದಿನಗಳಿಂದ ದಲಿತ ಕುಟುಂಬದವರು ಹಾಗೂ ಮುಖಂಡರು ಪ್ರತಿಭಟನೆ ನಡೆಸುತ್ತಿದ್ದರು, ಸ್ಥಳಕ್ಕೆ ಶಾಸಕ ಅನಿಲ್ ಚಿಕ್ಕಮಾದು, ಸಂಸದ ಸುನಿಲ್ ಬೋಸ್ ಅಧಿಕಾರಿಗಳೊಂದಿಗೆ ಭಾನುವಾರ ಭೇಟಿ ನೀಡಿ, ಅಧಿಕಾರಿಗಳ ಸಮ್ಮುಖದಲ್ಲಿ ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿದರು.

ಶಾಸಕರು ಮಾತನಾಡಿ, ಕಬಿನಿ ಅಣೆಕಟ್ಟು ನಿರ್ಮಾಣದ ವೇಳೆ ಮನೆ, ಜಮೀನು ಕಳೆದುಕೊಂಡ ಕೆಂಚನಹಳ್ಳಿ ಗ್ರಾಮದ ನಿರಾಶ್ರಿತರಿಗೆ ಸರ್ವೆ ನಂ.1 ರಲ್ಲಿ ಒಟ್ಟು 840 ಎಕರೆ ಜಮೀನಿನಲ್ಲಿ ಈಗಾಗಲೇ 495 ಎಕರೆ ಜಮೀನು ಅರ್ಹ ಫಲಾನುಭವಿಗಳಿಗೆ ಹಂಚಿಕೆಯಾಗಿದೆ. ಉಳಿದ ಸುಮಾರು 345 ಎಕರೆ ಜಮೀನು ಕಂದಾಯ ಇಲಾಖೆಗೆ ಸೇರಿದ ಕಾರಣ ಈ ಸಮಸ್ಯೆಯು ಬಗೆ ಹರಿದಿಲ್ಲ, ಈ ವಿಷಯವನ್ನು ನಾನು ಈಗಾಗಲೇ ವಿಧಾನಸಭಾ ಅಧಿವೇಶನದಲ್ಲಿ ಪ್ರಸ್ತಾಪಿಸಿದ್ದೇನೆ ಮತ್ತು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಸಮಿತಿ ಸಭೆಯಲ್ಲಿಯೂ ಇದರ ಬಗ್ಗೆ ಚರ್ಚೆ ಮಾಡಿದ್ದು, ಸರ್ಕಾರದ ಮಟ್ಟದಲ್ಲಿ ಚರ್ಚೆಯಲ್ಲಿದ್ದು ಸಮಸ್ಯೆಗೆ ಪರಿಹಾರ ಸಿಗುವ ವಿಶ್ವಾಸವಿದೆ ಎಂದರು.

ಕಂದಾಯ ಸಚಿವರು,ಅರಣ್ಯ ಇಲಾಖೆ ಸಚಿವರು ಹಾಗೂ ಸಂಬಂಧಿತ ಅಧಿಕಾರಿಗಳ ಗಮನಕ್ಕೆ ವಿಷಯವನ್ನು ತಂದಿದ್ದು, ಸ್ಥಳದಲ್ಲೇ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ ಸಮಸ್ಯೆಯನ್ನು ಶೀಘ್ರವಾಗಿ ಬಗೆಹರಿಸುವಂತೆ ಸೂಚನೆ ನೀಡಿದರು.

ಸಂಸದ ಸುನೀಲ್ ಬೋಸ್ ಮಾತನಾಡಿ ಜಿಲ್ಲಾಧಿಕಾರಿಗಳಿಗೆ ಸ್ಥಳದಲ್ಲೇ ದೂರವಾಣಿ ಕರೆಮಾಡಿ ತಮ್ಮ ಇಲಾಖೆಯ ಕಟ್ಟುಪಾಡುಗಳು ಏನೇ ಇರಲಿ, ಆದಷ್ಟು ಬೇಗ ಈ ಕುಟುಂಬಗಳಿಗೆ ನ್ಯಾಯ ಸಿಗಬೇಕು ಎಂದು ಖಡಕ್ ಸೂಚನೆ ನೀಡಿದರು.

ಈ ಸುಧರ್ಭದಲ್ಲಿ ತಹಸೀಲ್ದಾರ್ ಶ್ರೀನಿವಾಸ್, ಉಪ ವಿಭಾಗಾಧಿಕಾರಿ ಮಂಜುನಾಥ್, ಸಿಎಫ್ ಪ್ರಭಾಕರನ್, ಎಸಿಎಫ್ ಪರಮೇಶ್, ಆರ್‌ಎಫ್‌ಓ, ಅಮೃತೇಶ್, ಶಿವಕುಮಾರ್, ಡಿಆರ್‌ಎಫ್‌ಓ ಪ್ರವೀಣ್ ಹಂಚಿನಾಳಾ, ರವೀಂದ್ರನ್, ಹನುಮಂತ ದೊಡ್ಡಮನಿ, ಮುಖಂಡರಾದ ಶಿವರಾಜು, ನರಸಿಂಹಮೂರ್ತಿ, ಜವರಯ್ಯ ಶಿವಣ್ಣ, ಕಾಳಸ್ವಾಮಿ, ನಾಗರಾಜು, ಮಣಿ, ಶಶಿಪಾಟೀಲ್, ವೇಣುಗೋಪಾಲ್, ಸಿದ್ದರಾಜು, ಮರಿದೇವಯ್ಯ, ಶಿವರಾಜು, ರಾಜಣ್ಣ, ಮುದ್ದುಮಲ್ಲಯ್ಯ, ಗ್ರಾಮದ ಮುಖಂಡರಾದ ಪುಟ್ಟಸ್ವಾಮಿ, ಸಿದ್ದಯ್ಯ, ನಾಗರಾಜ್, ಸೂರಿ, ಸಣ್ಣಪ್ಪ, ಶಿವಣ್ಣ, ಗುರುಸ್ವಾಮಿ, ಮಹದೇವಸ್ವಾಮಿ, ಮಲಾರಾ ಮಹದೇವು, ಶಾಂತರಾಜು, ಮಲ್ಲೇಶ್, ಕೆ.ಎಂ. ನಾಗರಾಜು, ಲೋಕೇಶ್, ವಿಜಯಕುಮಾರ್, ಇಮ್ರಾನ್, ವೇಣುಗೋಪಾಲ, ಶಂಕರ ಕೆಂಪಯ್ಯ, ಸಿದ್ದಯ್ಯ, ದೊಡ್ಡಯ್ಯ, ಸಿಂಗಯ್ಯ, ಪುಟ್ಟಯ್ಯ, ರಾಜೀವ, ಗುರುಸ್ವಾಮಿ, ಇನ್ನು ಹಲವಾರು ಗ್ರಾಮಸ್ಥರು, ಮುಖಂಡರು ಭಾಗವಹಿಸಿದ್ದರು.

ಕಲ್ಲಬೆಟ್ಟದಲ್ಲಿ ಸಾಲುಮರದ ತಿಮ್ಮಕ್ಕರಿಗೆ ಶ್ರದ್ಧಾಂಜಲಿ



ಕಲ್ಲಬೆಟ್ಟ ಉದ್ಯಾನವನದಲ್ಲಿ ಸಾಲುಮರದ ತಿಮ್ಮಕ್ಕನವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಹುಣಸೂರು,ನ.30– ತಾಲೂಕಿನ ಕಲ್ಲಬೆಟ್ಟ ಟಿಂಬರ್ ಯಾರ್ಡ್ ಆವರಣದಲ್ಲಿರುವ ಸಾಲು ಮರದ ತಿಮ್ಮಕ್ಕ ವೃಕ್ಷ ಉದ್ಯಾನವನದಲ್ಲಿ ಸಾಲುಮರದ ತಿಮ್ಮಕ್ಕನವರಿಗೆ ಮಕ್ಕಳ ಸಾಹಿತ್ಯ ಪರಿಷತ್ ಮತ್ತು ದಲಿತ ಮಹಿಳಾ ಒಕ್ಕೂಟದ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಕನ್ನಡ ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿ ಪುರಸ್ಕೃತರು, ದಲಿತ ಮಹಿಳಾ ಒಕ್ಕೂಟದ ಜಿಲ್ಲಾ ಸಂಚಾಲಕಿ ಹಾಗೂ ಮಕ್ಕಳ ಸಾಹಿತ್ಯ ಪರಿಷತ್‌ನ ಅಧ್ಯಕ್ಷೆ ಮಹಾದೇವಮ್ಮ ಈ ಸಂದರ್ಭದಲ್ಲಿ ಮಾತನಾಡಿ, ತಿಮ್ಮಕ್ಕ ಅವರು ತನಗೆ ಮಕ್ಕಳಿಲ್ಲ ಎಂದು ರಸ್ತೆ ಬದಿಯಲ್ಲಿರುವ ಮರಗಳೆ ನನ್ನ ಮಕ್ಕಳು ಎಂದು ರಸ್ತೆ ಬದಿಯ ಮರಗಳಿಗೆ ನೀರು ಹಾಕಿ ಅವುಗಳನ್ನು ಮಕ್ಕಳಂತೆ ಸಾಕಿದರು. ಅಲ್ಲದೆ ಸಾವಿರಾರು ಮರಗಳನ್ನು ನೆಟ್ಟು ಬೆಳಸಿದರು. ಮರ ನೆಟ್ಟು ಬೆಳಸುವ ಕಾರ್ಯಕ್ರಮಗಳಿಗೆ ಪ್ರೇರಣೆ ನೀಡಿ ಸಾವಿರಾರು ಮರಗಳನ್ನು ಬೆಳೆಸಲು ಪ್ರೇರಣೆಯಾದರು ಎಂದರು.

ದಸಂಸ ಡಿ.ಜಿ.ಸಾಗರ್ ಬಣದ ಜಿಲ್ಲಾ ಸಂಚಾಲಕ ಕೊಳಗಟ್ಟ ಕೃಷ್ಣ ಮಾತನಾಡಿ ತಿಮ್ಮಕ್ಕ ಒಬ್ಬ ಮಹಿಳೆಯಾದರು ಪರಿಸರ ಕಾಳಜಿ ಮತ್ತು ರಸ್ತೆ ಬದಿ ಮರಗಳನ್ನು ಮಕ್ಕಳಂತೆ ಪೋಷಿಸಿ ಬೆಳಸಿ ರಾಜ್ಯ ಮಟ್ಟದಲ್ಲೆ ಗುರುತಿಸಿಕೊಂಡು ಬೇರೆಯವರಿಗೂ ಪ್ರೇರಣೆ ನೀಡಿದ ಮಹಿಳೆಯಾಗಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಅಹಿಂದ ಜನ ಜಾಗೃತಿ ವೇದಿಕೆ ನಗರಾಧ್ಯಕ್ಷ ಸೋಮಣ್ಣ, ಮೋದೂರು ಶಿವರಾಜ್, ಪ್ರಕಾಶ್, ಜಿಲ್ಲಾ ಸಂಘಟನಾ ಸಂಚಾಲಕ ನಂಜುಂಡ, ಮಹದೇವಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

ಖಾಸಗಿ ಬಸ್ ಏಜೆಂಟರ ಸಂಘದಿಂದ ರಾಜ್ಯೋತ್ಸವ ಆಚರಣೆ



ತಿ.ನರಸೀಪುರ: ಪ್ರತಿಯೊಬ್ಬ ಕನ್ನಡಿಗನು ನಾಡು, ನುಡಿ ಬಗ್ಗೆ ಅಭಿಮಾನ ಹೊಂದಿದಾಗ ಮಾತ್ರ ಕನ್ನಡ ಭಾಷೆ ಉಳಿಯಲು ಸಾಧ್ಯ ಎಂದು ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಪ್ರಭುಸ್ವಾಮಿ ಹೇಳಿದರು.

ಶ್ರೀ ವಿನಾಯಕ ಖಾಸಗಿ ಬಸ್ ಏಜೆಂಟರ ಸಂಘ ಪಟ್ಟಣದ ಖಾಸಗೀ ಬಸ್ ನಿಲ್ದಾಣದಲ್ಲಿ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಗಣ್ಯರೊಡಗೂಡಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. ದೇಶದಲ್ಲಿ ಕರ್ನಾಟಕ ರಾಜ್ಯ ಹಲವು ವೈವಿಧ್ಯತೆಗಳ ತವರೂರಾಗಿದ್ದು. ಇಂತಹ ನಾಡಿನಲ್ಲಿ ಜನಸಿದ ನಾವುಗಳು ಧನ್ಯರಾಗಿದ್ದು. ಪರಭಾಷೆ ಮೋಹಕ್ಕೆ ಒಳಗಾಗದೆ ನಮ್ಮ ಭಾಷೆ ಉಳಿವಿಗೆ ಮುಂದಾಗುವ ಮೂಲಕ ಕನ್ನಡಕ್ಕೆ ಪ್ರಾಧಾನ್ಯತೆ ನೀಡಬೇಕು ಎಂದರು.

ಸಂಘದ ಅಧ್ಯಕ್ಷ ತಿರುಮಕೂಡಲು ಶ್ರೀನಿವಾಸ್ ಮಾತನಾಡಿ ಈ ಹಿಂದೆ ಅಧ್ಯಕ್ಷರಾಗಿದ್ದ ದಿವಂಗತ ಪಿ.ಪುಟ್ಟರಾಜುರವರು ಆರಂಭಿಸಿದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಪ್ರತಿ ವರ್ಷ ಅಚ್ಚು ಕಟ್ಟಾಗಿ ನಡೆಸಿಕೊಂಡು ಬರುತ್ತಿದ್ದೇವೆ.ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಮ್ಮ ಸಂಘಕ್ಕೆ ರೂಪು ರೇಷೆಗಳನ್ನು ಸಿದ್ದಪಡಿಸಿಕೊಂಡು ಸಂಘದ ಬೆಳವಣಿಗೆಗೆ ಮುನ್ನಡಿ ಇಟ್ಟಿದ್ದೇವೆ ಎಂದರು.

ಈ ವೇಳೆ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ನಡೆಯಿತು. ಸಂಘದ ಗೌರವಾಧ್ಯಕ್ಷ ಹೋಟೆಲ್ ರಾಜಣ್ಣರವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಒಕ್ಕಲಿಗ ಸಮಾಜದ ಮುಖಂಡ ಪಿ.ಸ್ವಾಮಿನಾಥನ್, ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಕಗ್ಗಲೀಪುರ ರಾಜಣ್ಣ, ಶೃಂಗಾರ್ ಉಮೇಶ್, ಬಾರ್ ರಾಜು, ಸೋಮನಾಥಪುರ ಗಣೇಶ್, ಗುತ್ತಿಗೆದಾರ ಮಂಟೇಲಿಂಗಪ್ಪ, ನಂದಕುಮಾರ್, ಶಿವನಂಜಪ್ಪ, ಬಸ್ ಏಜೆಂಟರ ಸಂಘದ ಉಪಾಧ್ಯಕ್ಷ ಕೆಕುಮಾರ್, ಕಾರ್ಯದರ್ಶಿ ರಾಜಣ್ಣ ಖಜಾಂಚಿ ನಾಗಲಿಂಗು, ನಿರ್ದೇಶಕರಾದ ಜೆ.ರಮೇಶ್, ಕೆ.ಶಂಕರ್, ನಾಗರಾಜು, ಟಿ.ಸಿ.ಮಹದೇವಪ್ಪ, ಶೇಷಾದ್ರಿ, ಗಿರೀಶ್, ಹನುಮಂತ, ಮಾಧು, ಚೇತು, ಸುರೇಂದ್ರ, ಅಶೋಕ್ ಮತ್ತಿತರರಿದ್ದರು.

ರೈತರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ



ನಂಜನಗೂಡಿನಲ್ಲಿ ಬಿಜೆಪಿ ಕಾರ್ಯಕರ್ತರು ರೈತರ ಪರ ಪ್ರತಿಭಟನೆ ನಡೆಸಲಾಯಿತು.

ನಂಜನಗೂಡು, ನ.30– ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಯನ್ನು ಖಂಡಿಸಿ, ರೈತರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಶನಿವಾರ ಬಿಜೆಪಿ ಪಕ್ಷದ ವತಿಯಿಂದ ಕೃಷಿ ಇಲಾಖೆಯ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ ಕಳೆದ ಎರಡು ವರ್ಷಗಳಲ್ಲಿ ಮಾನವ ಪ್ರಾಣಿ ಸಂಘರ್ಷದಿಂದ 84 ಮಂದಿ ಸಾವನ್ನಪ್ಪಿದ್ದಾರೆ. ರೈತರಿಗೆ ಪರಿಹಾರ ನೀಡಿಲ್ಲ, ರಾಜ್ಯದಲ್ಲಿ ಅತಿಯಾದ ಮಳೆಯಿಂದ ಹಾನಿಗೀಡಾದವರಿಗೆ ಪರಿಹಾರ ದೊರಕಿಲ್ಲ, ಸಮರ್ಪಕ ವಿದ್ಯುತ್ ಪೂರೈಕೆಯಲ್ಲಿ ಹಾಗೂ ರಾಜ್ಯದ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ವಿಫಲವಾಗಿದೆ, ಜೊತೆಗೆ ಆಹಾರ ಧಾನ್ಯಗಳನ್ನು ಖರೀದಿಸಲು ಯೋಜಿಸಿರುವ ಕನಿಷ್ಠ ಬೆಂಬಲ ಬೆಲೆಯನ್ನು ನೀಡುವಲ್ಲಿ ಸರ್ಕಾರ ಸೋತಿದೆ ಆದ್ದರಿಂದ ಸರ್ಕಾರದ ಈ ರೈತ ವಿರೋಧಿ ನೀತಿಯನ್ನು ಖಂಡಿಸಿ, ಬಿಜೆಪಿ ಪಕ್ಷದ ವತಿಯಿಂದ ಪ್ರತಿಭಟನೆಯನ್ನು ನಡೆಸಲಾಗಿದೆ ಎಂದರು.

ಜಿಲ್ಲಾಧ್ಯಕ್ಷ ಕುಂಬರಹಳ್ಳಿ ಸುಬ್ಬಣ್ಣ ಮಾತನಾಡಿ ಕಾಂಗ್ರೆಸ್ ಸರ್ಕಾರ ರೈತ ಹೋರಾಟಗಾರರ ಮೇಲಿನ ಪ್ರಕರಣಗಳನ್ನು ವಾಪಸ್ಸು ಪಡೆಯುವುದಾಗಿ ಆಶ್ವಾಸನೆ ನೀಡಿತ್ತು, ಅಲ್ಲದೆ ಬೆಳೆ ಸಾಲದ ಮಿತಿಯನ್ನು 15 ಲಕ್ಷಕ್ಕೆ ಏರಿಸುವುದಾಗಿ ಹೇಳಿತ್ತು, ಭೂರಹಿತ ಕೃಷಿಕರ ಏಳಿಗೆಗಾಗಿ ನೇಗಿಲು ತುಡಿತ ಯೋಜನೆಯಡಿ 500 ಕೋಟಿ ಅನುದಾನ, ಮತ್ತು ಜಲಚೇತನ ಆಂದೋಲನ ಅಡಿಯಲ್ಲಿ ನೀರಾವರಿಗೆ ಶೇ100ರಷ್ಟು ಸಹಾಯಧನವನ್ನು ನೀಡುವುದು, ರಾಜ್ಯದಲ್ಲಿರುವ ನೀರಾವರಿ ಯೋಜನೆಗಳಿಗೆ ಐದು ವರ್ಷಗಳಲ್ಲಿ ಪ್ರತಿ ಬಜೆಟ್‌ನಲ್ಲಿ 30 ಸಾವಿರ ಕೋಟಿ ರೂ. ಹಣ ನೀಡುವುದಾಗಿ ಭರವಸೆ ನೀಡಿತ್ತು, ಆದರೆ ಈವರೆಗೂ ಯಾವುದೇ ಯೋಜನೆಗಳನ್ನು ಜಾರಿಗೊಳಿಸದೆ ರೈತರಿಗೆ ವಂಚಿಸಿದೆ, ಜೊತೆಗೆ ಹಲವಾರು ಸಮಸ್ಯೆಗಳಿಂದಾಗಿ ರೈತರು ಸಂಕಷ್ಟದಲ್ಲಿದ್ದಾರೆ ಆದ್ದರಿಂದ ಈ ಕೂಡಲೇ ರೈತರ ಸಮಸ್ಯೆಗಳಿಗೆ ರಾಜ್ಯ ಸರ್ಕಾರ ಸ್ಪಂದಿಸಬೇಕು ಇಲ್ಲವಾದಲ್ಲಿ ಉಗ್ರ ಪ್ರತಿಭಟನೆಯನ್ನು ರೂಪಿಸುವುದಾಗಿ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್. ಕೃಷ್ಣಪ್ಪಗೌಡ, ಜಿ.ಪಂ. ಮಾಜಿ ಸದಸ್ಯ ಎಸ್.ಎಂ. ಕೆಂಪಣ್ಣ, ರೈತ ಮೋರ್ಚ ಅಧ್ಯಕ್ಷ ಮಹೇಶ್ ಬಾಬು, ಬಿಜೆಪಿ ತಾಲೂಕು ಅಧ್ಯಕ್ಷ ಕೆಂಡಗಣ್ಣಪ್ಪ, ನಗರಾಧ್ಯಕ್ಷ ಸಿದ್ದರಾಜು, ಮುಖಂಡರಾದ ಶ್ರೀನಿವಾಸ ರೆಡ್ಡಿ, ಬಿ.ಎಸ್. ಮಹದೇವಪ್ಪ, ಬಾಲಚಂದ್ರ, ಸೇರಿದಂತೆ ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.

ಹುಲಿ ದಾಳಿಗೆ ಬಲಿಯಾದ ಕುಟುಂಬಸ್ಥರನ್ನು ಭೇಟಿ ಮಾಡಿದ ನಿಖಿಲ್

ಸಂತ್ರಸ್ತರಿಗೆ ಸಾಂತ್ವನ, ನಿಮ್ಮೊಡನೆ ನಾವಿದ್ದೇವೆ ಎಂದು ಭರವಸೆ



ಹುಲಿ ದಾಳಿಗೆ ಮೂವರು ಬಲಿಯಾಗಿ, ಓರ್ವ ಗಾಯಗೊಂಡ ಮನೆಗಳಿಗೆ ಭೇಟಿ ನೀಡಿದ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷರಾದ ನಿಖಿಲ್ ಕುಮಾರಸ್ವಾಮಿ ಅವರು ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ಸರಗೂರು, ನ.30– ಹುಲಿ ದಾಳಿಗೆ ಮೂವರು ಬಲಿಯಾಗಿ, ಓರ್ವ ಗಾಯಗೊಂಡ ಸಂತ್ರಸ್ತರ ಮನೆಗಳಿಗೆ ಭೇಟಿ ನೀಡಿದ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕುಟುಂಬದ ಸದಸ್ಯರಿಗೆ ಸಾಂತ್ವಾನ ಹೇಳಿ ನಿಮ್ಮೊಡನೆ ನಾವಿದ್ದೇವೆ ಎಂಬ ಭರವಸೆ ನೀಡಿದರು.

ತಾಲೂಕಿನ ಹಳೇ ಹೆಗ್ಗುಡಿಲು ಗ್ರಾಮಕ್ಕೆ ಭೇಟಿ ನೀಡಿದ ನಿಖಿಲ್ ಕುಮಾರಸ್ವಾಮಿ ದಂಡನಾಯಕ ಎಂಬುವರ ಮನೆಗೆ ಭೇಟಿ ನೀಡಿ, ಹೆಣ್ಣು ಮಕ್ಕಳ ಸಮಸ್ಯೆ ಆಲಿಸಿದರು. ನಂತರ ಕೂಡಗಿ ದೊಡ್ಡನಿಂಗಯ್ಯ ಅವರ ಮನೆಗೆ ಭೇಟಿ ನೀಡಿ, ದೊಡ್ಡನಿಂಗಯ್ಯ ಕುಟುಂಬದ ಸದಸ್ಯರೊಂದಿಗೆ ಕೆಲ ಹೊತ್ತು ಕಷ್ಟಗಳನ್ನು ಆಲಿಸಿದರು. ನಂತರ ಬಡಗಲಪುರ ಗ್ರಾಮದ ಮಾದೇಗೌಡ ಅವರ ಮನೆಗೆ ಭೇಟಿ ನೀಡಿ, ಆಸ್ಪತ್ರೆಯಿಂದ ಮನೆಗೆ ಬಂದಿರುವ ಮಾದೇಗೌಡ ಅವರನ್ನು ಮಾತನಾಡಿಸಿದರು. ಆರೋಗ್ಯವನ್ನು ವಿಚಾರಿಸಿದರು. ಬಳಿಕ ಮುಳ್ಳೂರಿನ ಬೆಣ್ಣೆಗೆರೆ ಗ್ರಾಮದ ರಾಜಶೇಖರ್ ಮನೆಗೆ ಭೇಟಿ ನೀಡಿ, ರಾಜಶೇಖರ್, ಮಕ್ಕಳೊಂದಿಗೆ ಅರಣ್ಯ ಇಲಾಖೆಯಿಂದಾಗುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿದರು.

ಬಳಿಕ ಮಾತನಾಡಿದ ಅವರು, ಮಾನವ–ಪ್ರಾಣಿಗಳ ಸಂಘರ್ಷಕ್ಕೆ ಸರಕಾರವೇ ನೇರ ಹೊಣೆ. ಸರಕಾರ ಸಮರ್ಪಕವಾಗಿ ಕೆಲಸ ಮಾಡಬೇಕು. ನೊಂದವರ ನೋವಿಗೆ ಸ್ಪಂದಿಸುವ ಕೆಲಸ ಮಾಡಬೇಕು. ಕುರ್ಚಿಗಾಗಿ ಕಿತ್ತಾಟ ಮಾಡುವ ಬದಲಿಗೆ ಜನರ ಬಳಿಗೆ ಬಂದು ಕೆಲಸ ಮಾಡಬೇಕು. ಸರಕಾರ ಇಲ್ಲಿಯತನಕ ಮಾಡಿರುವ ಕೆಲಸದ ಬಗ್ಗೆ ಪುನರ್ಮನನ ಮಾಡಿಕೊಳ್ಳಬೇಕು. ಎಂದು ಸರಕಾರದ ವಿರುದ್ಧ ಕಿಡಿಕಾರಿದರು.

ಇದಕ್ಕೂ ಮುನ್ನ ಪಟ್ಟಣದ ಪಡುವಲು ಬಿಡಗಲು ವಿರಕ್ತಮಠ, ಹಂಚೀಪುರ ಪಟ್ಟದ ಮಠಕ್ಕೆ ಭೇಟಿ ನೀಡಿ, ಮಹದೇವ ಸ್ವಾಮೀಜಿ, ಚನ್ನಬಸವ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಬಳಿಕ ಮುಂದಿನ ದಿನಗಳಲ್ಲಿ ಪಕ್ಷಕ್ಕೆ ಮಠ, ಮಾನ್ಯಗಳ ಸಹಕಾರ ತುಂಬಾ ಅಗತ್ಯವಾಗಿದೆ ಎಂದು ಕೋರಿದರು. ನಂತರ ಪಟ್ಟಣದಲ್ಲಿ ತೆರೆದ ವಾಹನದಲ್ಲಿ ರೋಡ್ ಶೋ ನಡೆಸಿ, ರಾಜ್ಯ ಸರಕಾರದ ವಿರುದ್ಧ ಹರಿಹಾಯ್ದರು. ತಾಲೂಕಿನ ಬಾಡಗ, ದೇವಲಾಪುರ, ಹಾದನೂರು ಗ್ರಾಮದ ಅಂಬೇಡ್ಕರ್ ಪ್ರತಿಮೆಗಳಿಗೆ ಮಾಲಾರ್ಪಣೆ ಸಲ್ಲಿಸಿ, ನಮಿಸಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್, ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ, ಜೆಡಿಎಸ್ ತಾಲೂಕು ಅಧ್ಯಕ್ಷ ಗೋಪಾಲಸ್ವಾಮಿ, ರಾಜೇಂದ್ರ, ಎಚ್.ಎನ್.ಸುಧೀರ್ ಹೆಗ್ಗನೂರು, ಹೂವಿನಕೊಳ ಮಹೇಂದ್ರ, ಮಾಜಿ ಮೇಯರ್ ರವಿಕುಮಾರ್, ಎಚ್.ಸಿ.ಲೇಖನ್‌ಕುಮಾರ್, ನರಸಿಂಹರಾಜು, ವಕೀಲ ಪ್ರಶಾಂತ್‌ಗೌಡ, ಎಚ್.ಹನು, ಪುರದಕಟ್ಟೆ ಬೆಟ್ಟನಾಯಕ, ರಮೇಶ್, ಶಿವರಾಜು, ಯುವ ಘಟಕದ ಅಧ್ಯಕ್ಷ ಗಿರೀಶ್, ಹಳೇ ಹೆಗ್ಗುಡಿಲು ನೀಲಕಂಠ, ಬಿ.ಮಟಕರೆ ಉದಯ್‌ಕುಮಾರ್, ಸೇರಿದಂತೆ ಸರಗೂರು ತಾಲೂಕಿನ ಜೆಡಿಎಸ್ ಕಾರ್ಯಕರ್ತರು ಇನ್ನಿತರರು ಹಾಜರಿದ್ದರು.

ಯಾಚೇನಹಳ್ಳಿಯಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ



ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ವೈ.ಎನ್.ಶಂಕರೇಗೌಡ ರವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ/ ಬನ್ನೂರು,ನ.30– ಭಾಷೆ, ಬದುಕು, ಸಾಹಿತ್ಯ, ಸಂಸ್ಕೃತಿ ಬೆಳವಣಿಗೆಯಲ್ಲಿ ಕನ್ನಡಕ್ಕೆ ತನ್ನದೇ ಆದ ಅಸ್ಮಿತೆ ಇದೆ ಎಂದು ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು ಹಾಗೂ ಯಾಚೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರೂ ಆದ ವೈ.ಎನ್.ಶಂಕರೇಗೌಡ ಹೇಳಿದರು.

ಯಾಚೇನಹಳ್ಳಿ ಗ್ರಾಮ ಪಂಚಾಯ್ತಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಹಾಲು ಉತ್ಪಾದಕರ ಸಹಕಾರ ಸಂಘ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿಯ ಸಂಯುಕ್ತಾಶ್ರಯದಲ್ಲಿ ಯಾಚೇನಹಳ್ಳಿ ಸಹಕಾರ ಸಂಘಗಳ ಆವರಣದಲ್ಲಿ ಆಯೋಜಿಸಲಾಗಿದ್ದ ಕನ್ನಡ ರಾಜ್ಯೋತ್ಸವ ಆಚರಣೆ ಮತ್ತು ಕಾವೇರಿ ಕಳಸ ಪೂಜೆ ಹಾಗು ಸನ್ಮಾನ ಸಮಾರಂಭ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಹಾಗು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಮುಡುಕನಪುರ ಹಲವಾರ ಮಠದ ಶ್ರೀ ಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ ಕನ್ನಡ ಶ್ರೀಮಂತ ಭಾಷೆಯಾಗಿದೆ. ಯುವಜನತೆ ನಾಡು, ನುಡಿ ಉಳಿಸಿ ಬೆಳೆಸುವ ಕಾರ್ಯದಲ್ಲಿ ನಿರತರಾಗಬೇಕು, ಭವ್ಯ ಇತಿಹಾಸ, ಪರಂಪರೆ ಹೊಂದಿರುವ ತಾಯಿ ಭಾಷೆ ಕನ್ನಡವನ್ನು ಎಂದೂ ಮರೆಯಬಾರದು. ಮಕ್ಕಳಲ್ಲಿ ಕನ್ನಡ ಭಾಷೆಯ ಬಗ್ಗೆ ಅಭಿಮಾನ ಮೂಡಿಸುವ ಕಾರ್ಯವನ್ನು ಮಾಡಬೇಕು. ಕನ್ನಡ ಭಾಷೆ ಇನ್ನಷ್ಟು ಎತ್ತರಕ್ಕೆ ಬೆಳೆಯಲು ನಮ್ಮ ಕೊಡುಗೆ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಯಾಚೇನಹಳ್ಳಿ ರಾಮಕೃಷ್ಣ ಸೇವಾ ಕೇಂದ್ರದ ಶ್ರೀ ನಾದಾನಂದನಾಥ ಸ್ವಾಮಿ ಆಶೀರ್ವಚನ ನೀಡಿದರು. ಸಾಹಿತಿ ಮೂನಾ ರಮೇಶ್ ಮುಖ್ಯ ಭಾಷಣ ಮಾಡಿದರು. ಪಶುಪಾಲನಾ ಇಲಾಖೆಯ ಉಪ ನಿರ್ದೇಶಕ ವೈ.ಡಿ.ರಾಜಣ್ಣ, ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕ ಎಸ್. ಶ್ರೀಧರ್, ಬೆಂಗಳೂರು ವಿವಿ ಪುರಂ ಸಂಜೆ ಕಲಾ ಮತ್ತು ವಾಣಿಜ್ಯ ಕಾಲೇಜಿನ, ಪ್ರಾಂಶುಪಾಲ ಡಾ.ವೈ.ಜಿ.ಲಕ್ಷ್ಮಣ, ಕೆ.ಕೆ.ಸೋಮಶೇಖರ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಯಾಚೇನಹಳ್ಳಿ ಗ್ರಾ.ಪಂ.ಅಧ್ಯಕ್ಷ ವೈ.ಸಿ.ಶಿವಕುಮಾರ್, ಡೇರಿ ಅಧ್ಯಕ್ಷ ವೈ.ಕೆ.ಉಮೇಶ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ವೈ.ಎಂ.ನಾಗರಾಜು, ವೈ.ಪುಟ್ಟರಾಜು, ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯ ನಿರ್ವಹಣಾಧಿಕಾರಿ ಕ್ಯಾತೇಗೌಡ ಮುಖಂಡರು ಹಾಜರಿದ್ದರು.

ಕನ್ನಡಿಗರು ಇಂಗ್ಲಿಷ್ ವಿರೋಧಿಗಳಲ್ಲ

ಗಮಕ ಕಲಾ ಪರಿಷತ್ ಜಿಲ್ಲಾಧ್ಯಕ್ಷ ಡಾ.ಕೃ.ಪಾ.ಮಂಜುನಾಥ್ ಪ್ರತಿಪಾದನೆ



ಶಾಲಾ ವಾರ್ಷಿಕೋತ್ಸವ ಹಾಗೂ ಕನ್ನಡ ರಾಜ್ಯೋತ್ಸವವನ್ನು, ಗಮಕ ವ್ಯಾಖ್ಯಾತೃ ಉಪನ್ಯಾಸಕ ಡಾ. ಕೃ.ಪಾ.ಮಂಜುನಾಥ್ ಉದ್ಘಾಟಿಸಿದರು.

ತಿ.ನರಸೀಪುರ,ನ.30–ಕನ್ನಡಿಗರು ಜ್ಞಾನಾರ್ಜನೆ ಮತ್ತು ಉದ್ಯೋಗಕ್ಕಾಗಿ ಇಂಗ್ಲಿಷ್ ಅನ್ನು ವ್ಯವಹಾರಿಕ ಸಂವಹನ ಭಾಷೆಯಾಗಿ ಕಲಿತು, ನಾಡಿನ ನೆಲದ ಅಸ್ಮಿತೆಯಾಗಿರುವ ಕನ್ನಡವನ್ನು ನಿತ್ಯವು ಬಳಸಬೇಕು ಎಂದು ಕರ್ನಾಟಕ ಗಮಕ ಕಲಾ ಪರಿಷತ್ ಜಿಲ್ಲಾಧ್ಯಕ್ಷ ಹಾಗೂ ಗಮಕ ವ್ಯಾಖ್ಯಾತೃ ಉಪನ್ಯಾಸಕ ಡಾ.ಕೃ.ಪಾ.ಮಂಜುನಾಥ್ ಕರೆ ನೀಡಿದರು.

ತಾಲೂಕಿನ ಸೋಮನಾಥಪುರ– ಕುಳ್ಳನಕೊಪ್ಪಲು ಗ್ರಾಮದ ಬಳಿಯಿರುವ ಆರೋಹಣ ಸೆಂಟ್ರಲ್ ಸ್ಕೂಲ್ ಆವರಣದಲ್ಲಿ ಶನಿವಾರ ಸಂಜೆ ಆಯೋಜಿಸಿದ್ದ ಆರೋಹಿ ಶಾಲಾ ವಾರ್ಷಿಕೋತ್ಸವ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಹೊಂಬಾಳೆ ಬಿಡಿಸಿ ಉದ್ಘಾಟಿಸಿ ಮಾತನಾಡಿದರು.


ಕನ್ನಡಿಗರು ಇಂಗ್ಲಿಷ್ ವಿರೋಧಿಗಳಲ್ಲ. ಇಂಗ್ಲಿಷ್ ಕಲಿಕೆಯನ್ನು ತಡೆದಿಲ್ಲ. ಪರಭಾಷೆಗಳ ಆಕ್ರಮಣದಿಂದ ನಾಡಿನ ನುಡಿಯ ಅಸ್ಮಿತೆಗೆ ಧಕ್ಕೆಯಾದಾಗ ಕನ್ನಡದ ಧ್ವನಿಯಾಗುತ್ತಾರೆ. ಕನ್ನಡ ಪ್ರಾಬಲ್ಯ ಉಳಿಸಿಕೊಂಡಿರುವ ಗ್ರಾಮೀಣ ಪ್ರದೇಶದಲ್ಲಿ ಸಿಬಿಎಸ್‌ಸಿ ಪಠ್ಯಕ್ರಮದ ಶಿಕ್ಷಣ ಸಂಸ್ಥೆಯನ್ನು ತೆರೆದು ಹಳ್ಳಿಗಾಡಿನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿರುವುದು ಶ್ಲಾಘನೀಯ. ಕನ್ನಡ ನಾಡಿನ ಮಕ್ಕಳಲ್ಲಿ ಮಾತೃಭಾಷೆ ಮೇಲಿನ ಅಭಿಮಾನ ಬೆಳೆಯಲು ಕನ್ನಡ ಕಲಿಕೆ, ನಿತ್ಯ ಓದುವುದನ್ನು ರೂಢಿಸಿಕೊಳ್ಳಬೇಕೆಂದು ಡಾ.ಕೃ.ಪಾ. ಮಂಜುನಾಥ್ ಸಲಹೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಸಿ.ಶಿವಮೂರ್ತಿ ಮಾತನಾಡಿ, ಅಂತರಾಷ್ಟ್ರೀಯ ಹಾಗೂ ರಾಜ್ಯ – ಅಂತರಾಜ್ಯ ಮಟ್ಟದ ಕ್ರೀಡೆಗಳಲ್ಲಿ ಸಾಧನೆ ಮಾಡುತ್ತಿರುವ ತಾಲೂಕಿನ ವಿದ್ಯಾರ್ಥಿಗಳು ಶಿಕ್ಷಣ ಇಲಾಖೆಗೆ ಕೀರ್ತಿಯನ್ನು ತಂದು ಕೊಡುತ್ತಿದ್ದಾರೆ ಎಂದು ಹೇಳಲು ನಮಗೆ ಅತೀವ ಹೆಮ್ಮೆಯಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಶಾಲೆಯ ಶೈಕ್ಷಣಿಕ ಪ್ರಗತಿ ವರದಿಯನ್ನು ಮಂಡಿಸಿ, ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು. ವಾರ್ಷಿಕೋತ್ಸವ ಪೂರ್ವದಲ್ಲಿ ನಡೆದ ವಿವಿಧ ಕ್ರೀಡಾ ಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಶಾಲೆಯ ಅಧ್ಯಕ್ಷ ವೈ.ಹೆಚ್.ಹನುಮಂತೇಗೌಡ ಶಿಕ್ಷಣ ಸಂಸ್ಥೆಯ ಆರಂಭದ ಹಿನ್ನೆಲೆ ಕುರಿತು ಹಾಗೂ ಉದ್ದೇಶಗಳ ಬಗ್ಗೆ ಕಾರ್ಯದರ್ಶಿ ಎನ್.ಎಂ. ರಾಮಚಂದ್ರ ಮಾತನಾಡಿದರು. ಉಪಾಧ್ಯಕ್ಷ ಬಿ.ಎನ್.ಸುರೇಶ್, ಗೌರವ ಕಾರ್ಯದರ್ಶಿ ಬಿ.ಎಸ್.ಯೋಗೇಂದ್ರ, ಖಜಾಂಚಿ ಮಾಣಿಕ್ ಚಂದ್, ಪ್ರಾಂಶುಪಾಲೆ ವಿಮಲಾ, ಟ್ರಸ್ಟಿಗಳಾದ ವೆಂಕಟೇಶ್ ಪ್ರಸಾದ್, ಅರವಿಂದ್, ಬಸವನಹಳ್ಳಿ ವೆಂಕಟೇಶ್, ದೀಪಕ್ ಕುಮಾರ್ ಜೈನ್ ಸೇರಿದಂತೆ ಸಹ ಶಿಕ್ಷಕರು, ಸಿಬ್ಬಂದಿಗಳು, ಪೋಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

ಅರಣ್ಯ ಹಕ್ಕು ನೀಡುವಂತೆ ಆಗ್ರಹಿಸಿ ಪ್ರತಿಭಟನೆ



ಹುಣಸೂರು,ನ30– ತಾಲ್ಲೂಕಿನ ಕೊಳವಿಗೆ ಹಾಡಿಯ ಪೂರ್ವಜರ ಗುಳ್ಳೆಮೆಳೆ ಹಾಡಿಯ ಚಾಮಳ್ಳಿ ಒಡೆಯನ ಕಾಡಿಗೆ ಕೊಳವಿಗೆ ಹಾಡಿ ಅರಣ್ಯ ಹಕ್ಕು ಸಮಿತಿ ಸದಸ್ಯರು ಪ್ರವೇಶಿಸಿ ಚಾಮಳ್ಳಿ ಒಡೆಯನಿಗೆ ಪೂಜೆ ಸಲ್ಲಿಸಿ ಅರಣ್ಯ ಹಕ್ಕು ಪೋಸ್ಟರ್‌ಗಳನ್ನು, ಹೈಕೋರ್ಟ್ ಆದೇಶದ ಪ್ರತಿಯನ್ನು ಹಾಗೂ ಅಸ್ನಾದಿ ವರದಿ ಪ್ರತಿಯನ್ನು ಪ್ರದರ್ಶಿಸಿ ಅರಣ್ಯ ಹಕ್ಕು ಕೊಡದಿರುವ, ಹೈ ಕೋರ್ಟ್ ಆದೇಶ ಜಾರಿಗೊಳಿಸದೆ ಕಾಲಾಹರಣ ಮಾಡುತ್ತಿರುವ ಸರ್ಕಾರದ ಧೋರಣೆಯನ್ನು ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಕೊಳವಿಗೆ, ಭಾರತವಾಡಿ, ತೆಕ್ಕಲಹಾಡಿ ಅರಣ್ಯ ಹಕ್ಕು ಸಮಿತಿಗಳ ಪ್ರಮುಖರು, ಬುಡಕಟ್ಟು ಕೃಷಿಕರ ಸಂಘದ ಪದಾಧಿಕಾರಿಗಳು, ಕಾಡಿಗೆ ಪ್ರವೇಶಿಸಿ ಚಾಮಳ್ಳಿ ಒಡೆಯನ ಸನ್ನಿದಿಯಲ್ಲಿ ಪೂಜೆಸಲ್ಲಿಸಿ, ನಮ್ಮಕಾಡು ನಮ್ಮಹಕ್ಕು, ನಮ್ಮ ಪೂರ್ವಜರು ಬಾಳಿದ ಅರಣ್ಯಗಳಲ್ಲಿ ನಮ್ಮನ್ನು ಬಾಳಲು ಬಿಡಿ ಎಂದು ಘೋಷಣೆ ಕೂಗಿ, ಮುಖ್ಯಮಂತ್ರಿಗಳಿಗೆ, ವನ್ಯ ಜೀವಿ ವಲಯ ಅರಣ್ಯ ಅಧಿಕಾರಿಗಳಿಗೆ ನೀಡಿರುವ ಮನವಿಯನ್ನು ಸಭೆಯಲ್ಲಿ ಓದಿ, ಸರ್ಕಾರ ಕೂಡಲೇ ಅರಣ್ಯ ಹಕ್ಕು ನೀಡಬೇಕು, ಹೈ ಕೋರ್ಟ್ ಆದೇಶದನ್ವಯ, ಅಸ್ನಾದಿ ವರದಿ ಶಿಫಾರಸ್ಸಿನಂತೆ 3418 ಕುಟುಂಬಗಳಿಗೆ ಪುನರ್ವಸತಿ ನೀಡಬೇಕೆಂದು ಆಗ್ರಹಿಸಿದರು.

ಅರಣ್ಯ ಹಕ್ಕಿನ ಕಾಯ್ದೆ ಅನ್ವಯ ಎಲ್ಲಾ ಹಾಡಿಗಳಿಂದ ಅರ್ಜಿ ಸಲ್ಲಿಸಿರುವ ಕುಟುಂಬಗಳಿಗೆ ವೈಯಕ್ತಿಕ ಅರಣ್ಯಭೂಮಿ ಹಕ್ಕು, ಸಾಮೂಹಿಕ ಅರಣ್ಯಹಕ್ಕು ಹಾಗೂ ನೆಲಸುವ ಹಕ್ಕುಗಳನ್ನು ಮಾನ್ಯ ಮಾಡಿ ಹಕ್ಕುಪತ್ರ ನೀಡಲು ಆಗ್ರಹಿಸಿದರು. ಅಲ್ಲದೆ ಜನ ಜಾನುವಾರು ಕಾಡು ಪ್ರವೇಶಿಸಿ ಜಾನುವಾರುಗಳನ್ನು ಕಾಡಲ್ಲಿ ಮೇಯಲು ಬಿಟ್ಟು, ಜನರು ಒಡೆಯನಿಗೆ ಪೂಜೆಸಲ್ಲಿಸಿ ಘೋಷಣೆ ಕೂಗಿ ನಂಗ ಅಜ್ಜಯ್ಯ, ಒಡೆಯನ ಮೂಲಕ ಸರ್ಕಾರಕ್ಕೆ ಕೂಗಿ ಹೇಳುತ್ತಿದ್ದೇವೆ. ಸರ್ಕಾರ ಗಮನ ಹರಿಸಬೇಕು ಎಂದು ಆಗ್ರಹಿಸಿದರು.

ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ, ಅರಣ್ಯ ಅಧಿಕಾರಿಗಳಿಗೆ ಸಲ್ಲಿಸಿದ ಮನವಿ ಪತ್ರವನ್ನು ಜಯಪ್ಪ ಓದಿದರು. ಎಲ್ಲರೂ ಒಡೆಯನ ಸನ್ನಿದಿಯಲ್ಲಿ ಪೂಜೆ ನಂತರ ಪ್ರಸಾದ ಸೇವಿಸಿ ಕಾಡಿನಿಂದ ನಿರ್ಗಮಿಸಿದರು.

ಆದಿವಾಸಿ ಮಹಿಳಾ ಸಂಘದ ಅಧ್ಯಕ್ಷೆ ಲಕ್ಷ್ಮಿ, ಶಿವಣ್ಣ, ಗಣೇಶ, ಕುಮಾರ, ಕುಶಾಲಪ್ಪ, ಮರಿಯಯ್ಯ, ರಮೇಶ್, ರತಿ, ಅರ್ಚನ, ರೇಷ್ಮ, ನಿಂಗರಾಜಪ್ಪ ಇತರರು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ

ಮೈಸೂರಲ್ಲಿ ರಾಷ್ಟ್ರಬಂಧು ರಾಜೀವ್ ದೀಕ್ಷಿತ್ ಅವರ ಸ್ಮರಣಾರ್ಥ ಸ್ವದೇಶಿ ದಿನಾಚರಣೆ

ಜನ ಧ್ವನಿಯಲ್ಲಿ ಗಟ್ಟಿತನವಿದ್ದರೆ ಯಾವುದೇ ಸಮಸ್ಯೆಗೆ ಪರಿಹಾರ ದೊರೆಯಲಿದೆ

ರಾಜಕೀಯ ವಿಶ್ಲೇಷಕ ಪುಷ್ಪೇಂದ್ರ ಕುಲಶ್ರೇಷ್ಠ ಅಭಿಮತ



ಸ್ವದೇಶಿ ದಿನಾಚರಣೆಯಲ್ಲಿ ರಾಜಕೀಯ ವಿಶ್ಲೇಷಕ ಪುಷ್ಪೇಂದ್ರ ಕುಲಶ್ರೇಷ್ಠ ಮಾತನಾಡಿದರು.

ಮೈಸೂರು,ನ.30(ಪಿಎಂ)– ಜನ ಧ್ವನಿಯಲ್ಲಿ ಒಗ್ಗಟ್ಟು ಮತ್ತು ಗಟ್ಟಿತನವಿದ್ದರೆ ದೇಶದ ವರ್ತಮಾನದ ಯಾವುದೇ ಸಮಸ್ಯೆಗಳಿಗೆ ಪರಿಹಾರ ದೊರೆಯಲಿದೆ ಎಂದು ಹಿರಿಯ ಪತ್ರಕರ್ತ ಹಾಗೂ ರಾಜಕೀಯ ವಿಶ್ಲೇಷಕ ಪುಷ್ಪೇಂದ್ರ ಕುಲಶ್ರೇಷ್ಠ ಹೇಳಿದರು.

ಮೈಸೂರಿನ ಜಯಲಕ್ಷ್ಮೀಪುರಂನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಆಜಾದಿ ಬಚಾವೋ ಆಂದೋಲನ ಮೈಸೂರು ಘಟಕದ ವತಿಯಿಂದ ಸ್ವದೇಶಿ ಆಂದೋಲನದ ಹರಿಕಾರ ರಾಷ್ಟ್ರಬಂಧು ರಾಜೀವ್ ದೀಕ್ಷಿತ್ ಅವರ ಸ್ಮರಣಾರ್ಥ ಭಾನುವಾರ ಹಮ್ಮಿಕೊಂಡಿದ್ದ ಸ್ವದೇಶಿ ದಿನಾಚರಣೆಯಲ್ಲಿ 'ಭಾರತ ದೇಶದ ವರ್ತಮಾನದ ಸಮಸ್ಯೆಗಳು ಹಾಗೂ ಪರಿಹಾರ' ಕುರಿತು ಅವರು ಹಿಂದಿ ಭಾಷೆಯಲ್ಲಿ ಸುದೀರ್ಘವಾಗಿ ಮಾತನಾಡಿದರು.

ಯಾವುದೇ ನ್ಯಾಯಪರ ಹೋರಾಟಕ್ಕೆ ಸಂಬಂಧಿಸಿದಂತೆ ದೇಶದ ಜನತೆಯಲ್ಲಿ ಗಟ್ಟಿದ್ವನಿ ಇದ್ದರೆ ಅವರ ಎದುರು ಯಾವುದೇ ವ್ಯವಸ್ಥೆ ಹಾಗೂ ಸರ್ಕಾರಗಳು ತಲೆಬಾಗಲೇಬೇಕು. ಸಮಾಜದ ಶಕ್ತಿ ಮುಂದೆ ಸರ್ಕಾರದ ಶಕ್ತಿ ತುಂಬಾ ಚಿಕ್ಕದು. ಜನರು ಜಾಗೃತರಾದರೆ ರಾಜಕೀಯ, ಶಿಕ್ಷಣ ಸೇರಿದಂತೆ ಯಾವುದೇ ಕ್ಷೇತ್ರಗಳಲ್ಲಿ ಉದ್ಭವಿಸುವ ಸಮಸ್ಯೆಗಳಿಗೆ ಪರಿಹಾರ ಲಭಿಸಲಿದೆ ಎಂದರು.

ನಾವು ಮಂಡಿಸುವ ಯಾವುದೇ ವಿಷಯವಾದರೂ ಸರಿಯಾದ ದಾಖಲೆ ಇರಬೇಕು. ಅಂಕಿ ಅಂಶಗಳು ನಿಖರವಾಗಿರಬೇಕು. ಆದರೆ ಯಾವುದೇ ನಿಖರ ದಾಖಲೆಗಳು ಇಲ್ಲದೆ ಸುಮ್ಮನೆ ಮಾತನಾಡುವುದು ಇಂದು ಹೆಚ್ಚಾಗುತ್ತಿದೆ. ಯಾರು ಏನೇ ಹೇಳಿದರೂ ಅದನ್ನು ಪರಿಶೀಲಿಸಬೇಕು. ಸತ್ಯಾಸತ್ಯಗಳನ್ನು ಅವಲೋಕಿಸಬೇಕು. ದಾಖಲೆ ಸಮೇತ, ನಮ್ಮ ಮಾಹಿತಿ ವಸ್ತುನಿಷ್ಠವಾಗಿದ್ದರೆ ಯಾರೇ ವಿಷಯವನ್ನು ಪ್ರಸ್ತಾಪಿಸಿದರೂ ಕೇಳುತ್ತಾರೆ. ಅಲ್ಲದೇ ರಾಜಕಾರಣಿ ಸೇರಿದಂತೆ ಯಾರೇ ಆಗಿರಲಿ ಹೇಳಿದೆಲ್ಲವನ್ನು ಒಪ್ಪಬಾರದು. ಪರಿಶೀಲನೆ ಮಾಡಬೇಕು ಎಂದು ಸಲಹೆ ನೀಡಿದರು.

ಸನಾತನ ಧರ್ಮಕ್ಕೆ ಸಂಬಂಧಿಸಿದ ಯಾವುದೇ ಕಾರ್ಯಕ್ರಮಗಳಲ್ಲಿ ರಾಜಕೀಯ ವ್ಯಕ್ತಿಗಳನ್ನು ಆಹ್ವಾನಿಸಿದರೆ ಪ್ರಯೋಜನವಿಲ್ಲ. ಏಕೆಂದರೆ ಅವರು ರಾಜಕೀಯ ಅಜೆಂಡಾ ಇಟ್ಟುಕೊಂಡು ಮಾತನಾಡುತ್ತಾರೆಯೇ ಹೊರತು, ಧರ್ಮ ಹಾಗೂ ದೇಶದ ಹಿತಾಸಕ್ತಿ ಬಹುತೇಕರಲ್ಲಿ ಇರುವುದಿಲ್ಲ. ದೇಶ ಹಾಗೂ ಧರ್ಮದ ಅಜೆಂಡವೇ ಬೇರೆ ಆಗಿರುವ ಕಾರಣ ರಾಜಕಾರಣಿಗಳನ್ನು ಕರೆಸುವುದರಿಂದ ಯಾವುದೇ ಉಪಯೋಗವಿಲ್ಲ ಎಂದರು.

ದೇಶ ಮುನ್ನಡೆಯಬೇಕಾದರೆ ಜಾತಿ, ಕುಲ ಲೆಕ್ಕಕ್ಕಿಲ್ಲ ಎಂಬ ಭಾವ ಇದೀಗ ಮೂಡುತ್ತಿದೆ. ದೇಶ ಕಟ್ಟುವ ಸಂಕಲ್ಪ ಬಂದಿದೆ. ಅಹಿಂಸಾ ಪರಮೋಧರ್ಮ ಮಾತ್ರ ಹೇಳುತ್ತಿದ್ದೇವೆ. ಆದರೆ ಧರ್ಮದ ರಕ್ಷಣೆಗೆ ಉಲ್ಲೇಖಿಸಿರುವ ಅದರ ಮುಂದಿನ ಸಾಲನ್ನು ಮರೆಯುತ್ತಿದ್ದೇವೆ. ಸ್ವಾತಂತ್ರ್ಯ ಬಂದು 70 ವರ್ಷಗಳು ಕಳೆದ ಬಳಿಕ ಈಗ ಸಂಸತ್‌ನಲ್ಲಿ ವಂದೇ ಮಾತರಂ ಗೀತೆಯನ್ನು ಪೂರ್ಣ ಪ್ರಮಾಣದಲ್ಲಿ ಹೇಳುವಂತಾಗಿದೆ. ಸಾವರ್ಕರ್, ಸುಭಾಷ್‌ಚಂದ್ರ ಬೋಸ್ ಮೊದಲಾದ ಸ್ವಾತಂತ್ರ್ಯ ಸೇನಾನಿಗಳ ತ್ಯಾಗದ ಬಗ್ಗೆ ವಿದ್ಯಾರ್ಥಿ ಸಮುದಾಯಕ್ಕೆ ತಿಳಿಸಿಕೊಡುವ ಪ್ರಯತ್ನ ಸಮರ್ಪಕವಾಗಿ ಆಗಬೇಕು ಎಂದು ತಿಳಿಸಿದರು.

ಸಂಘಟನೆಯ ಹಿರಿಯ ಕಾರ್ಯಕರ್ತ ಪ್ರಸನ್ನ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಭೋಪಾಲ್ ವಿಷ ಅನಿಲ ಸೋರಿಕೆಯ ದುರಂತದ ಬಳಿಕ ಸಂತ್ರಸ್ತರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಅಜಾದಿ ಬಚಾವ್ ಆಂದೋಲನ ಆರಂಭಗೊಂಡಿತು. ರಾಜೀವ್ ದೀಕ್ಷಿತರು ಆಂದೋಲನದ ನೇತೃತ್ವ ವಹಿಸಿಕೊಂಡರು. ಅವರ ಹೆಸರು ಕೇಳಿದರೆ ಬಹುರಾಷ್ಟ್ರೀಯ ಕಂಪನಿಗಳು ನಡುಗುವಂತೆ ಚಳವಳಿ ರೂಪುಗೊಂಡಿತು ಎಂದು ಹೇಳಿದರು.

ಆಜಾದಿ ಬಚಾವೋ ಆಂದೋಲನ ಮೈಸೂರು ಸಂಚಾಲಕ ಸುಧೀಂದ್ರ ಮತ್ತಿತರರು ಹಾಜರಿದ್ದರು. ವಿಜಯವಿಠ್ಠಲ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಆರ್.ವಾಸುದೇವ ಭಟ್, ಆದಿತ್ಯ ಅಧಿಕಾರಿ ಆಸ್ಪತ್ರೆಯ ಡಾ.ಚಂದ್ರಶೇಖರ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ


ಪದ್ಮ	(ದೂ: 2521923)
ಆಂಧ್ರ ಕಿಂಗ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತೇರೇ ಇಷ್ಕ್ ಮೇ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ನಾಯಿ ಇದೆ ಎಚ್ಚರಿಕೆ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಧೇಯ (ಕ)	4 ಪ್ರದರ್ಶನಗಳು
ರಾಜಕಮಲ್	
ತೇರೇ ಇಷ್ಕ್ ಮೇ (ತ)	4 ಪ್ರದರ್ಶನಗಳು
ಸಂಗಂ	
ಓಎಲ್‌ಸಿ (ಕ)	4 ಪ್ರದರ್ಶನಗಳು
ಲಿಡೋ	
ಫ್ಲರ್ಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ನಾಯಿ ಇದೆ ಎಚ್ಚರಿಕೆ (ಕ)	4 ಪ್ರದರ್ಶನಗಳು

ಹುಟ್ಟು ಹಬ್ಬದ ಶುಭ ಹಾರೈಕೆ



ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಸಿ.ಮಹದೇಶ್ ಅವರು ಶ್ರೀರಾಂಪುರ ಬಳಿ ಇರುವ ನವಚೇತನ ಬಸವೇಶ್ವರ ಟ್ರಸ್ಟ್ ವಿಶೇಷ ಮಕ್ಕಳ ಶಾಲೆಯಲ್ಲಿ, ವಿಶೇಷ ಮಕ್ಕಳ ಜೊತೆ ಕೇಕ್ ಕತ್ತರಿಸಿ, ಮಕ್ಕಳಿಗೆ ಸಿಹಿ ಹಂಚುವ ಮೂಲಕ ಸರಳವಾಗಿ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡರು. ನಂತರ ಮಾತನಾಡಿದ ಅವರು ನವಚೇತನ ಬಸವೇಶ್ವರ ವಿಶೇಷ ಮಕ್ಕಳ ಶಾಲೆಗೆ ನೂತನ ವ್ಯಾನ್ ಖರೀದಿಸಿ ಹಸ್ತಾಂತರಿಸಲಾಗುವುದು ಎಂದು ಭರವಸೆ ನೀಡಿದರು. ಟ್ರಸ್ಟ್ ಅಧ್ಯಕ್ಷ ಮರೀಗೌಡ ಮತ್ತು ಸಮಾಜ ಸೇವಕರಾದ ಎಸ್.ಶ್ರೀಕಾಂತ್ ಅವರು ಸಿ.ಮಹದೇಶ್ ಅವರನ್ನು ಸನ್ಮಾನಿಸಿ ಶುಭ ಹಾರೈಸಿದರು. ಶಾಲೆಯ ಶಿಕ್ಷಕರು ಸೇರಿದಂತೆ ಮತ್ತಿತರರಿದ್ದರು.

ಶಾಸಕ ಜಿ.ಟಿ.ದೇವೇಗೌಡರಿಗೆ ಹುಟ್ಟು ಹಬ್ಬದ ಅಭಿನಂಧನೆ



ಮೈಸೂರು ತಾಲೂಕು ದೊಡ್ಡಮಾರಗೌಡನಹಳ್ಳಿ ಗ್ರಾಮದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ 75ನೇ ವರ್ಷದ ಹುಟ್ಟುಹಬ್ಬವನ್ನು ಅವರ ಬೆಂಬಲಿಗರು ಮತ್ತು ಡಿಎಂಜಿ ಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಮುಖಂಡರು, ಕಾರ್ಯಕರ್ತರು ಶಾಸಕರಿಗೆ ಬೃಹತ್ ಗಾತ್ರದ ಹೂವಿನ ಹಾರ ಹಾಕಿ, ಶಾಲು ಹೊದಿಸಿ, ಪೇಟ ತೊಡಿಸಿ, ಸ್ಮರಣಿಕೆ ನೀಡುವ ಮೂಲಕ ಸಡಗರದಿಂದ ಹುಟ್ಟುಹಬ್ಬ ಆಚರಿಸಿದರು. ಗ್ರಾಪಂ ಅಧ್ಯಕ್ಷೆ ಲತಾ ಪ್ರಸನ್ನಚಾರಿ, ಹಾಲಿ ಸದಸ್ಯರುಗಳು, ಮಾಜಿ ಅಧ್ಯಕ್ಷರುಗಳು, ಮಾಜಿ ಉಪಾಧ್ಯಕ್ಷರುಗಳು, ಪಂಚಾಯಿತಿ ವ್ಯಾಪ್ತಿ ಮುಖಂಡರು, ದೊಡ್ಡಮಾರಗೌಡನಹಳ್ಳಿ ಗ್ರಾಮಸ್ಥರು ಶಾಸಕರ ಹುಟ್ಟುಹಬ್ಬ ಆಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಡಿ.13ರಂದು ಮೆಗಾ ಲೋಕ್ ಅದಾಲತ್

ಮೈಸೂರು,ನ.30– ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಕರ್ನಾಟಕ ರಾಜ್ಯದಾದ್ಯಂತ ನಡೆಯಲಿರುವ ರಾಷ್ಟ್ರೀಯ ಮೆಗಾ ಲೋಕ್ ಅದಾಲತ್ ಅನ್ನು ಡಿ.13ರಂದು ಆಯೋಜಿಸಲಾಗಿದ್ದು, ಸಾರ್ವಜನಿಕರು ತಮ್ಮ ವ್ಯಾಜ್ಯ ಪೂರ್ವ ಹಾಗೂ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ತಕ್ಷಣ ಪರಿಹಾರ ಪಡೆದುಕೊಳ್ಳಲು ಇದೊಂದು ಸುವರ್ಣಾವಕಾಶವಾಗಿದೆ.

ಲೋಕ್ ಅದಾಲತ್‌ನಲ್ಲಿ ರಾಜಿಯಾಗಬಲ್ಲ ಅಪರಾಧಿ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ಉದ್ಯೋಗದಲ್ಲಿ ಪುನರ್ ಸ್ಥಾಪಿಸಲ್ಪಡುವ ಪ್ರಕರಣಗಳು, ಕೈಗಾರಿಕಾ ಕಾರ್ಮಿಕರ ವೇತನಕ್ಕೆ ಸಂಬಂಧಿಸಿದ ಕ್ಲೇಮುಗಳು, ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿನ ಪ್ರಕರಣಗಳು (Consumer Disputes), ಖಾಯಂ ಜನತಾ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು, ಚೆಕ್ಕು ಅಮಾನ್ಯದ ಪ್ರಕರಣಗಳು, ಮೋಟಾರು ಅಪಘಾತ ಪರಿಹಾರ ನ್ಯಾಯಾಧೀಕರಣದ ಪ್ರಕರಣಗಳು, ಕಾರ್ಮಿಕ ವಿವಾದಗಳು, ವಿದ್ಯುತ್ ಹಾಗೂ ನೀರಿನ ಶುಲ್ಕಗಳು, ಭೂ ಸ್ವಾಧೀನ ಪ್ರಕರಣಗಳು, ವೇತನ ಮತ್ತು ಭತ್ಯೆಗಳಿಗೆ ಸಂಬಂಧಿಸಿದ ಸೇವಾ ಪಿಂಚಣಿ ಪ್ರಕರಣಗಳು, ಸಾರ್ವಜನಿಕ ಉಪಯುಕ್ತತೆ ಸೇವೆಗಳ ಸಂಬಂಧಿಸಿದ ಪ್ರಕರಣಗಳು, ರಾಜಿಯಾಗಬಲ್ಲ ಸಿವಿಲ್ ಮತ್ತು ಇತರೆ ಪ್ರಕರಣಗಳು, ವೈವಾಹಿಕ, ಕುಟುಂಬ ನ್ಯಾಯಾಲಯದ ಪ್ರಕರಣಗಳು (ವಿಚ್ಛೇದನೆಯನ್ನು ಹೊರತುಪಡಿಸಿ). ಈ ಪ್ರಕರಣಗಳನ್ನು ರಾಜೀ ಮೂಲಕ ಇತ್ಯರ್ಥಪಡಿಸಿ ಕೊಳ್ಳಬಹುದಾಗಿದೆ. ನ್ಯಾಯಾಲಯಗಳಲ್ಲಿ ಉಭಯ ಪಕ್ಷಕಾರರು ರಾಜೀ ಮಾಡಿಕೊಳ್ಳಲು ಸೂಕ್ತ ಮಾರ್ಗದರ್ಶನ ಮಾಡಲಾಗುವುದು.

ಇಬ್ಬರಿಗೂ ಒಪ್ಪಿಗೆಯಾಗುವಂತೆ ಪ್ರಕರಣವು ತೀರ್ಮಾನವಾಗುವುದರಿಂದ ಬಾಂಧವ್ಯವು ಉಳಿದು ವಿವಾದವು ತೀರ್ಮಾನವಾಗುತ್ತದೆ ನ್ಯಾಯಾಲಯದಲ್ಲಿ ದಾಖಲಾಗದೇ ಇರುವ ಪ್ರಕರಣಗಳನ್ನು ಸಹ ರಾಜೀ ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು. ರಾಜೀ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡಲ್ಲಿ ನ್ಯಾಯಾಲಯಕ್ಕೆ ಪಾವತಿಸಲಾದ ನ್ಯಾಯಾಲಯ ಶುಲ್ಕವನ್ನು ಪೂರ್ಣವಾಗಿ ಮರುಪಾವತಿಸಲಾಗುವುದು. ಸಂಧಾನಕಾರರು ಸೂಚಿಸುವ ಪರಿಹಾರ ಒಪ್ಪಿಗೆಯಾದಲ್ಲಿ ಮಾತ್ರ ರಾಜೀ ಮಾಡಿಕೊಳ್ಳಬಹುದು. ಕಡಿಮೆ ಖರ್ಚಿನಲ್ಲಿ ಶೀಘ್ರ ತೀರ್ಮಾನಕ್ಕಾಗಿ ಇದೊಂದು ವಿಶೇಷ ಅವಕಾಶವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮೈಸೂರು (ಮೈಸೂರು ನಗರಕ್ಕೆ ಸಂಬಂಧಿಸಿದಂತೆ ಮಾತ್ರ Toll Free No. 1800–425–0131 ಅಥವಾ 15100 ಹಾಗೂ ತಾಲೂಕುಗಳಿಗೆ ಸಂಬಂಧಿಸಿದಂತೆ ತಾಲೂಕು ಕಾನೂನು ಸೇವಾ ಸಮಿತಿಗಳನ್ನು ನೇರವಾಗಿ ಸಂಪರ್ಕಿಸಬಹುದು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ.7ರಂದು ಗೀತಾ ಜಯಂತಿ ಸ್ಪರ್ಧೆಗಳು

ಮೈಸೂರು, ನ. 30–ಶ್ರೀಕಾಂತ ವಿದ್ಯಾಸಂಸ್ಥೆಗಳು, ಪಂಡಿತ್ ಶ್ರೀ ಕೆ.ಎನ್.ವರದರಾಜ ಅಯ್ಯಂಗಾರ್ ಮೆಮೋರಿಯಲ್ ಟ್ರಸ್ಟ್, ಶ್ರೀಕಾಂತ ಸಂಸ್ಕೃತ ಪಾಠಶಾಲೆ ವತಿಯಿಂದ ಡಿ.7ರಂದು ಬೆಳಿಗ್ಗೆ 10 ಗಂಟೆಯಿಂದ ಭಗವದ್ಗೀತೆ ಕಂಠಪಾಠ ಮತ್ತು ಇತರ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಕಂಠಪಾಠ ಸ್ಪರ್ಧೆಗೆ ನಿಗದಿಪಡಿಸಿದ ಶ್ಲೋಕಗಳು: ಭಗವದ್ಗೀತೆಯ 18ನೆಯ ಅಧ್ಯಾಯ ಮೋಕ್ಷ ಸನ್ಯಾಸ ಯೋಗಃ; 1ರಿಂದ 4ನೆಯ ತರಗತಿವರೆಗೆ–1ರಿಂದ 6ನೆಯ ಶ್ಲೋಕಗಳವರೆಗೆ, 5ರಿಂದ 7ನೆಯ ತರಗತಿವರೆಗೆ–7ರಿಂದ 13ನೆಯ ಶ್ಲೋಕಗಳವರೆಗೆ, 8ರಿಂದ 10ನೆಯ ತರಗತಿವರೆಗೆ–14ರಿಂದ 28ನೆಯ ಶ್ಲೋಕಗಳವರೆಗೆ

ಈ ಶ್ಲೋಕಗಳನ್ನು ಕಂಠಪಾಠ ಮಾಡಿ ಒಪ್ಪಿಸುವುದರೊಂದಿಗೆ ಯಾವುದಾದರೂ ಎರಡು ಶ್ಲೋಕಗಳ ಅರ್ಥವನ್ನು ವಿವರಿಸಬೇಕು. 1ರಿಂದ 4ನೇಯ ತರಗತಿವರೆಗಿನ ಮಕ್ಕಳು ಅರ್ಥವನ್ನು ಹೇಳುವ ಅಗತ್ಯವಿಲ್ಲ. ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆ ಸ್ವಾಮಿ ಆದಿದೇವಾನಂದರ ಶ್ರೀಮದ್ಭಗವದ್ಗೀತಾ (ಮೂಲಪ್ರತಿ ಪದಾರ್ಥ, ತಾತ್ಪರ್ಯ, ಟಿಪ್ಪಣಿಗಳೊಡನೆ) ಪುಸ್ತಕವನ್ನು ಅನುಸರಿಸಿದರೆ ಹೆಚ್ಚು ಉತ್ತಮ. ಕಂಠಪಾಠ ಸ್ಪರ್ಧೆಗಳಿಗೆ ಸಂಖ್ಯಾಮಿತಿ ಇಲ್ಲ.

ಸ್ತೋತ್ರ ವಿಭಾಗ: ಅಚ್ಯುತಾಷ್ಟಕಮ್– ಪ್ರಾಥಮಿಕ ವಿಭಾಗದಿಂದ ಪ್ರೌಢಶಾಲೆಯವರೆಗೆ ಅವಕಾಶ.

ಪ್ರಬಂಧ ಸ್ಪರ್ಧೆಯ ವಿಷಯ–ಗೀತೆಯ ಸಾಂಖ್ಯ ಯೋಗದ ಕುರಿತು 2 ಪುಟಕ್ಕೆ ಮೀರದಂತೆ ಬರೆಯಬೇಕು. ಬರೆಯುವ ಹಾಳೆಗಳನ್ನು ಒದಲಾಗಿಸಲಾಗುವುದು. (ಪ್ರೌಢಶಾಲೆಯ ಮಕ್ಕಳಿಗೆ ಮಾತ್ರ).

ಸಂಗೀತ : ಪುರಂದರದಾಸರ ಅಥವಾ ಕನಕದಾಸರ ಯಾವುದಾದರೂ ಒಂದು ಕೃತಿಯನ್ನು ಹಾಡಬೇಕು. ಒಟ್ಟು 4 ಸ್ಪರ್ಧೆಗಳಿರುತ್ತಿದ್ದು ಒಬ್ಬ ವಿದ್ಯಾರ್ಥಿಗೆ ನಾಲ್ಕೂ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. ಒಂದು ಸ್ಪರ್ಧೆಯ ಪ್ರವೇಶ ಶುಲ್ಕ 20 ರೂಗಳು. 16 ವರ್ಷ ಮೇಲ್ಪಟ್ಟವರಿಗೆ ಪ್ರವೇಶಾವಕಾಶವಿಲ್ಲ.

15–12–2025 ಅಥವಾ ಅದಕ್ಕೂ ಮೊದಲು ಪ್ರವೇಶಪತ್ರವನ್ನು ತಲುಪಿಸಬೇಕು.

ತಲುಪಿಸಬೇಕಾದ ವಿಳಾಸ: ಮುಖ್ಯೋಪಾಧ್ಯಾಯರು, ಶ್ರೀಕಾಂತ ಸಂಸ್ಕೃತ ಪಾಠಶಾಲೆ, ಶಂಕರಮಠದರಸ್ತೆ 4ನೇ ಅಡ್ಡ ರಸ್ತೆ, ಖಿಲ್ಲೆ ಮೊಹಲ್ಲಾ, ಮೈಸೂರು 570004. ಸ್ಪರ್ಧೆ ನಡೆಯುವ ಸ್ಥಳ : ಶ್ರೀಕಾಂತ ಬಾಲಿಕಾ ಪ್ರೌಢಶಾಲೆ ಆವರಣ, ಮೈಸೂರು. ಹೆಚ್ಚಿನ ಮಾಹಿತಿಗೆ ಎನ್.ವಿ.ಲಕ್ಷ್ಮೀ–9880543135, ಎನ್ ಲಕ್ಷ್ಮೀನಾರಾಯಣ ಸ್ವಾಮಿ–9739414323, ನಿತ್ಯಾನಂದ ಭಟ್ಟ–9448560622 ಸಂಪರ್ಕಿಸಬಹುದು.

ವಿದ್ಯಾರ್ಥಿವೇತನ, ಶುಲ್ಕ ಮರುಪಾವತಿ, ವಿದ್ಯಾಸಿರಿ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನ

ಮೈಸೂರು,ನ.30– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಪಿಯುಸಿ ಹೊರತುಪಡಿಸಿ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ, ಅರೆಅಲೆಮಾರಿ ವಿದ್ಯಾರ್ಥಿಗಳಿಂದ 2025–26ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂಲಕ ನೀಡಲಾಗುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಶುಲ್ಕ ಮರುಪಾವತಿ ಮತ್ತು ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆಯ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಡಿ.20 ಅರ್ಜಿ ಸಲ್ಲಿಸಲು ಅಂತಿಮ ದಿನಾಂಕವಾಗಿರುತ್ತದೆ. ಅರ್ಹ ಅಭ್ಯರ್ಥಿಗಳು ಅರ್ಜಿ https://ssp.postmatric.karnataka.gov.in ಮೂಲಕ ಸಲ್ಲಿಸಬೇಕು. ಕಾರ್ಯಕ್ರಮಗಳ ವಿವರ ಅರ್ಹತೆ ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ https://bcwd.karnataka.gov.in ಅಥವಾ ಸಹಾಯವಾಣಿ ಸಂ: 8050770005, ಇಮೇಲ್ ವಿಳಾಸ bcwdhelpline@ gmail.com ಅಥವಾ ರಾಜ್ಯ ವಿದ್ಯಾರ್ಥಿವೇತನ ತುರ್ತುಂಶದ ದೂ.ಸಂ: 1902, ಇಮೇಲ್ ವಿಳಾಸ postmatrichelp@karnataka.gov.in ಅನ್ನು ಸಂಪರ್ಕಿಸಬಹುದು.

ಮೈಸೂರು ಜಿಲ್ಲೆಯ ಗೃಹರಕ್ಷಕ ದಳದ ಗೌರವ ಸಮಾದೇಷ್ಟರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು,ನ.30– ಮೈಸೂರು ಜಿಲ್ಲೆಯ ಗೃಹ ರಕ್ಷಕ ದಳದ ಗೌರವ ಸಮಾದೇಷ್ಟರ ಹುದ್ದೆಯು ಖಾಲಿ ಇದ್ದು, ತುರ್ತಾಗಿ ಸೂಕ್ತವಾದ ವ್ಯಕ್ತಿಯನ್ನು ಅರ್ಹತೆಯ ಮೇರೆಗೆ ಸರ್ಕಾರದ ಮಟ್ಟದಲ್ಲಿ ಆಯ್ಕೆ ಮಾಡಲಾಗುತ್ತದೆ. ಸದರಿ ಗೌರವ ಹುದ್ದೆಗೆ ಸೂಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳವರು ಜಿಲ್ಲಾಧಿಕಾರಿಗಳಿಂದ ಅರ್ಜಿಗಳನ್ನು ಪಡೆದು ಅಗತ್ಯ ದಾಖಲೆಗಳೊಂದಿಗೆ ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಡಿ.20ರ ಒಳಗಾಗಿ ಸಲ್ಲಿಸಬೇಕಾಗಿದೆ ಎಂದು ಆರಕ್ಷಕ ಮಹಾನಿರ್ದೇಶಕರು ಹಾಗೂ ಗೃಹರಕ್ಷಕ ದಳದ ಮಹಾ ಸಮಾದೇಷ್ಟರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಜಯ ಸುರೇಶ್ ರಚಿತ 'ಕೊನೆ –ಮೊದಲು' ಕೃತಿ ಬಿಡುಗಡೆ



'ಕೊನೆ–ಮೊದಲು' ಕೃತಿಯನ್ನು ಕುಂದೂರು ಮಠದ ಡಾ.ಶ್ರೀ ಶರತ್‌ಚಂದ್ರ ಸ್ವಾಮೀಜಿ ಬಿಡುಗಡೆಗೊಳಿಸಿದರು.

ಮೈಸೂರು, ನ.30(ಎಸ್‌ಪಿಎನ್)– ಲೇಖಕಿ ಸುಜಯ ಸುರೇಶ್ ರಚಿತ 'ಕೊನೆ–ಮೊದಲು' ಕೃತಿಯನ್ನು ಕುಂದೂರು ಮಠದ ಡಾ.ಶ್ರೀ ಶರತ್‌ಚಂದ್ರ ಸ್ವಾಮೀಜಿ ಭಾನುವಾರ ಬಿಡುಗಡೆಗೊಳಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಜಿಲ್ಲಾ ಕಸಾಪ, ಕನ್ನಡ ಸಾಹಿತ್ಯ ಕಲಾಕೂಟ, ಸ್ಪಂದನ ಸಾಂಸ್ಕೃತಿಕ ಪರಿಷತ್ತು ಹಾಗೂ ಕದಂಬ ಕಲಾಪೀಠ ಸಹಯೋಗದೊಂದಿಗೆ ಏರ್ಪಡಿಸಿದ್ದ ಸಮಾರಂಭದಲ್ಲಿ 'ಕೊನೆ–ಮೊದಲು' ಕೃತಿಯನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಪ್ರಸ್ತುತ ಯುವ ಜನತೆ ಸಂಸ್ಕೃತಿ–ಸಂಸ್ಕಾರದಿಂದ ದೂರ ಸರಿಯುತ್ತಿದ್ದಾರೆ. ಹಾಗಾಗಿ ವಿದ್ಯಾರ್ಥಿ ದೆಸೆಯಿಂದಲೇ ಸಂಸ್ಕೃತಿ, ಸಂಸ್ಕಾರ ನೀಡಲು ಪೋಷಕರು ಮುಂದಾಗಬೇಕು. ಲೇಖಕಿ ಸುಜಯ ಸುರೇಶ್ ರಚನೆಯ 'ಕೊನೆ–ಮೊದಲು' ಕೃತಿ ಶಾಸ್ತ್ರ ಸಂಬಂಧಿತ ಪುಸ್ತಕವಾಗಿದೆ. ಇದನ್ನು ಎಲ್ಲರೂ ಖರೀದಿ ಓದುವಂತೆ ಸಲಹೆ ನೀಡಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಮಾತನಾಡಿ, ಸಾವು ಸಂಭವಿಸಿದ ಸಂದರ್ಭದಲ್ಲಿ ಅನುಸರಿಸಬಹುದಾದ ಸಂಪ್ರದಾಯ ಪದ್ಧತಿ ಕುರಿತು ಈ ಕೃತಿ ಬೆಳಕು ಚೆಲ್ಲುತ್ತಿದೆ. ಸಾವಿನ ಸಂದರ್ಭದಲ್ಲಿ ಪುರುಷ ಮತ್ತು ಮಹಿಳೆಯರು ಅನುಸರಿಸಬೇಕಾದ ಶಾಸ್ತ್ರಗಳ ಕುರಿತು ಉಲ್ಲೇಖವಿದೆ ಎಂದರು.

ಹುಟ್ಟು–ಸಾವಿನ ಸಂಪ್ರದಾಯಗಳಿಗೆ ಬಸವಣ್ಣ, ನಾರಾಯಣ ಗುರು ಸೇರದಂತೆ ಅನೇಕ ದಾರ್ಶನಿಕರು ಸುಧಾರಣೆಗೊಳ್ಳಲು ಶ್ರಮಿಸಿದ್ದಾರೆ. ಈ ಕೃತಿ ಮಾರ್ಗದರ್ಶನವಾಗಿದೆ. ನಮ್ಮ ಸಂಪ್ರದಾಯಗಳಲ್ಲಿ ಸಾವು ಸಂಭವಿಸಿದ ಮನೆಗಳಲ್ಲಿ ಸೂತಕದ ಛಾಯೆ ಆರಂಭವಾಗುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಧಾರ್ಮಿಕವಾಗಿ ಮಹಿಳೆಯರಿಗಿರಬೇಕಾದ ಅರ್ಹತೆ ಕುರಿತು ಉಲ್ಲೇಖವಾಗಿದೆ ಎಂದರು.

ಯುವ ಸಾಹಿತಿ ಸತೀಶ್ ಜವರೇಗೌಡ ಮಾತನಾಡಿ, ನಮ್ಮ ನಾಡಿನಲ್ಲಿ ಬದುಕಿನ ಪ್ರತಿಯೊಂದು ಜೀವಿಯೂ ತನ್ನದೇ ಆದ ಪ್ರಪಂಚದಲ್ಲಿ ಜೀವನ ಕಟ್ಟಿಕೊಳ್ಳಲು ಪ್ರಯತ್ನಿಸುತ್ತೇವೆ. ಅದು ಹುಟ್ಟು–ಸಾವಿನ ಕುರಿತಾದ ಪುಸ್ತಕ ಎಲ್ಲರಿಗೂ ಅಗತ್ಯವಾಗಿದೆ. ಈ ಪುಸ್ತಕಕ್ಕೆ ಡಿ.ಲಿಟ್ ಗೌರವಕ್ಕೆ ಪಾತ್ರರಾಗುವ ಎಲ್ಲಾ ಅರ್ಹತೆಯಿದೆ.

ಈ ವೇಳೆ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕದಂಬ ಕಲಾ ಪೀಠದ ಅಧ್ಯಕ್ಷ ಬಿ. ವಿದ್ಯಾ ಸಾಗರ್ ಕದಂಬ ಸೇರಿದಂತೆ ಇತರರಿದ್ದರು.

ಅಮೆರಿಕದಲ್ಲಿ ಮತ್ತೆ ಗುಂಡಿನ ದಾಳಿ: ನಾಲ್ವರು ಸಾವು

ಕ್ಯಾಲಿಫೋರ್ನಿಯಾ: ಅಮೆರಿಕದಲ್ಲಿ ಮತ್ತೆ ಗುಂಡಿನ ದಾಳಿ ನಡೆದಿದೆ. ಸ್ಟಾಕ್ಟನ್‌ನ ಬ್ಯಾಂಕ್ವೆಟ್ ಹಾಲ್‌ವೊಂದರಲ್ಲಿ ಸೇರಿದ ಕುಟುಂಬವೊಂದರ ಮೇಲೆ ನಡೆದ ಗುಂಡಿನ ದಾಳಿಯಲ್ಲಿ ನಾಲ್ವರು ಸಾವನ್ನಪ್ಪಿದ್ದು, 10 ಜನರು ಗಾಯಗೊಂಡಿದ್ದಾರೆ ಎಂದು ಶೆರಿಫ್ ಅಧಿಕಾರಿಗಳು ತಿಳಿಸಿದ್ದಾರೆ. ಬಲಿಯಾದವರಲ್ಲಿ ಮಕ್ಕಳು ಮತ್ತು ವಯಸ್ಕರು ಸೇರಿದ್ದಾರೆ ಎಂದು ಸ್ಯಾನ್ ಜೋಕ್ವಿನ್ ಕೌಂಟಿ ಶೆರಿಫ್ ಕಚೇರಿಯ ವಕ್ತಾರ ಹೀದರ್ ಬ್ರೆಂಟ್ ಹೇಳಿದ್ದಾರೆ. ಕುಟುಂಬವನ್ನು ಟಾರ್ಗೆಟ್ ಮಾಡಿ ನಡೆದ ದಾಳಿ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಶಂಕಿತ ಶೂಟರ್ ಪರಾರಿಯಾಗಿದ್ದಾನೆ. ಆತನನ್ನು ಹುಡುಕಲಾಗುತ್ತಿದೆ. ಶಂಕಿತನ ಬಗ್ಗೆ ಯಾವುದೇ ಮಾಹಿತಿ ಇದ್ದರೆ, ತಕ್ಷಣ ಸಂಪರ್ಕಿಸಿ ಎಂದು ಸ್ಯಾನ್ ಜೋಕ್ವಿನ್ ಕೌಂಟಿ ಜಿಲ್ಲಾ ಅಟಾರ್ನಿ ರಾನ್ ಫ್ರೀಟಾಸ್ ತಿಳಿಸಿದ್ದಾರೆ. ಔತಣಕೂಟಕ್ಕೆ ಸೇರಿದ ಕುಟುಂಬವೊಂದರ ಮೇಲೆ ಶನಿವಾರ ಸಂಜೆ 6 ಗಂಟೆಗೂ ಮುನ್ನಾ ಗುಂಡಿನ ದಾಳಿ ನಡೆದಿದೆ. ಸ್ಟಾಕ್ಟನ್ ನಗರವು ಸ್ಯಾಕ್ರಮೆಂಟೊದಿಂದ ದಕ್ಷಿಣಕ್ಕೆ ಸುಮಾರು 40 ಮೈಲಿ (64 ಕಿಲೋಮೀಟರ್) ದೂರದಲ್ಲಿದ್ದು, 320,000 ಜನಸಂಖ್ಯೆಯನ್ನು ಹೊಂದಿದೆ.


'ರುಕ್ಮಿಣಿ ಆಂಟಿ ಅಂಡ್ ದಿ ಆರ್.ಕೆ.ನಾರಾಯಣ್ ಫ್ಯಾನ್ ಕ್ಲಬ್' ಪುಸ್ತಕ ಬಿಡುಗಡೆ



ಮೈಸೂರು,ನ.30(ಪಿಎಂ)– ಮೈಸೂರು ಬುಕ್ ಕ್ಲಬ್ಸ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಭಾನುವಾರ ಸೀತಾ ಭಾಸ್ಕರ್ ಅವರ 'ರುಕ್ಮಿಣಿ ಆಂಟಿ ಅಂಡ್ ದಿ ಆರ್.ಕೆ. ನಾರಾಯಣ್ ಫ್ಯಾನ್ ಕ್ಲಬ್' ಪುಸ್ತಕ (ಇಂಗ್ಲಿಷ್) ಬಿಡುಗಡೆ ಮಾಡಲಾಯಿತು.

ಆರು ವರ್ಷದ ಬಾಲಕನಾಗಿದ್ದಾಗ ಆರ್.ಕೆ.ನಾರಾಯಣ್ ಅವರ ವಸ್ತು ಸಂಗ್ರಹಾಲಯ ಸುತ್ತ ವಿಡಿಯೋ ಚಿತ್ರೀಕರಣ ಮಾಡಿದ್ದ 11 ವರ್ಷದ ಏಶಾನ್ ರುದ್ರ ಅರಸ್ ಪುಸ್ತಕ ಬಿಡುಗಡೆ ಮಾಡಿದ್ದು ವಿಶೇಷವಾಗಿತ್ತು.


ಮೈಸೂರಿನ ಜೆಎಲ್‌ಬಿ ರಸ್ತೆಯ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಮಾರಂಭದಲ್ಲಿ ಪುಸ್ತಕ ಬಿಡುಗಡೆಗೊಂಡಿತು. ಅನೇಕ ಪುಸ್ತಕ ಪ್ರೇಮಿಗಳು ಪಾಲ್ಗೊಂಡು ಕೃತಿ ಕರ್ತೃ ಸೀತಾ ಭಾಸ್ಕರ್ ಅವರ ಸಾಹಿತ್ಯ ಕೃಷಿ ಬಗ್ಗೆ ಮೆಚ್ಚುಗೆ ಮಾತುಗಳನ್ನಾಡಿದರು. ಸೀತಾ ಭಾಸ್ಕರ್ ಅವರು ಇಂಗ್ಲಿಷ್‌ನಲ್ಲಿ ಹಾಗೂ ನಳಿನಿ ಚಂದರ್ ಅವರು ಕನ್ನಡದಲ್ಲಿ ನಾಟಕೀಯ ಶೈಲಿಯಲ್ಲಿ ಸದರಿ ಪುಸ್ತಕದಲ್ಲಿನ ವಿಚಾರಗಳ ಕುರಿತು ಮಂಡಿಸಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಲೇಖಕಿ ಸೀತಾ ಭಾಸ್ಕರ್ ಅವರ 'ರುಕ್ಮಿಣಿ ಆಂಟಿ ಅಂಡ್ ದಿ ಆರ್.ಕೆ. ನಾರಾಯಣ್ ಫ್ಯಾನ್ ಕ್ಲಬ್' ಪುಸ್ತಕವನ್ನು 11 ವರ್ಷದ ಬಾಲಕ ಏಶಾನ್ ರುದ್ರ ಅರಸ್ ಬಿಡುಗಡೆ ಮಾಡಿದ. (ಎಡದಿಂದ) ಶುಭಾ ಸಂಜಯ್ ಅರಸ್ ಹಾಗೂ ಸೀತಾ ಭಾಸ್ಕರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಬುಕ್ ಕ್ಲಬ್ಸ್ ಚಾರಿಟೇಬಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷೆ ಶುಭಾ ಸಂಜಯ್ ಅರಸ್, ಅಮೆರಿಕಾದಿಂದ ಹಿಂದಿರುಗಿದ ಸೀತಾ ಭಾಸ್ಕರ್, ಮೈಸೂರಿನಲ್ಲಿ ನೆಲೆಸಿದ್ದು, ಅವರು ಗಂಭೀರ ಆಲೋಚನೆಗಳನ್ನು ಸೌಮ್ಯವಾದ ಹಾಸ್ಯದಲ್ಲಿ ಬರೆಯಬಲ್ಲ ಸೂಕ್ಷ್ಮ ಸಂವೇದನೆಯ ಬರಹಗಾರರು. ಆರ್.ಕೆ.ನಾರಾಯಣ್ ಅವರ ನಿವಾಸ ಮತ್ತು ಅದು ವಸ್ತು ಸಂಗ್ರಹಾಲಯ ಆಗಿ ಪರಿವರ್ತನೆಗೊಂಡ ಬಗ್ಗೆ ಅವರು ಆಸಕ್ತಿ ಹೊಂದಿದ್ದರು. ವಸ್ತು ಸಂಗ್ರಹಾಲಯವಾಗಿ ಪರಿವರ್ತಿಸಿದ ಬಳಿಕ ಅದರ ಬಗ್ಗೆ ಪ್ರಕಟವಾಗುತ್ತಿರುವ ಮೊದಲ ಪುಸ್ತಕ ಇದಾಗಿದೆ ಎಂದು ತಿಳಿಸಿದರು.

ಮೈಸೂರಿನ ಜನತೆ, ವಾತಾವರಣ ಮತ್ತು ಸಂಸ್ಕೃತಿಯನ್ನು ತಮ್ಮ ಅಪ್ರತಿಮ ಶೈಲಿಯಲ್ಲಿ ಅಮರಗೊಳಿಸಿದ ಹೆಮ್ಮೆಯ ಮೈಸೂರಿನ ನಿವಾಸಿ ಆರ್.ಕೆ.ನಾರಾಯಣ್. ಅವರ ಕುರಿತು ಹಾಗೂ ಮೈಸೂರಿನ ಯಾದವಗಿರಿಯ ಅವರ ನಿವಾಸವು ವಸ್ತು ಸಂಗ್ರಹಾಲಯವಾಗಿ ಸಂರಕ್ಷಣೆ ಗೊಳ್ಳಲು ಕಾರಣಕರ್ತರಾದವರನ್ನು ಆದರಿಸಿದಂತೆ ಕಾಲ್ಪನಿಕ ಶೈಲಿಯಲ್ಲಿ ಬರೆದಿರುವ ಪುಸ್ತಕ ಇದಾಗಿದೆ. ಇದು ಕೃತಿಕಾರರ ನಾಲ್ಕನೇ ಪುಸ್ತಕವಾಗಿದೆ ಎಂದರು. ಮೈಸೂರು ಬುಕ್ ಕ್ಲಬ್ಸ್ ಚಾರಿಟೇಬಲ್ ಟ್ರಸ್ಟ್‌ನ ಟ್ರಸ್ಟಿಗಳಾದ ಕಿಟ್ಟಿ ಮಂದಣ, ತಂಗಂ ಪಣಕಲ್, ವಿನಯ ಪ್ರಭಾವತಿ ಮತ್ತಿತರರು ಹಾಜರಿದ್ದರು.



'ರುಕ್ಮಿಣಿ ಆಂಟಿ ಅಂಡ್ ದಿ ಆರ್.ಕೆ. ನಾರಾಯಣ್ ಫ್ಯಾನ್ ಕ್ಲಬ್'ಪುಸ್ತಕ

ಉಚಿತ ಆರೋಗ್ಯ ತಪಾಸಣೆ



ಮೈಸೂರು ತಾಲೂಕು ದೊಡ್ಡ ಮಾರಗೌಡನಹಳ್ಳಿ ಗ್ರಾಮದಲ್ಲಿ ಶನಿವಾರ ಇಲವಾಲ ಎನ್‌ಜೆ ಆಸ್ಪತ್ರೆ ಮತ್ತು ಪ್ರಜ್ಞಾ ಎಜುಕೇಶನ್ ಅಂಡ್ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು. ಗ್ರಾಮದ ಜನರು ಆರೋಗ್ಯ ತಪಾಸಣಾ ಸದುಪಯೋಗ ಪಡೆದುಕೊಂಡರು. ಡಿಎಂಜಿ ಹಳ್ಳಿ ಗ್ರಾಪಂ ಅಧ್ಯಕ್ಷೆ ಲತಾ ಪ್ರಸನ್ನಚಾರಿ, ಸದಸ್ಯ ಡಿ.ಬಿ.ಶಂಕರ್, ಪ್ರಜ್ಞಾ ಎಜುಕೇಶನ್ ಟ್ರಸ್ಟ್ ಗೌರವಾಧ್ಯಕ್ಷ ಜಿ.ವಿ.ಪ್ರಸಾದ್, ಕಾರ್ಯದರ್ಶಿ ಡಿ.ಸಿ.ಕುಮಾರ್, ಎನ್‌ಜೆ ಆಸ್ಪತ್ರೆ ವೈದ್ಯರಾದ ಡಾ.ರೋಹಿತ, ಮಾರ್ಕೆಟಿಂಗ್ ಮ್ಯಾನೇಜರ್ ಸೋಮು ಉಪಸ್ಥಿತರಿದ್ದರು.

ಮೈಸೂರನ್ನು ಮಾದಕ ವಸ್ತುಗಳ ಮುಕ್ತ ಜಿಲ್ಲೆಯನ್ನಾಗಿ ಮಾಡಲು ಕೈಜೋಡಿಸಿ

ವಿವಿಧ ಇಲಾಖೆ ಅಧಿಕಾರಿಗಳಿಗೆ ಅಪರ ಪೊಲೀಸ್ ವರಿಷ್ಠಾಧಿಕಾರಿ ನಾಗೇಶ್ ಸೂಚನೆ



ಮೈಸೂರು ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಹಮಿಕೊಳ್ಳಲಾಗಿದ್ದ ನಾರ್ಕೋ ಸಮನ್ವಯ ಕೇಂದ್ರದ ಜಿಲ್ಲಾ ಮಟ್ಟದ ಜಿಲ್ಲಾ ಕಮಿಟಿ ಸಭೆಯ ಅಧ್ಯಕ್ಷತೆ ವಹಿಸಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ನಾಗೇಶ್ ಮಾತನಾಡಿದರು.

ಮೈಸೂರು, ನ.30– ನಾರ್ಕೋಟಿಕ್ ಡ್ರಗ್ಸ್ ಇತರ ಮಾದಕ ವಸ್ತುಗಳ ಮಾರಾಟ ಹಾಗೂ ಸೇವನೆಯ ಜಾಲ ದಿನದಿಂದ ದಿನಕ್ಕೆ ಹೆಚ್ಚಾಗಿದ್ದು, ಮಾದಕ ವಸ್ತುಗಳ ಸರಬರಾಜನ್ನು ತಡೆಗಟ್ಟಿ, ಆ ಮೂಲಕ ಮಾದಕ ವಸ್ತುಗಳ ಮುಕ್ತ ಜಿಲ್ಲೆಯನ್ನಾಗಿ ಮಾಡಲು ಎಲ್ಲಾ ಅಧಿಕಾರಿಗಳು ಕೈ ಜೋಡಿಸಬೇಕು ಎಂದು ಹೆಚ್ಚುವರಿ ಪೊಲೀಸ್ ಅಧೀಕ್ಷಕ ನಾಗೇಶ್ ಹೇಳಿದರು.

ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಹಮಿಕೊಳ್ಳಲಾಗಿದ್ದ ನಾರ್ಕೋ ಸಮನ್ವಯ ಕೇಂದ್ರದ ಜಿಲ್ಲಾ ಮಟ್ಟದ ಜಿಲ್ಲಾ ಕಮಿಟಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಈ ಹಿಂದೆ ಮದ್ಯವನ್ನು ಊರಿನ ಹೊರ ಭಾಗದಲ್ಲಿ ಮಾರಾಟ ಮಾಡಲಾಗುತ್ತಿತ್ತು, ಇಂದು ಊರಿನ ಒಳಗೆ ಮಾರಾಟ ಮಾಡುತ್ತಿದ್ದಾರೆ. ನಾರ್ಕೋಟಿಕ್ ಡ್ರಗ್ಸ್ ಹಾಗೂ ಮಾದಕ ವಸ್ತುಗಳ ಮಾರಾಟ ಜಾಲವನ್ನು ಮಟ್ಟ ಹಾಕದಿದ್ದರೆ, ಮುಂದಿನ ದಿನಗಳಲ್ಲಿ ನಮ್ಮ ಮನೆಗಳನ್ನೇ ಆವರಿಸಬಹುದು. ಸಾರ್ವಜನಿಕರು ಇದರ ದುಷ್ಪರಿಣಾಮಗಳ ಬಗ್ಗೆ ತಿಳಿದುಕೊಂಡು ಎಚ್ಚರಿಕೆಯಿಂದ ಇರಬೇಕು ಎಂದರು.

ವಿದ್ಯಾರ್ಥಿಗಳ ಮೇಲೆ ನಿಗಾ: ಮಾದಕ ವಸ್ತುಗಳ ಸೇವನೆ ಕಾಲೇಜು ವಿದ್ಯಾರ್ಥಿಗಳಲ್ಲಿ ಹೆಚ್ಚಿದ್ದು, ಅವರ ಮೇಲೆ ಪ್ರಭಾವ ಬೀರುತ್ತಿರುವುದರಿಂದ ಕಾಲೇಜು ಶಿಕ್ಷಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಅಧಿಕಾರಿಗಳು ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿ ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಬೇಕು. ಕಾಲೇಜುಗಳ ಸುತ್ತ ಮುತ್ತ ಸಿಸಿಟಿವಿಗಳನ್ನು ಅಳವಡಿಸಿ ವಿದ್ಯಾರ್ಥಿಗಳ ಚಲನವಲನಗಳ ಬಗ್ಗೆ ನಿಗಾ ವಹಿಸಬೇಕು. ಕಾಲೇಜುಗಳ ಸುತ್ತ ಮುತ್ತ ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಮಾಹಿತಿ ಇರುವ ಬ್ಯಾನರ್‌ಗಳನ್ನ ಅಳವಡಿಸಬೇಕು ಎಂದರು.

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ವಿದ್ಯಾರ್ಥಿಗಳ ಹಾಸ್ಟೆಲ್‌ಗಳ ಸುತ್ತ ಮುತ್ತ ಸಿಸಿ ಟಿವಿಯನ್ನು ಅಳವಡಿಸಿ ಅವುಗಳನ್ನು ಪರಿಶೀಲಿಸುತ್ತ ಇರಬೇಕು, ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕು. ಹಾಸ್ಟೆಲ್‌ಗಳ ಸುತ್ತ ಸಂಶಯಾಸ್ಪದವಾಗಿ ಓಡಾಡುತ್ತಿದ್ದಾರೆ ಎಂದು ತಿಳಿದು ಬಂದಲ್ಲಿ ತಕ್ಷಣ ಪೊಲೀಸ್ ಇಲಾಖೆಗೆ ತಿಳಿಸಬೇಕು. ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿರುವ ಅರಿವು ಕಾರ್ಯಕ್ರಮಗಳ ವರದಿಯನ್ನು ಸಲ್ಲಿಸಬೇಕು ಎಂದರು.

ಮೆಡಿಕಲ್ ಸ್ಟೋರ್ ಪಟ್ಟಿ ಮಾಡಿ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವಂತಹ ಎಲ್ಲಾ ಆಸ್ಪತ್ರೆಗಳಿಗೂ ಭೇಟಿ ನೀಡಿ ಪರಿಶೀಲಿಸಬೇಕು. ಆಸ್ಪತ್ರೆ ವತಿಯಿಂದ ಮಾದಕ ವಸ್ತುಗಳ ನಿಯಂತ್ರಣದ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅರಿವು ಮೂಡಿಸಬೇಕು. ಹಾಗೂ ಔಷಧ ನಿಯಂತ್ರಣಾಧಿಕಾರಿಗಳು ಮೆಡಿಕಲ್ ಸ್ಟೋರ್‌ಗಳಲ್ಲಿ ಕಾನೂನು ಬಾಹಿರವಾಗಿ ಡ್ರಗ್ಸ್ ಸರಬರಾಜು ಆಗದಂತೆ ಕ್ರಮ ವಹಿಸಿ ಮೆಡಿಕಲ್ ಸ್ಟೋರ್‌ಗಳ ಪಟ್ಟಿ ಮಾಡಿಕೊಂಡು ಅನಿರೀಕ್ಷಿತವಾಗಿ ಭೇಟಿ ನೀಡಿ ಪರಿಶೀಲನೆ ನಡೆಸಿ ವರದಿ ನೀಡಬೇಕು ಎದು ಹೇಳಿದರು.

ಜಾಗೃತಿ ಕಾರ್ಯಕ್ರಮ: ಅರಣ್ಯ ಇಲಾಖೆ ಮತ್ತು ಕೃಷಿ ಇಲಾಖೆಯವರು ಕಾಡಂಚಿನ ಗ್ರಾಮಗಳು ಹಾಗೂ ಹಾಡಿಗಳಲ್ಲಿ, ಗಾಂಜಾ ಬೆಳೆಯುತ್ತಿರುವ ಬಗ್ಗೆ ಪರಿಶೀಲನೆ ಮಾಡಿ ಮಾಹಿತಿ ಪಡೆದುಕೊಂಡು ಪೊಲೀಸರಿಗೆ ವರದಿ ನೀಡಬೇಕು. ಹಾಡಿ ಪ್ರದೇಶಗಳ ಸಾರ್ವಜನಿಕರಲ್ಲಿ ಮಾದಕ ವಸ್ತುಗಳಿಂದಾಗುವ ಪರಿಣಾಮಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ಇರುವ ಕೇಂದ್ರ ಕಾರಾಗೃಹ ಹಾಗೂ ಉಪ ಕಾರಾಗೃಹಗಳಿಗೆ ಅನಿರೀಕ್ಷಿತ ಭೇಟಿ ನೀಡಬೇಕು. ಕಾರಾಗೃಹದಲ್ಲಿ ಇರುವ ಬಂಧಿಗಳಿಗೆ ಅರಿವು ಕಾರ್ಯಕ್ರಮಗಳನ್ನು ನಡೆಸಬೇಕು. ಮಾದಕ ವಸ್ತುಗಳು ಸರಬರಾಜು ಆಗದಂತೆ ಅಗತ್ಯ ಕ್ರಮ ವಹಿಸಬೇಕು. ಎನ್‌ಜಿಓ ಮುಖ್ಯಸ್ಥರ ಮಾದಕ ವಸ್ತು ಸರಬರಾಜು ಆಗುತ್ತಿರುವ ಬಗ್ಗೆ ಮಾಹಿತಿ ತಿಳಿದಲ್ಲಿ ಪೊಲೀಸ್ ಇಲಾಖೆಗೆ ಮಾಹಿತಿ ನೀಡಬೇಕು. ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮಾದಕ ವಸ್ತುಗಳು ಸರಬರಾಜು ಆಗದಂತೆ ಕ್ರಮ ವಹಿಸಬೇಕು. ಸರಕು ಸಾಗಾಣಿಕೆ ಗೂಡ್ಸ್‌ಗಳನ್ನು ಸರಕು ಮತ್ತು ಸೇವಾ ತೆರಿಗೆ ಇಲಾಖೆಯವರು ಪಾರ್ಸಲ್‌ಗಳಲ್ಲಿ ಮಾದಕ ವಸ್ತುಗಳ ಸಾಗಾಣಿಕೆಯಾಗುತ್ತಿರುವುದರ ಬಗ್ಗೆ ಮಾಹಿತಿ ಕಂಡು ಬಂದಲ್ಲಿ ಪೊಲೀಸ್ ಅಧಿಕಾರಿಗಳೊಂದಿಗೆ ದಾಳಿ ನಡೆಸಿ ಅಗತ್ಯ ಕ್ರಮ ವಹಿಸಿ, ವರದಿ ನೀಡಬೇಕು ಎಂದರು. ಸಭೆಯಲ್ಲಿ ಎ.ಎಸ್.ಐ ನಾಗರಾಜ್ ನಾಯಕ್, ಸೈಬರ್ ಕ್ರೈಂ ವಿಭಾಗದ ಮನೋಜ್ ಕುಮಾರ್, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಉಡುಪಿಯಲ್ಲಿ ಟೆಂಪೋ ಪಲ್ಟಿ : ಐವರು ಕಾರ್ಮಿಕರು ದುರಂತ ಸಾವು

ಉಡುಪಿ, ನ. 30– ಕಾರ್ಯಕ್ರಮವೊಂದಕ್ಕೆ ಡೆಕೊರೇಷನ್ ಸಾಮಗ್ರಿ ಸಾಗಿಸುತ್ತಿದ್ದ ಟೆಂಟೋ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿದ್ದು, ಘಟನೆಯಲ್ಲಿ ಐವರು ಕಾರ್ಮಿಕರು ಸಾವನ್ನಪ್ಪಿದ್ದಾರೆ. ಇಂದು (ನ.30) ಉಡುಪಿ ಜಿಲ್ಲೆಯ ಕಾಪು ತಾಲೂಕಿನ ಕೋತಲಕಟ್ಟೆ ಬಳಿ ಈ ದುರ್ಘಟನೆ ಸಂಭವಿಸಿದೆ. ಕಾರ್ಯಕ್ರಮವೊಂದಕ್ಕೆ ಡೆಕೊರೇಷನ್ ಸಾಮಗ್ರಿ ಸಾಗಿಸುತ್ತಿದ್ದ ವೇಳೆ ಟೆಂಪೋ ಚಾಲಕನ ನಿಯಂತ್ರಣ ತಪ್ಪಿ ಹೆದ್ದಾರಿ ಡಿವೈಡರ್ ಹಾರಿ ಸರ್ವಿಸ್ ರಸ್ತೆಗೆ ಉರುಳಿಬಿದ್ದಿದ್ದು, ಟೆಂಪೋನಲ್ಲಿದ್ದ 12 ಕಾರ್ಮಿಕರು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದಾರೆ. ಈ ಪೈಕಿ ಐವರು ಮೃತಪಟ್ಟಿದ್ದಾರೆ. ಹಲವರಿಗೆ ಗಾಯಗಳಾಗಿವೆ. ಪಶ್ಚಿಮ ಬಂಗಾಳದ ಕಮಲ್, ಸಮರೇಶ್, ಅಸ್ಸಾಂನ ಪಪ್ಪು ರವಿ ದಾಸ್, ಹರೀಶ್, ತ್ರಿಪುರಾದ ಗಪುನಾತ್ ಮೃತ ಕಾರ್ಮಿಕರು.

ಘಟನೆಯಲ್ಲಿ ಸ್ಥಳದಲ್ಲೇ ಇಬ್ಬರು ಕಾರ್ಮಿಕರು ಸಾವಿಗೀಡಾಗಿದ್ದರೆ, ಆಸ್ಪತ್ರೆಯಲ್ಲಿ ಮೂವರು ಮೃತಪಟ್ಟಿದ್ದಾರೆ. ವಾಹನದಲ್ಲಿ 12 ಜನರು ಪೈಕಿ ಇನ್ನುಳಿದ ಏಳು ಕಾರ್ಮಿಕರಿಗೆ ಗಂಭೀರಗಳಾಗಿದ್ದು, ಅವರನ್ನು ಚಿಕಿತ್ಸೆಗಾಗಿ ವಿವಿಧ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳಕ್ಕೆ ಕಾಪು ಪೊಲೀಸರು ದೌಡಾಯಿಸಿ ಪರಿಶೀಲನೆ ನಡೆಸುತ್ತಿದ್ದಾರೆ.

ತಮಿಳುನಾಡಿನಲ್ಲಿ ಎರಡು ಸರ್ಕಾರಿ ಬಸ್‌ಗಳು ಮುಖಾಮುಖಿ ಡಿಕ್ಕಿ; 11 ಮಂದಿ ಸಾವು

ಚೆನ್ನೈ, ನ.30– ತಮಿಳುನಾಡಿನ ಶಿವಗಂಗಾ ಜಿಲ್ಲೆಯ ಕುಮ್ಮಂಗುಡಿ ಬಳಿ ಭಾನುವಾರ ಸಂಜೆ ಎರಡು ತಮಿಳುನಾಡು ಸರ್ಕಾರಿ ಬಸ್‌ಗಳು ಮುಖಾಮುಖಿ ಡಿಕ್ಕಿಯಾಗಿ 11 ಮಂದಿ ಸಾವನ್ನಪ್ಪಿದ್ದು, 20 ಜನರು ಗಾಯಗೊಂಡಿದ್ದಾರೆ.



ತಿರುಪತ್ತೂರು ಪ್ರದೇಶದ ಪಿಳ್ಳೈಯಾರ್ಪಟ್ಟಿಯಿಂದ ಐದು ಕಿಲೋಮೀಟರ್ ದೂರದಲ್ಲಿ ಈ ಅಪಘಾತ ಸಂಭವಿಸಿದೆ. ಒಂದು ಬಸ್ ತಿರುಪ್ಪೂರಿನಿಂದ ಕಾರೈಕುಡಿಗೆ ಪ್ರಯಾಣಿಸುತ್ತಿತ್ತು. ಇನ್ನೊಂದು ಬಸ್ ಕಾರೈಕುಡಿಯಿಂದ ದಿಂಡಿಗಲ್ ಜಿಲ್ಲೆಯ ಕಡೆಗೆ ಪ್ರಯಾಣಿಸುತ್ತಿತ್ತು. ರಕ್ಷಣಾ ತಂಡಗಳು ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗಳಿಗೆ ಸಾಗಿಸಿದ್ದು, ಅಪಘಾತದ ಕಾರಣ ಮತ್ತು ಆಸ್ಪತ್ರೆಗೆ ದಾಖಲಾದವರ ಸ್ಥಿತಿಯ ಕುರಿತು ಹೆಚ್ಚಿನ ವಿವರಗಳನ್ನು ನಿರೀಕ್ಷಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಪರಿಚಿತ ವ್ಯಕ್ತಿ ಶವ ಪತ್ತೆ

ಮೈಸೂರು, ನ.30–ನ.19ರಂದು ಮೈಸೂರು ರೈಲು ನಿಲ್ದಾಣದ ವೇದಿಕೆಯಲ್ಲಿ ಸುಮಾರು 75 ವರ್ಷದ ಅಪರಿಚಿತ ಗಂಡಸು ಚಳಿ–ಜ್ವರದಿಂದ ಬಳಲುತ್ತಿದ್ದು ಸದರಿ ವ್ಯಕ್ತಿಯನ್ನು ಚಿಕಿತ್ಸೆ ಕುರಿತು ಮೈಸೂರಿನ ಕೆ.ಆರ್ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೇ ನ.26 ರಂದು ಮೃತಪಟ್ಟಿದ್ದು, ಮೃತದೇಹವು ಮೈಸೂರಿನ ಕೆ.ಆರ್ ಆಸ್ಪತ್ರೆಯ ಶವಾಗಾರದಲ್ಲಿರುತ್ತದೆ. ವಯಸ್ಸು ಸುಮಾರು 70–75 ವರ್ಷ, 5.6 ಅಡಿ ಎತ್ತರ, ಸಾಧಾರಣ ಶರೀರ, ಗೋಧಿ ಮೈಬಣ್ಣ, ಕೋಲು ಮುಖ, ದಪ್ಪನೆಯ ಮೂಗು, ಅಗಲವಾದ ಹಣೆ, ತಲೆಯಲ್ಲಿ ಸುಮಾರು 1.5 ಇಂಚು ಉದ್ದದ ಬಿಳಿ ಕೂದಲು, ಕುರುಚಲು ಬಿಳಿ ಗಡ್ಡ ಮೀಸೆ ಬಿಟ್ಟಿರುತ್ತಾರೆ. ಮೃತನ ವಾರಸುದಾರರ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆಯ ದೂ.ಸಂ: 0821–2516579, 9480802122 ಅನ್ನು ಸಂಪರ್ಕಿಸಬಹುದು.

ನೇಮಕ



ಮೈಸೂರು, ನ.30– ಕರ್ನಾಟಕ ಮಾದರ ಮಹಾಸಭಾದ ಅಧ್ಯಕ್ಷ ಡಾ.ಕೆ.ಹೆಚ್.ಮುನಿಯಪ್ಪ ಕರ್ನಾಟಕ ಮಾದರ ಮಹಾಸಭಾದ ಚಾಮರಾಜನಗರ ಜಿಲ್ಲಾಧ್ಯಕ್ಷರನ್ನಾಗಿ ಶಿವಮೂರ್ತಿ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತನ್ನು ಷೆಡ್ಯೂಲ್ ಸ್ವತ್ತಿನ ಹಾಲಿ ಮಾಲೀಕರಾದ ಮೈಸೂರು ಜಿಲ್ಲೆ, ಟಿ.ಎನ್.ಪುರ ತಾಲ್ಲೂಕು, ಅತ್ತಹಳ್ಳಿಯಲ್ಲಿ ವಾಸವಾಗಿರುವ ಸುಮಾರು 48 ವರ್ಷದ ಶ್ರೀಮತಿ.ಮಂಗಳಮ್ಮ ಮತ್ತು ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಾರಿಪುರ ಗ್ರಾಮದಲ್ಲಿ ವಾಸವಾಗಿರುವ ಶ್ರೀಮತಿ.ಸೌಮ್ಯ ಮತ್ತು ಇತರರಿಂದ ಶುದ್ಧ ಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ವ್ಯಕ್ತಿ/ವ್ಯಕ್ತಿಗಳಿಗೆ, ಸಂಘ, ಸಂಸ್ಥೆ, ಬ್ಯಾಂಕ್ ಇನ್ನಿತರರಿಂದ ಯಾವುದೇ ರೀತಿಯ ಹಕ್ಕು, ಆಸಕ್ತಿ, ಭಾದ್ಯತೆ, ಹಿತಾಸಕ್ತಿ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಸಂಬಂಧಪಟ್ಟ ದಾಖಲೆಗಳ ಸಹಿತ ಈ ಕೆಳಗೆ ತಿಳಿಸಲಾದ ಕಛೇರಿ ವಿಳಾಸಕ್ಕೆ ಪ್ರಕಟಣೆಯ ದಿನದಿಂದ 7(ಏಳು) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಬೇರೆ ಯಾರಿಗೂ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಕ್ರಯವನ್ನು ಪೂರ್ಣಗೊಳಿಸಲಾಗುವುದು. ನಿರ್ದಿಷ್ಟ ಅವಧಿ ಮುಗಿದ ನಂತರ ಬರುವ ಯಾವುದೇ ಆಕ್ಷೇಪಣೆ ಅಥವಾ ಹಕ್ಕುಗಳಿಗೆ ಅವಕಾಶವಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಹಾರೋಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.479/8 ರಲ್ಲಿರುವ ಬಾಬ್ತು ಒಟ್ಟು ಜಮೀನಿನ ವಿಸ್ತೀರ್ಣ 0.12 ಗುಂಟೆ ಪೂರ್ತಾ ಖುಷ್ಕಿ ಜಮೀನಿಗೆ ಚೆಕ್ಕುಬಂದಿ:– ಪೂರ್ವಕ್ಕೆ : ನಾಲೆ, ಪಶ್ಚಿಮಕ್ಕೆ : ಸರ್ಕಾರಿ ಓಣಿ, ಉತ್ತರಕ್ಕೆ : ನೀರು ಹರಿಯುವ ಹಳ್ಳ, ದಕ್ಷಿಣಕ್ಕೆ : ಮಹದೇವಮ್ಮರವರ ಜಮೀನು

Sd/- BALARAJ S.K., B.A., LL.B.
ADVOCATE, KAR 486/2008
#B-4, Beside T.T.L. College Saraswathi puram, MYSURU-09 Mob: 99454 14592
Date: 30.11.2025, ಮೈಸೂರು

ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಹಾಲು ಉತ್ಪನ್ನ ಘಟಕ, ಗೆಜ್ಜಲಗೆರೆ 571428

email:manmulpandi18@gmail.com ದೂರವಾಣಿ: 08232-295130

ಸಂಖ್ಯೆ:ಮಹಾಒ/ಶೇ.ತಾಂ/ಇ–ಪ್ರೊಕ್ಯೂರ್‌ಮೆಂಟ್/ಪಿ&ಐ–24/2025–26 ದಿನಾಂಕ: 27.11.2025

ತಾಂತ್ರಿಕ/ವಾಣಿಜ್ಯ ಟೆಂಡರ್ ಪ್ರಕಟಣೆ

ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯಾಪ್ತಿಯ ಶೇಖರಣೆ ಮತ್ತು ತಾಂತ್ರಿಕ ವಿಭಾಗದ ವಿವಿಧ ಶಾಖೆಗಳಿಗೆ ಅವಶ್ಯವಿರುವ ವಾಹನಗಳನ್ನು ದ್ವೈವಾರ್ಷಿಕ ಅವಧಿಗೆ ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಮತ್ತು ಮರುಟೆಂಡರ್ ಅನ್ನು ಆಹ್ವಾನಿಸಲಾಗಿದೆ

ಕ್ರ ಸಂ	ತಾಂತ್ರಿಕ /ವಾಣಿಜ್ಯ ಟೆಂಡರ್ ಪ್ರಕಟಣೆ ಸಂಖ್ಯೆ	ಮಾರ್ಗದ ಹೆಸರು	ಟೆಂಡರ್/ ಮರು ಟೆಂಡರ್	ಮಾರ್ಗಗಳ ಸಂಖ್ಯೆ
01	ಸಂಖ್ಯೆ:ಮಹಾಒ/ಶೇ.ತಾಂ / ಕ್ಷೇ.ಟೆಂಡರ್/ AH39/ Call–1/2025–26, ದಿನಾಂಕ:27.11.2025	ಉಪವ್ಯವಸ್ಥಾಪಕರು ಕ್ಷೇತ್ರಭೇಟಿ ಮಾರ್ಗಗಳು, ತುರ್ತು ಕರೆ ಭೇಟಿ ಮಾರ್ಗಗಳು ಮತ್ತು ದ್ರವಸಾರಜನಕ ಮತ್ತು ವೀರ್ಯನಳಿಕೆ ವಿತರಣಾ ಮಾರ್ಗ	ಟೆಂಡರ್	12
02	ಸಂಖ್ಯೆ:ಮಹಾಒ/ಶೇ.ತಾಂ/ ಕ್ಷೇ.ಟೆಂಡರ್/ Re-tender/ AH39/2025–26, ದಿನಾಂಕ: 27.11.2025	ಉಪವ್ಯವಸ್ಥಾಪಕರು ಕ್ಷೇತ್ರಭೇಟಿ ಮಾರ್ಗ ಮತ್ತು ತುರ್ತು ಕರೆ ಭೇಟಿ ಮಾರ್ಗಗಳು	ಮರು ಟೆಂಡರ್	06
03	ಸಂಖ್ಯೆ:ಮಹಾಒ/ಶೇ.ತಾಂ/ ಬಿ.ಎಂ.ಸಿ/ ಇ–ಪ್ರೊಕ್ಯೂರ್‌ಮೆಂಟ್/ 64/2025–26, ದಿನಾಂಕ: 27.11.2025	ಆರ್.ಎಂ.ಟಿ. ಮಾರ್ಗಗಳು	ಮರು ಟೆಂಡರ್	12
			ಟೆಂಡರ್	11
04	ಸಂಖ್ಯೆ:ಮಹಾಒ/ಶೇ.ತಾಂ ಇ–ಪ್ರೊಕ್ಯೂರ್‌ಮೆಂಟ್/ ಪಿ&ಐ–24/2025–26 ದಿನಾಂಕ: 27.11.2025	ಹಾಲು ಶೇಖರಣಾ ಮಾರ್ಗಗಳು	ಮರು ಟೆಂಡರ್	10
			ಟೆಂಡರ್	09

ಟೆಂಡರ್ ದಿನಾಂಕ: 1) ಇ–ಟೆಂಡರ್ ಲಭಿಸುವ ದಿನಾಂಕ: **01.12.2025** ರಿಂದ ದಿನಾಂಕ: **31.12.2025** ರ **13.00** ಗಂಟೆವರೆಗೆ 2) ಪ್ರೀಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ: **15.12.2025 ಮಧ್ಯಾಹ್ನ 12.00 ಗಂಟೆಗೆ** 3) ಟೆಂಡರ್ ಸಲ್ಲಿಸುವ /ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ: **31.12.2025 ರ ಸಂಜೆ 17.00 ಗಂಟೆವರೆಗೆ** 4) ತಾಂತ್ರಿಕ ಟೆಂಡರ್ (ಭಾಗ–1) ತೆರೆಯುವ ದಿನಾಂಕ ಮತ್ತು ಸಮಯ: **02.01.2026 ರ ಬೆಳಗ್ಗೆ 11.00 ಗಂಟೆಗೆ** 5) ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ತೆರೆಯುವ ಸ್ಥಳ: ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಆಡಳಿತ ಮಂಡಳಿ ಸಭಾಂಗಣ, ಟೆಂಡರ್ ಸಂಬಂಧ ನೀಡಬೇಕಾದ ಅರ್ಜಿ ಶುಲ್ಕ, ಇ.ಎಂ.ಡಿ. ಮೊತ್ತ ಮತ್ತು ಟೆಂಡರ್ ಷರತ್ತು/ನಿಬಂಧನೆಗಳಿಗಾಗಿ ವೆಬ್‌ಸೈಟ್ **www.kppp.karnataka.gov.in** ರಲ್ಲಿ ಗಮನಿಸುವುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಭಾವಪೂರ್ಣ ಶ್ರದ್ಧಾಂಜಲಿ




ಜನನ: 05-03-1924 **ಎ. ಮೈತ್ರೇಯಿ** ನಿಧನ 29-11-2025

ಶತಾಯುಷಿಗಳಾದ ಶ್ರೀಮತಿ ಎ. ಮೈತ್ರೇಯಿ (ಶತಾಯುಷಿ ಡಾ. ನಾಗಭೂಷಣ್‌ರವರ ಪುತ್ರಿ) ರವರು ದಿನಾಂಕ: 29.11.2025 ಶನಿವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ದಿನಾಂಕ: 05-03-1924 ರಂದು ಜನಿಸಿದ್ದ ಇವರು, ತಮ್ಮ ಉಪಸ್ಥಿತಿಯಲ್ಲಿ 101 ವರ್ಷಗಳ ಕಾಲ ಈ ಜಗತ್ತಿನಲ್ಲಿ ಅನುಗ್ರಹ ಪಾತ್ರರಾಗಿ ಜೀವಿಸಿದ್ದರು.

ದುಃಖತಪ್ತರು: ವೀರ್ ಮೋಹನ್, ಇಂದರ್ ಮೋಹನ್, ಪ್ರವೀಣ್ ಚಂದರ್ ಮತ್ತು ಮಯೂರ

ಭೂಶಾಂತಿ ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ.ಕೆ. ಬರಕ್ಕಿ ಸಿದ್ದಲಿಂಗಣ್ಣ
(ಕೆ. ಶಿವಲಿಂಗು)

ಇವರು ದಿನಾಂಕ: 21–11–2025 ಶುಕ್ರವಾರದಂದು ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ: 01–12–2025 ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸ್ಥಳ: ಶ್ರೀ ಮುರಳೇಶ್ವರ ದೇವಸ್ಥಾನ (ಕಾವೇರಿ ಸ್ಕೂಲ್ ಎದುರು) ಶಾಂತಿಧಾಮ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ತಲುಪದವರು ಇದನ್ನೇ ಆಹ್ವಾನವೆಂದು ಪರಿಗಣಿಸಿ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ಕನ್ನೇಗೌಡನ ಕೊಪ್ಪಲು ಶ್ರೀ ಮರುಳೇಶ್ವರ ದೇವಸ್ಥಾನದ ಧರ್ಮದರ್ಶಿ ಸಮಿತಿ (ರಿ.) ಕೆ.ಜಿ ಕೊಪ್ಪಲು, ಮೈಸೂರು.

ಭೋಜನಾ: ಮಧ್ಯಾಹ್ನ 12.30ಕ್ಕೆ